# ಕಮಲ ಪಥ

RNI No.:KARKAN/2023/84034 | ಸಂಪುಟ : 02 | ಸಂಚಿಕೆ : 08 | ನವೆಂಬರ್ 2024 | ಬೆಂಗಳೂರು | ₹ 10/-




# ವಕ್ಫ್ ಅಕ್ರಮ ಬಿಜೆಪಿ ಪ್ರತಿಭಟನೆ




ಗುಜರಾತ್‌ನಲ್ಲಿ ಆಯೋಜಿಸಿದ್ದ 'ಏಕತಾ ದಿವಸ' ಕಾರ್ಯಕ್ರಮದಲ್ಲಿ ಪ್ರಧಾನಿ ಶ್ರೀ ನರೇಂದ್ರ ಮೋದಿ



ಗುಜರಾತ್‌ನಲ್ಲಿ ಸೈನಿಕರೊಂದಿಗೆ ಪ್ರಧಾನಿ ಶ್ರೀ ನರೇಂದ್ರ ಮೋದಿ ದೀಪಾವಳಿ ಸಂಭ್ರಮಾಚರಣೆ



ರಾಷ್ಟ್ರೀಯ ಪದಾಧಿಕಾರಿಗಳ ಉಪಸ್ಥಿತಿಯಲ್ಲಿ ಸಕ್ರಿಯ ಸದಸ್ಯತ್ವ ಪಡೆದ ರಾಷ್ಟ್ರೀಯ ಅಧ್ಯಕ್ಷ ಶ್ರೀ ಜೆ.ಪಿ. ನಡ್ಡಾ



ಬಿಜೆಪಿ ರಾಜ್ಯ ಕಾರ್ಯಾಲಯ ಜಗನ್ನಾಥ ಭವನದಲ್ಲಿ ಆಯೋಜಿಸಿದ್ದ 'ಸಂಘಟನಾ ಪರ್ವ' ಕಾರ್ಯಾಗಾರದಲ್ಲಿ ಸದಸ್ಯತ್ವ ಅಭಿಯಾನದಲ್ಲಿ ಅಮೂಲ್ಯ ಯೋಗದಾನ ನೀಡಿದ ನಾಯಕರಿಗೆ ಸನ್ಮಾನ




ಬೆಂಗಳೂರು ಮಹಾನಗರ ವತಿಯಿಂದ ಸರ್ದಾರ್ ವಲ್ಲಭಭಾಯಿ ಪಟೇಲ್ ಹಾಗೂ ಬಿರ್ಸಾ ಮುಂಡಾ ರವರ ಜನ್ಮದಿನದ ಅಂಗವಾಗಿ ಆಯೋಜಿಸಿದ್ದ 'ಏಕತಾ ಓಟ'ದಲ್ಲಿ ಬಿಜೆಪಿ ನಾಯಕರು

# ನೂತನ ಕಾಯ್ದೆಯೊಂದೇ ಪರಿಹಾರ

ಕಾಂಗ್ರೆಸ್‌ನ ವೋಟ್‌ಬ್ಯಾಂಕ್ ರಾಜಕಾರಣದ ಕಾರಣದಿಂದ ದೇಶದಲ್ಲಿ ಹುಟ್ಟಿಕೊಂಡ ಕರಾಳ ಕಾನೂನುಗಳಲ್ಲಿ ಒಂದಾದ ವಕ್ಫ್ ಕಾನೂನು ಸಹ ದೇಶದ ಸಮಗ್ರ ಹಿತಕ್ಕಿಂತ, ಮುಸ್ಲಿಂ ಹಿತವನ್ನೇ ಪ್ರಾಧಾನ್ಯತೆ ಮಾಡಿಕೊಂಡ ಕಾಂಗ್ರೆಸ್ ಮಾಡಿದ ಅಪಸವ್ಯದ ಮತ್ತೊಂದು ಕೃತ್ಯ.

ದೇಶ ವಿಭಜನೆಯ ಸಂದರ್ಭದಲ್ಲಿ ಭಾರತ ಬಿಟ್ಟು ಹೋದ ಮುಸ್ಲಿಂರ ಆಸ್ತಿಗಳೆಲ್ಲವನ್ನೂ ವಕ್ಫ್ ಬೋರ್ಡ್‌ಗೆ ವರ್ಗಾಯಿಸುವ ಕೆಟ್ಟ ನಿರ್ಧಾರವನ್ನು ಅಂದಿನ ನೆಹರು ಸರ್ಕಾರ ತೆಗೆದುಕೊಂಡಿತು. ಇದಕ್ಕೆ ಪೂರಕವಾಗಿ 1954ರಲ್ಲಿ ವಕ್ಫ್ ಕರಾಳ ಕಾನೂನನ್ನು ಜಾರಿಗೆ ತರುವ ಮೂಲಕ ಕರ್ಮಕಾಂಡಗಳಿಗೆ ನಾಂದಿ ಹಾಡಿತು. ಆದರೆ ಅಂದೇ ವಕ್ಫ್ ಆಸ್ತಿ ನಿರ್ವಹಣೆಗೂ ಸೂಕ್ತವಾದ ಕಾನೂನುಗಳನ್ನು ಜಾರಿಗೆ ತಂದಿದ್ದರೆ, ಇಂದು ಈ ಪರಿಸ್ಥಿತಿ ಬರುತ್ತಿರಲಿಲ್ಲ. ಇದರ ಜೊತೆಗೆ 1995ರಲ್ಲಿ ವಕ್ಫ್ ಕಾಯ್ದೆಗೆ ಮತ್ತೊಂದು ತಿದ್ದುಪಡಿಯನ್ನು ತಂದು ಇಡೀ ವಕ್ಫ್ ಮಂಡಳಿಯ ಮೇಲೆ ದೇಶದ ಕಾನೂನು ಹಿಡಿತವನ್ನೇ ತಪ್ಪಿಸುವಂತಹ ಕರಾಳ ಕೃತ್ಯವನ್ನು ಕಾಂಗ್ರೆಸ್ ಸರ್ಕಾರ ಎಸಗಿಬಿಟ್ಟಿತು. ಅಯೋಧ್ಯೆಯ ಕಳಂಕಿತ ಕಟ್ಟಡ ಉರುಳಿದ ಕಾರಣದಿಂದ ಅಸಂತುಷ್ಟರಾಗಿದ್ದ ಮುಸ್ಲಿಂ ಜನಾಂಗವನ್ನು ಸಮಾಧಾನಿಸಲು ಅಂದಿನ ಪ್ರಧಾನಿ ಶ್ರೀ ನರಸಿಂಹರಾವ್ ಮುಸ್ಲಿಂ ಜನಾಂಗಕ್ಕೆ ಕೊಟ್ಟ ಬಳುವಳಿ ಇದಾಗಿತ್ತು.

ಈ ಕಾನೂನಿನ ತಿದ್ದುಪಡಿಯ ಕಾರಣದಿಂದ ದೇಶದ ಯಾವುದೇ ಆಸ್ತಿಯನ್ನು ವಕ್ಫ್ ತನ್ನದೆಂದು ದಾಖಲಿಸಿದರೆ ಅದನ್ನು ಪ್ರಶ್ನಿಸಲು ಅವಕಾಶವೇ ಇಲ್ಲದಂತಾಯಿತು. ತನ್ನದೆಂದು ಹಕ್ಕು ಸಾಧಿಸಿದ ಆಸ್ತಿಯ ಬಗ್ಗೆ, ಆಸ್ತಿ ಬಂದ ಮೂಲವನ್ನು ಸಲ್ಲಿಸಬೇಕೆಂಬ ನಿಯಮದಿಂದ ವಕ್ಫ್ ಬೋರ್ಡ್‌ನ್ನು ಹೊರಗಿಡಲಾಯಿತು. ವಕ್ಫ್ ಬೋರ್ಡ್ ವಿರುದ್ಧ ತನ್ನ ಹಕ್ಕನ್ನು ಸಾಧಿಸಲು ಹೊರಟ ಆಸ್ತಿಯ ಹಕ್ಕುದಾರ, ತಗಾದೆಯನ್ನು ಮುತುವಲ್ಲಿಗಳ ನೇತೃತ್ವದ ವಕ್ಫ್ ಬೋರ್ಡ್ ಟ್ರಿಬ್ಯೂನಲ್‌ನಲ್ಲಿಯೇ ಬಗೆಹರಿಸಿಕೊಳ್ಳಬೇಕೆಂಬ ಕಾನೂನು ಜಾರಿಯಾಯಿತು. ಇದಲ್ಲದೆ ಈ ವಕ್ಫ್ ಬೋರ್ಡ್ ಟ್ರಿಬ್ಯೂನಲ್‌ನ ತೀರ್ಪನ್ನು ಬೇರೆ ಕೋರ್ಟ್‌ನಲ್ಲಿ ಪ್ರಶ್ನಿಸುವ ಅವಕಾಶವೂ ಆಸ್ತಿ ಹಕ್ಕುದಾರನಿಗೆ ಇಲ್ಲದಂತಾಯಿತು.

**ಸಂಪಾದಕೀಯ**

ಈ ಕಾನೂನಿನ ಕಾರಣದಿಂದ ದೇಶದ ಎಲ್ಲೆಡೆ ತನಗೆ ಸೂಕ್ತ ಕಂಡ ಆಸ್ತಿಯನ್ನೆಲ್ಲಾ ತನ್ನದೆಂದು ವಕ್ಫ್ ಮಂಡಳಿ ಹಕ್ಕನ್ನು ಸಾಧಿಸಲು ಪ್ರಾರಂಭಿಸಿದ ಕಾರಣ ಇಂದು ಇಡೀ ದೇಶವೇ ಹತ್ತಿ ಉರಿಯುತ್ತಿದೆ. ದೇವಾಲಯಗಳು, ಸರ್ಕಾರಿ ಜಮೀನುಗಳು, ಮಠಮಾನ್ಯಗಳ ಆಸ್ತಿಗಳ ಮೇಲೂ ವಕ್ಫ್ ಬೋರ್ಡ್ ಹಕ್ಕನ್ನು ಪ್ರತಿಪಾದಿಸಲು ಪ್ರಾರಂಭಿಸಿದೆ. ಇಡೀ ವಕ್ಫ್ ಬೋರ್ಡ್ ಅಕ್ರಮಗಳನ್ನು ನಡೆಸುವ ತಾಣವಾಗಿದೆ. ಅಲ್ಲಾಗೆ ದಾನ ನೀಡಿದ ಆಸ್ತಿಯನ್ನು ವಾಪಸ್ ನೀಡಲು ಸಾಧ್ಯವಿಲ್ಲ ಎನ್ನುವ ಮುಸ್ಲಿಂ ಮತ್ತು ಕಾಂಗ್ರೆಸ್ ನಾಯಕರುಗಳೇ ವಕ್ಫ್ ಆಸ್ತಿ ಕಬಳಿಕೆಯಲ್ಲಿ ಮುಂಚೂಣಿಯಲ್ಲಿದ್ದಾರೆ.

ಇದೆಲ್ಲದಕ್ಕೂ ಅಂತ್ಯ ಹಾಡುವ ಕಾಲ ಬಂದೇ ಬಿಟ್ಟಿದೆ. ಈ ಕರಾಳ ಕಾನೂನನ್ನು ಕಡೆಗಾಣಿಸುವ ನಿಟ್ಟಿನಲ್ಲಿ ಪ್ರಧಾನಿ ಶ್ರೀ ನರೇಂದ್ರ ಮೋದಿ ನೇತೃತ್ವದ ಸರ್ಕಾರ ನೂತನ ಕಾಯ್ದೆ ಜಾರಿಗೊಳಿಸುವತ್ತ ದಿಟ್ಟ ಹೆಜ್ಜೆಯನ್ನಿಟ್ಟಿದೆ. ವಕ್ಫ್ ಬೋರ್ಡ್ ನೂತನ ಕಾಯ್ದೆ ಒಂದು ಕಾನೂನು ಮಾತ್ರವಲ್ಲ, ಅದು ದೇಶವನ್ನು, ದೇಶ ವಿರೋಧಿ ಶಕ್ತಿಗಳ ಕರಾಳ ಹಸ್ತದಿಂದ ರಕ್ಷಿಸುವ ಮಹತ್ತರವಾದ ಪ್ರಯತ್ನ. ದೇಶವನ್ನು ಪ್ರೀತಿಸುವ ಎಲ್ಲರೂ ಈ ಕಾಯ್ದೆಯ ಪರವಾಗಿ ನಿಲ್ಲುವುದು ಅತ್ಯಂತ ಅವಶ್ಯಕ. ಅದರಲ್ಲೂ ದೇಶ ಮೊದಲೆಂಬ ಸಂಘಟನೆಯ ಕಾರ್ಯಕರ್ತರಾದ ನಮಗೆಲ್ಲರಿಗೂ ಈ ಕಾಯ್ದೆಯ ಪರವಾಗಿ ಜನಜಾಗೃತಿ ಮೂಡಿಸುವುದು ನಮ್ಮೆಲ್ಲರ ಆದ್ಯ ಕರ್ತವ್ಯ.

ರಾಜ್ಯದ ಮೂರು ವಿಧಾನಸಭಾ ಉಪ ಚುನಾವಣೆಗಳು ಮುಗಿದಿವೆ. ಕಾಂಗ್ರೆಸ್ ನಾಯಕರುಗಳ ಹತಾಶ ಹೇಳಿಕೆಗಳು, ಅವರಿಗೇ ಮತ್ತಷ್ಟು ಮುಳುವಾಗುವ ಎಲ್ಲಾ ಸಾಧ್ಯತೆಗಳೂ ನಿಚ್ಚಳವಾಗಿವೆ. ವಕ್ಫ್ ಬಗೆಗಿನ ಸತ್ಯಾ ಸತ್ಯತೆಯನ್ನು ಜನರಿಗೆ ಮುಟ್ಟಿಸುವಲ್ಲಿ ಅತ್ಯಂತ ಕ್ರಿಯಾಶೀಲವಾಗಿ ತೊಡಗಿಸಿಕೊಂಡ ಬಿಜೆಪಿ ನಾಯಕತ್ವ ಹಾಗೂ ಕಾರ್ಯಕರ್ತನ ಬೆನ್ನಿಗೆ ನಿಲ್ಲಬೇಕಾಗಿರುವುದು ಪ್ರತಿಯೊಬ್ಬನ ಆದ್ಯತೆಯಾಗಬೇಕು. ಆ ನಿಟ್ಟಿನಲ್ಲಿಯೇ ಯೋಚನೆ ಮತ್ತು ಯೋಜನೆಗಳು ಎಲ್ಲರದ್ದಾಗಲಿ.

**(ಬಿದರೆ ಪ್ರಕಾಶ್)**
ಸಂಪಾದಕರು

# ಕಮಲ ಪಥ

**ಪ್ರಕಾಶಕರು**
ಹೆಚ್.ಎಸ್. ಗೋಪಿನಾಥ್
ಮೊ : 9341231253


**ಸಂಪಾದಕರು**
ಬಿದರೆ ಪ್ರಕಾಶ್
ಮೊ : 9513447961


## ಸುಭಾಷಿತ



**ನಿಮಗೆ ಮನಃಶಾಂತಿ ಬೇಕಾಗಿದ್ದರೆ ಇತರರಲ್ಲಿ ದೋಷ ಹುಡುಕಬೇಡಿ. ಸಾಧ್ಯವಾದಷ್ಟು ನಿಮ್ಮಲ್ಲಿ ಇರುವ ದೋಷಗಳನ್ನು ಕಂಡುಕೊಳ್ಳಿ**

**- ಶಾರದಾ ದೇವಿ**





**ಕಮಲ ಪಥ ಪತ್ರಿಕೆಗಾಗಿ ಸಂಪರ್ಕಿಸಿ :**
☎ : 08022041976, 23569999
ಅಜಿತ್‌ಶೆಟ್ಟಿ ಹೆರಂಜೆ 97430 91999
ಪದ್ಮಾವತಿ ಜೋಷಿ : 95380 20388
email : bjpkamalapatha@gmail.com

#7/6, 4ನೇ ತಿರುವು, ಸಿ.ಸಿ. ರಸ್ತೆ,
ಸರ್ವಜ್ಞನಗರ, ಕಾಕ್ಸ್ ಟೌನ್,
ಬೆಂಗಳೂರು 560 005




## ಈ ಸಂಚಿಕೆಯಲ್ಲಿ





06
**ವಕ್ಫ್ ತಿದ್ದುಪಡಿ ಮಸೂದೆ 2024**
(ಅಲ್ಪಸಂಖ್ಯಾತ ಸಚಿವಾಲಯ, ಭಾರತ ಸರಕಾರ)






18
**ಬ್ರಿಕ್ಸ್ ಶೃಂಗಸಭೆಯಲ್ಲಿ ಪ್ರಧಾನಿ ಮೋದಿ**
**ಭಯೋತ್ಪಾದನೆ ವಿರುದ್ಧ ಗುಡುಗು!!!**

- **ದೀವಟಿಗೆ :** ಆಲೂರು ವೆಂಕಟರಾವ್ ........ 05
- ಸತ್ಯಶೋಧನಾ ಸಮಿತಿಯ ವರದಿಯ ಸಾರಾಂಶ ........ 14
- ಪಾರ್ಟಿ ವಿತ್ ಡಿಫರೆನ್ಸ್ ಮತ್ತು ಸಂಘಟನಾ ಪರ್ವ ........ 21
- ಭಾಷೆಯ ಮೂಲಕ ಭಂಜಿಸುವ ಕಾರ್ಯ ........ 24
- **ಪುಸ್ತಕ ಪರಿಚಯ :** ಸಂವಿಧಾನ ಬದಲಾಯಿಸಿದ್ದ ಯಾರು? ........ 26
- ಸಂವಿಧಾನ ಬದಲಾಯಿಸಿದ್ದು ಯಾರು? ಪುಸ್ತಕ ಬಿಡುಗಡೆ ಕಾರ್ಯಕ್ರಮ ........ 28
- **ಹಿರಿಯ ಕಾರ್ಯಕರ್ತರ ಪರಿಚಯ ಮಾಲೆ:** ದಿ. ಚಂದ್ರಕಾಂತ ಸಿಂದೋಲ್ ........ 29
- ಮಾಸದ ಮಾಧುರ್ಯ 91ನೇ ಕಾರ್ಯಕ್ರಮದಲ್ಲಿ 'ಸಾಂಸ್ಕೃತಿಕ ಸಂಜೆ' ........ 31
- ಮನ್ ಕಿ ಬಾತ್ 'ಭಾರತದ ಪ್ರಗತಿ ಮತ್ತು ಸಾಮೂಹಿಕ ಮನೋಭಾವದ ಪ್ರತಿಬಿಂಬ ..32
- **ಮನ್ ಕಿ ಬಾತ್** – ಡಿಜಿಟಲ್ ಅಲರ್ಟ್ ........ 34

## ಕರ್ನಾಟಕ ಏಕತೆಯಲ್ಲಿ ಕನ್ನಡದ ಕುಲಪುರೋಹಿತ

# ಆಲೂರು ವೆಂಕಟರಾವ್

ಹರೀಶ್ ಆತ್ರೇಯ
ಕಾರ್ಯಕರ್ತರು



**ಕ**ನ್ನಡದ ಕುಲಪುರೋಹಿತ ಅಥವಾ ಕನ್ನಡದ ಪಿತಾಮಹ ಎಂದೇ ಕರೆಯಲ್ಪಡುವ ಆಲೂರು ವೆಂಕಟ ರಾಯರು, ಕರ್ನಾಟಕದ ಇತಿಹಾಸದಲ್ಲಿ ಪ್ರಮುಖರು. ಕನ್ನಡ ಮಾತನಾಡುವ ಪ್ರದೇಶಗಳನ್ನು ಒಗ್ಗೂಡಿಸುವ ಉದ್ದೇಶಕ್ಕಾಗಿ ಅವರ ಬದುಕಿನ ಸಮರ್ಪಣೆಯು ಆಧುನಿಕ ಕರ್ನಾಟಕಕ್ಕೆ ಅಡಿಪಾಯವನ್ನು ಹಾಕಿತು. ವಿವಿಧ ಆಡಳಿತಗಳ ಅಡಿಯಲ್ಲಿ ವಿವಿಧ ಪ್ರದೇಶಗಳಲ್ಲಿ ಚದುರಿ ಹೋಗಿದ್ದ ಕನ್ನಡ ಮಾತನಾಡುವ ಪ್ರದೇಶಗಳನ್ನು ಒಟ್ಟುಗೂಡಿಸುವಲ್ಲಿ ಅವರ ಅವಿರತ ಪ್ರಯತ್ನಗಳು ಪ್ರಮುಖವಾಗಿವೆ. ಆಲೂರರ ದೃಷ್ಟಿಕೋನ ಮತ್ತು ಕೊಡುಗೆಗಳು ಕನ್ನಡಿಗರಿಗೆ ಸ್ಫೂರ್ತಿ ನೀಡುತ್ತಲೇ ಇರುತ್ತವೆ. ಪ್ರಾತಃಸ್ಮರಣೀಯರಾದ ಆಲೂರರನ್ನು ರಾಜ್ಯೋತ್ಸವದ ಹೊಸ್ತಿಲಲ್ಲಿ ಮರೆಯುವುದು ಹೇಗೆ ಸಾಧ್ಯ.

### ಆರಂಭಿಕ ಜೀವನ ಮತ್ತು ಸ್ಫೂರ್ತಿ

ಇಂದಿನ ಕರ್ನಾಟಕದ ಧಾರವಾಡ ಜಿಲ್ಲೆಯಲ್ಲಿ ಜುಲೈ 12, 1880 ರಂದು ಜನಿಸಿದ ಆಲೂರು ವೆಂಕಟರಾವ್ ಅವರು ಕನ್ನಡ ಭಾಷೆ ಮತ್ತು ಸಂಸ್ಕೃತಿಯ ಮೇಲಿನ ಪ್ರೀತಿಯಿಂದ ಬೆಳೆದರು. ಆ ಸಮಯದಲ್ಲಿ ಬ್ರಿಟಿಷರ ಆಳ್ವಿಕೆಯಲ್ಲಿದ್ದ ಮದ್ರಾಸ್ ಪ್ರೆಸಿಡೆನ್ಸಿ, ಬಾಂಬೆ ಪ್ರೆಸಿಡೆನ್ಸಿ ಮತ್ತು ಮೈಸೂರು, ಹೈದರಾಬಾದ್ ಮತ್ತು ಇತರ ರಾಜಪ್ರಭುತ್ವದ ರಾಜ್ಯಗಳಲ್ಲಿ ಹಂಚಿಹೋಗಿದ್ದ ಕನ್ನಡ ಮಾತನಾಡುವ ಜನರು ಎದುರಿಸಿದ ಹೋರಾಟಗಳನ್ನು ಸೂಕ್ಷ್ಮವಾಗಿ ಗಮನಿಸುತ್ತಿದ್ದರು.

### ಸಾಹಿತ್ಯ ಮತ್ತು ಸಾಂಸ್ಕೃತಿಕ ಕೊಡುಗೆಗಳು

ಆಲೂರು ವೆಂಕಟರಾವ್ ಕೇವಲ ರಾಜಕೀಯ ಚಿಂತಕರಲ್ಲ; ಅವರು ಸಮೃದ್ಧ ಬರಹಗಾರರಾಗಿದ್ದರು ಮತ್ತು ಕನ್ನಡ ಸಾಹಿತ್ಯಕ್ಕಾಗಿ ಪ್ರತಿಪಾದಿಸುವ ಉತ್ಕಟ ಹೋರಾಟಗಾರಾಗಿದ್ದರು. 1903ರಲ್ಲಿ, ಅವರು ತಮ್ಮ ಹೆಗ್ಗುರುತೆನ್ನುವ ಕೃತಿಯಾದ 'ಕನ್ನಡ ನಾಡು' ಪ್ರಕಟಿಸಿದರು, ಇದು ಏಕೀಕೃತ ಕರ್ನಾಟಕದ ಬಗೆಗೆ ಅವರ ದೃಷ್ಟಿಕೋನವನ್ನು ತೋರಿಸುತ್ತದೆ. ವಿಶೇಷವಾಗಿ ಕನ್ನಡಿಗರ ಭ್ರಮನಿರಸನ(1915), 'ಕರ್ನಾಟಕ ಗತ ವೈಭವ (1917)', ಕರ್ನಾಟಕತ್ವದ ವಿಕಾಸ, ಶಿಕ್ಷಣ ಮೀಮಾಂಸೆ ಮುಂತಾದವು ಕರ್ನಾಟಕದ ಶ್ರೀಮಂತ ಪರಂಪರೆ ಮತ್ತು ಇತಿಹಾಸವನ್ನು ಎತ್ತಿ ತೋರಿಸುವ ಮೂಲಕ ಕನ್ನಡಿಗರನ್ನು ಒಗ್ಗೂಡಿಸುವಲ್ಲಿ ನಿರ್ಣಾಯಕ ಪಾತ್ರವನ್ನು ವಹಿಸಿದೆ. ತಮ್ಮ ಬರಹಗಳ ಮೂಲಕ ಅವರು ಕನ್ನಡ ಇತಿಹಾಸದಲ್ಲಿ ಕನ್ನಡಿಗರ ಹೆಮ್ಮೆಯನ್ನು ಪ್ರೇರೇಪಿಸಿದರು, ರಾಷ್ಟ್ರಕೂಟರು, ಚಾಲುಕ್ಯರು ಮತ್ತು ಹೊಯ್ಸಳರಂತಹ ಕನ್ನಡ ರಾಜವಂಶಗಳ ಸಾಧನೆಗಳನ್ನು ಒತ್ತಿಹೇಳಿದರು. ಸಾಂಸ್ಕೃತಿಕ ಇತಿಹಾಸಕ್ಕೆ ಬಲವಾದ ಸಂಪರ್ಕವು ಕನ್ನಡ ಮಾತನಾಡುವ ಜನರಲ್ಲಿ ಐಕ್ಯತೆಗೆ ಅಡಿಪಾಯವಾಗಿ ಕಾರ್ಯನಿರ್ವಹಿಸುತ್ತದೆ ಎಂದು ಅವರು ನಂಬಿದ್ದರು.

### ರಾಜಕೀಯ ಪ್ರಭಾವ ಮತ್ತು ಏಕೀಕರಣದ ಹಾದಿ

ಆಲೂರು ಅವರ ಪ್ರಯತ್ನಗಳು ಸಾಹಿತ್ಯ ಮತ್ತು ಸಾಂಸ್ಕೃತಿಕ ಸಮರ್ಥನೆಯನ್ನು ಮೀರಿವೆ. ಅವರು ಕರ್ನಾಟಕದ ರಾಜಕೀಯಲ್ಲಿ ಚಾಲಕ ಶಕ್ತಿಯಾಗಿದ್ದರು. ಭಾರತದಾದ್ಯಂತ ರಾಜಕಾರಣಿಗಳು, ಆಡಳಿತಗಾರರು ಮತ್ತು ಸಾಂಸ್ಕೃತಿಕ ನಾಯಕರೊಂದಿಗೆ ತೊಡಗಿಸಿಕೊಂಡರು. ಆಲೂರು ವೆಂಕಟರಾವ್ ಅವರು ಕರ್ನಾಟಕ ವಿದ್ಯಾವರ್ಧಕ ಸಂಘ ಮತ್ತು ಕರ್ನಾಟಕ ಸಾಹಿತ್ಯ ಪರಿಷತ್ತಿನಂತಹ ವಿವಿಧ ಕನ್ನಡ ಸಂಘಗಳನ್ನು ಒಟ್ಟುಗೂಡಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು, ಇದು ಏಕೀಕರಣದ ಕಾರಣವನ್ನು ಚರ್ಚಿಸಲು ಮತ್ತು ಉತ್ತೇಜಿಸಲು ವೇದಿಕೆಯಾಗಿ ಕಾರ್ಯನಿರ್ವಹಿಸಿತು. ಅವರ ಹೋರಾಟವು 1920 ರಲ್ಲಿ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ರಚನೆಗೆ ಅಡಿಪಾಯವನ್ನು ಹಾಕಿತು. ಅದರಲ್ಲಿ ಕರ್ನಾಟಕ ಏಕೀಕರಣವನ್ನು ಅದರ ಕಾರ್ಯಸೂಚಿಯ ಭಾಗವಾಗಿ ಸೇರಿಸಲಾಯಿತು. ಆಲೂರು ಅವರು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಸೇರಿದಂತೆ ವಿವಿಧ ವೇದಿಕೆಗಳಲ್ಲಿ ಕರ್ನಾಟಕ ಏಕೀಕರಣದ ಅಗತ್ಯವನ್ನು ದಣಿವರಿಯಿಲ್ಲದೆ ಧ್ವನಿಸಿದರು, ಅವರ ಉದ್ದೇಶವನ್ನು ಬೆಂಬಲಿಸಲು ಅನೇಕ ಪ್ರಮುಖ ನಾಯಕರ ಮೇಲೆ ಪ್ರಭಾವ ಬೀರಿದರು. ಕನ್ನಡ ಸಂಸ್ಕೃತಿ ಮತ್ತು ಭಾಷೆಯ ಏಕತೆ ಮತ್ತು ಬೆಳವಣಿಗೆಗೆ ಅಡ್ಡಿಯಾಗಿ, ಕನ್ನಡಿಗರಿಗೆ ಛಿದ್ರಗೊಂಡ ಪ್ರದೇಶದಂತೆ ಕಾಣುತ್ತಿದ್ದ ಪ್ರದೇಶಗಳನ್ನು ಕಂಡಿದ್ದ ಆಲೂರು ಮತ್ತು ಏಕೀಕರಣ ಚಳವಳಿಯ ಅಸಂಖ್ಯಾತ ಇತರ ಬೆಂಬಲಿಗರ ದಶಕಗಳ ಪ್ರಯತ್ನದ ನಂತರ, ಅವರ ಕನಸು ನನಸಾಯಿತು. ನವೆಂಬರ್ 1, 1956 ರಂದು, ಭಾರತದ ರಾಜ್ಯ ಮರು ಸಂಘಟನೆಯ ಭಾಗವಾಗಿ ಏಕೀಕೃತ ಕರ್ನಾಟಕ ರಾಜ್ಯವನ್ನು (ಆಗ ಮೈಸೂರು ಎಂದು ಕರೆಯಲಾಯಿತು) ರಚಿಸಲಾಯಿತು. ಅವರ ಜೀವಮಾನದ ಸಮರ್ಪಣೆಯನ್ನು ಗೌರವಿಸುವ ಈ ಕಾರ್ಯಕ್ರಮವನ್ನು ಕರ್ನಾಟಕ ರಾಜ್ಯೋತ್ಸವ ಎಂದು ಆಚರಿಸಲಾಗುತ್ತದೆ.




# ವಕ್ಫ್ ತಿದ್ದುಪಡಿ ಮಸೂದೆ 2024

## (ಅಲ್ಪಸಂಖ್ಯಾತ ಸಚಿವಾಲಯ, ಭಾರತ ಸರಕಾರ)

ಆಗಸ್ಟ್ 8, 2024 ರಂದು, ವಕ್ಫ್ (ತಿದ್ದುಪಡಿ) ಮಸೂದೆ, 2024 ಮತ್ತು ಮುಸಲ್ಮಾನ್ ವಕ್ಫ್ (ರದ್ದತಿ) ಮಸೂದೆ, 2024, ವಕ್ಫ್ ಮಂಡಳಿಯ ಕೆಲಸವನ್ನು ಸುಗಮಗೊಳಿಸಲು ಮತ್ತು ವಕ್ಫ್ ಆಸ್ತಿಗಳ ಸಮರ್ಪಕ ನಿರ್ವಹಣೆಯನ್ನು ಮಾಡುವ ಸಲುವಾಗಿ ಎರಡು ಮಸೂದೆಗಳನ್ನು ಲೋಕಸಭೆಯಲ್ಲಿ ಮಂಡಿಸಲಾಯಿತು.

ವಕ್ಫ್ (ತಿದ್ದುಪಡಿ) ಮಸೂದೆ, 2024, ವಕ್ಫ್ ಆಸ್ತಿಗಳ ವ್ಯವಸ್ಥೆ ಮತ್ತು ನಿರ್ವಹಣೆಯಲ್ಲಿನ ಸಮಸ್ಯೆಗಳು ಮತ್ತು ಸವಾಲುಗಳನ್ನು ನಿವಾರಿಸಲು ವಕ್ಫ್ ಕಾಯಿದೆ 1995ರ ತಿದ್ದುಪಡಿ ಮಾಡುವ ಗುರಿಯನ್ನು ಹೊಂದಿದೆ. ತಿದ್ದುಪಡಿ ಮಸೂದೆಯು ಭಾರತದಲ್ಲಿ ವಕ್ಫ್ ಆಸ್ತಿಗಳ ಆಡಳಿತ ಮತ್ತು ನಿರ್ವಹಣೆಯನ್ನು ಸುಧಾರಿಸಲು ಪ್ರಯತ್ನಿಸುತ್ತದೆ. ಹಿಂದಿನ ಕಾಯಿದೆಯ ನ್ಯೂನತೆಗಳನ್ನು ನಿವಾರಿಸುವುದು ಮತ್ತು ಕಾಯಿದೆಯ ಮರುನಾಮಕರಣ, ವಕ್ಫ್‌ನ ವ್ಯಾಖ್ಯಾನಗಳನ್ನು ನವೀಕರಿಸುವುದು, ನೋಂದಣಿ ಪ್ರಕ್ರಿಯೆಯನ್ನು ಸುಧಾರಿಸುವುದು ಮತ್ತು ವಕ್ಫ್ ದಾಖಲೆಗಳನ್ನು ನಿರ್ವಹಿಸುವಲ್ಲಿ ತಂತ್ರಜ್ಞಾನದ ಪಾತ್ರವನ್ನು ಹೆಚ್ಚಿಸುವುದು ಮುಂತಾದ ಬದಲಾವಣೆಗಳನ್ನು ಪರಿಚಯಿಸುವ ಮೂಲಕ ವಕ್ಫ್ ಮಂಡಳಿಗಳ ಕಾರ್ಯಕ್ಷಮತೆಯನ್ನು ಹೆಚ್ಚಿಸುವ ಉದ್ದೇಶ ಹೊಂದಿದೆ.

ಮುಸಲ್ಮಾನ್ ವಕ್ಫ್ (ರದ್ದತಿ) ಮಸೂದೆ, 2024ರ ಪ್ರಾಥಮಿಕ ಉದ್ದೇಶವೆಂದರೆ ಮುಸಲ್ಮಾನ್ ವಕ್ಫ್ ಕಾಯಿದೆ, 1923, ವಸಾಹತುಶಾಹಿ ಯುಗದ ಶಾಸನವನ್ನು ರದ್ದುಗೊಳಿಸುವುದು, ಇದು ಆಧುನಿಕ ಭಾರತದಲ್ಲಿ ವಕ್ಫ್ ಆಸ್ತಿಗಳನ್ನು ನಿರ್ವಹಿಸಲು ಅಸಮರ್ಪಕವಾಗಿದೆ. ವಕ್ಫ್ ಕಾಯಿದೆ, 1995ರ ಅಡಿಯಲ್ಲಿ ವಕ್ಫ್ ಆಸ್ತಿಗಳ ಆಡಳಿತ ಮತ್ತು ನಿರ್ವಹಣೆಯಲ್ಲಿ ಏಕರೂಪತೆ, ಪಾರದರ್ಶಕತೆ ಮತ್ತು ಹೊಣೆಗಾರಿಕೆಯನ್ನು ಹೆಚ್ಚಿಸುವ ಉದ್ದೇಶ ಹೊಂದಿದೆ. ಹೀಗಾಗಿ ಈ ಅನಗತ್ಯ ಕಾನೂನಿನ ಕಾರಣ ಉಂಟಾದ ಅಸಂಗತತೆಗಳು ಮತ್ತು ಗೊಂದಲಗಳನ್ನು ಸರಿಪಡಿಸುವುದು ಈ ತಿದ್ದುಪಡಿ ವಿಧೇಯಕದ ಉದ್ದೇಶವಾಗಿದೆ

ಪ್ರಸ್ತುತ ವಕ್ಫ್ (ತಿದ್ದುಪಡಿ) ಮಸೂದೆ, 2024 ಅನ್ನು ಜಂಟಿ ಸದನ ಸಮಿತಿಗೆ ವರ್ಗಾಯಿಸಲಾಗಿದೆ.




# ವಕ್ಫ್‌ಗೆ ಸಂಬಂಧಿಸಿದ ಪ್ರಶ್ನೆ – ಉತ್ತರಗಳು

### 'ವಕ್ಫ್' ಎಂದರೇನು?

ವಕ್ಫ್ ಎನ್ನುವುದು ಇಸ್ಲಾಮಿಕ್ ಕಾನೂನಿನ ಅಡಿಯಲ್ಲಿ ಧಾರ್ಮಿಕ ಅಥವಾ ದಾನದತ್ತಿ ಉದ್ದೇಶಗಳಿಗಾಗಿ ಪ್ರತ್ಯೇಕವಾಗಿ ಮೀಸಲಾದ ಆಸ್ತಿಗಳನ್ನು ಸೂಚಿಸುತ್ತದೆ. ಮತ್ತು ಆಸ್ತಿಯ ಯಾವುದೇ ಇತರ ಬಳಕೆ ಅಥವಾ ಮಾರಾಟವನ್ನು ನಿಷೇಧಿಸಲಾಗಿದೆ. ವಕ್ಫ್ ಎಂದರೆ ಆಸ್ತಿಯ ಮಾಲೀಕತ್ವವನ್ನು ಈಗ ವಕ್ಫ್ ಮಾಡುವ ವ್ಯಕ್ತಿಯಿಂದ ಪಡೆದು ಅಲ್ಲಾಹುವಿನ (ದೇವರ) ಹೆಸರಿಗೆ ವರ್ಗಾಯಿಸುವುದು. ವಕ್ಫ್ ರಚಿಸುವ ವ್ಯಕ್ತಿಗೆ 'ವಾಕಿಫ್' ಅನ್ನುತ್ತಾರೆ. ವಕ್ಫ್ ಆಸ್ತಿಗಳು ಅಲ್ಲಾಗೆ ಸೇರಿದ್ದರೂ, ಭೌತಿಕವಾಗಿ ವಕ್ಫ್ ಆಸ್ತಿಯನ್ನು ನಿರ್ವಹಿಸಲು 'ವಾಕಿಫ್' 'ಮುತವಲ್ಲಿ'ಯನ್ನು ನೇಮಿಸುತ್ತಾನೆ. ವಕ್ಫ್ ಎಂದು ಗೊತ್ತುಪಡಿಸಿದ ನಂತರ, ಆ ಆಸ್ತಿಯ ಮಾಲೀಕತ್ವವನ್ನು ವಕ್ಫ್ (ವಾಕಿಫ್) ಮಾಡುವ ವ್ಯಕ್ತಿಯಿಂದ ಅಲ್ಲಾಗೆ ವರ್ಗಾಯಿಸಲಾಗುತ್ತದೆ, ಅದನ್ನು ಬದಲಾಯಿಸಲಾಗುವುದಿಲ್ಲ.

### 'ವಕ್ಫ್' ಪರಿಕಲ್ಪನೆಯ ಮೂಲ ಯಾವುದು?

ಭಾರತದಲ್ಲಿ, ದೆಹಲಿ ಸುಲ್ತಾನರ ಕಾಲದಲ್ಲಿ ವಕ್ಫ್ ವ್ಯವಸ್ಥೆ ಚಾಲ್ತಿಯಲ್ಲಿ ಇದ್ದ ಕುರುಹುಗಳು ಸಿಗುತ್ತವೆ. ಸುಲ್ತಾನ್ ಮುಯಿಜುದ್ದೀನ್ ಸಾಮ್ ಘೋರ್ ಮುಲ್ತಾನ್‌ನ ಜಾಮಾ ಮಸೀದಿ ಪರವಾಗಿ ಎರಡು ಗ್ರಾಮಗಳನ್ನು ಸಮರ್ಪಿಸಿ ಅದರ ಆಡಳಿತವನ್ನು ಶೈಖುಲ್ ಇಸ್ಲಾಂಗೆ ಹಸ್ತಾಂತರಿಸಿದ. ದೆಹಲಿ ಸುಲ್ತಾನರು ಮತ್ತು ನಂತರದ ಇಸ್ಲಾಮಿಕ್ ರಾಜವಂಶಗಳು ಭಾರತದಲ್ಲಿ ಪ್ರವರ್ಧಮಾನಕ್ಕೆ ಬಂದಂತೆ, ವಕ್ಫ್ ಆಸ್ತಿಗಳ ಸಂಖ್ಯೆ ಹೆಚ್ಚುತ್ತಲೇ ಹೋಯಿತು.

19ನೇ ಶತಮಾನದ ಉತ್ತರಾರ್ಧದಲ್ಲಿ ಬ್ರಿಟೀಷರ ಆಡಳಿತದಲ್ಲಿ ಭಾರತದಲ್ಲಿ ವಕ್ಫ್‌ಗಳ ಉಚ್ಚಾಟನೆಗೆ ಒಂದು ಪ್ರಕರಣ ದಾಖಲಾಗಿತ್ತು, ಬ್ರಿಟೀಷ್ ಕಾಲದಲ್ಲಿ ಲಂಡನ್‌ನ ಪ್ರಿವಿ ಕೌನ್ಸಿಲ್‌ನಲ್ಲಿ ವಕ್ಫ್ ಆಸ್ತಿಯ ವಿವಾದವನ್ನು ಆಲಿಸಿದ ನಾಲ್ವರು ಬ್ರಿಟೀಷ್ ನ್ಯಾಯಾಧೀಶರು ವಕ್ಫ್‌ನ್ನು ಅತ್ಯಂತ ಕೆಟ್ಟ ಮತ್ತು ಅತ್ಯಂತ ವಿನಾಶಕಾರಿ ಎಂದು ವಿಶ್ಲೇಷಿಸಿದರು, ವಕ್ಫ್‌ನ್ನು ಅಮಾನ್ಯವೆಂದು ಘೋಷಿಸಿದರು. ಆದಾಗ್ಯೂ, ನಾಲ್ವರು ನ್ಯಾಯಾಧೀಶರ ನಿರ್ಧಾರವನ್ನು ಭಾರತದಲ್ಲಿ ಇದ್ದ ಬ್ರಿಟೀಷ್ ಆಡಳಿತ ಅಂಗೀಕರಿಸಲಿಲ್ಲ. 1913 ರ ಮುಸಲ್ಮಾನ್ ವಕ್ಫ್ ಗುರುತಿಸುವ ಕಾಯಿದೆ ಭಾರತದಲ್ಲಿ ವಕ್ಫ್ ಸಂಸ್ಥೆಯನ್ನು ಉಳಿಸಿತು. ಅಂದಿನಿಂದ ಇಂದಿನವರೆಗೂ ವಕ್ಫ್‌ಗಳನ್ನು ಕಾನೂನಿಗೆ ಕಡಿವಾಣ ಹಾಕುವ ಪ್ರಯತ್ನ ನಡೆದಿಲ್ಲ.

### ವಕ್ಫ್ ಕಾಯಿದೆಯ ಮೂಲಕ ಭಾರತದಲ್ಲಿ ವಕ್ಫ್ ಆಸ್ತಿಗಳ ಆಡಳಿತದಲ್ಲಿನ ಪ್ರಮುಖ ಶಾಸನ ಬದಲಾವಣೆಗಳು ಮತ್ತು ಬೆಳವಣಿಗೆಗಳು

**ವಕ್ಫ್ ಕಾಯಿದೆ, 1954 :** ಭಾರತ ಸ್ವಾತಂತ್ರ್ಯಗೊಂಡ ನಂತರ ವಕ್ಫ್ ಮತ್ತಷ್ಟು ಬಲಿಷ್ಟವಾಯಿತು. 1954 ರ ವಕ್ಫ್ ಕಾಯ್ದೆಯು ವಕ್ಫ್‌ಗಳ ಈ ವ್ಯವಸ್ಥೆ ಮತ್ತಷ್ಟು ಕೇಂದ್ರೀಕೃತ ವ್ಯವಸ್ಥೆಯನ್ನಾಗಿ ಮಾಡಿತು. ಸೆಂಟ್ರಲ್ ವಕ್ಫ್ ಕೌನ್ಸಿಲ್ ಆಫ್ ಇಂಡಿಯಾ, 1954 ರ ವಕ್ಫ್ ಕಾಯ್ದೆಯಡಿಯಲ್ಲಿ ಶಾಸನಬದ್ಧ ಸಂಸ್ಥೆಯಾಗಿ ಸ್ಥಾಪಿಸಲಾಯಿತು. ಈ ಕೇಂದ್ರೀಯ ಸಂಸ್ಥೆಯು 1954ರ ವಕ್ಫ್ ಕಾಯ್ದೆಯ ವಕ್ಫ್‌ನ ಸೆಕ್ಷನ್ 9(1) ರ ನಿಬಂಧನೆಗಳ ಅಡಿಯಲ್ಲಿ ಸ್ಥಾಪಿಸಲಾದ ವಿವಿಧ ರಾಜ್ಯ ವಕ್ಫ್ ಮಂಡಳಿಗಳ ಅಡಿಯಲ್ಲಿ ಬರುವ ಕೆಲಸವನ್ನು ನೋಡಿಕೊಳ್ಳುತ್ತದೆ.

**1995ರ ವಕ್ಫ್ ಕಾಯಿದೆ :** 1995 ರಲ್ಲಿ ಮುಸ್ಲೀಮರಿಗೆ ಇನ್ನಷ್ಟು ಅನುಕೂಲಕರವಾಗಿ ಮಾಡಲಾಯಿತು, ಇದು ವಕ್ಫ್‌ನ್ನು ಅತಿಕ್ರಮಿಸುವ ಕಾನೂನನ್ನಾಗಿ ಮಾಡಿತು. ಭಾರತದಲ್ಲಿ ವಕ್ಫ್ ಆಸ್ತಿಗಳ (ಧಾರ್ಮಿಕ ದತ್ತಿ) ಆಡಳಿತವನ್ನು ನಿಯಂತ್ರಿಸಲು ವಕ್ಫ್ ಕಾಯಿದೆ, 1995ನ್ನು ಜಾರಿಗೊಳಿಸಲಾಗಿದೆ. ಇದು ವಕ್ಫ್ ಕೌನ್ಸಿಲ್, ರಾಜ್ಯ ವಕ್ಫ್ ಮಂಡಳಿಗಳು ಮತ್ತು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯ ಅಧಿಕಾರ ಮತ್ತು ಕಾರ್ಯಗಳಿಗೆ ಮತ್ತು ಮುತವಲ್ಲಿಯವರ ಕರ್ತವ್ಯಗಳಿಗೂ ಸಹ ಹೆಚ್ಚಿನ ಬಲ ಒದಗಿಸುತ್ತದೆ. ಈ ಕಾಯಿದೆಯು ವಕ್ಫ್ ನ್ಯಾಯಮಂಡಳಿಯ ಅಧಿಕಾರ ವ್ಯಾಪ್ತಿಯಲ್ಲಿರುತ್ತದೆ. ಅದು ತನ್ನ ಅಧಿ ಕಾರ ವ್ಯಾಪ್ತಿಯಲ್ಲಿರುವ ಸಿವಿಲ್ ನ್ಯಾಯಾಲಯಕ್ಕೆ ಪರ್ಯಾಯವಾಗಿ ಕಾರ್ಯನಿರ್ವಹಿಸುತ್ತದೆ.

ವಕ್ಫ್ ನ್ಯಾಯ ಮಂಡಳಿಗಳನ್ನು ಸಿವಿಲ್ ನ್ಯಾಯಾಲಯವೆಂದು ಪರಿಗಣಿಸಲಾಗುತ್ತದೆ ಮತ್ತು ಸಿವಿಲ್ ಪ್ರಕ್ರಿಯಾ ಸಂಹಿತೆ, 1908 ರ ಅಡಿಯಲ್ಲಿ ಸಿವಿಲ್ ನ್ಯಾಯಾಲಯವು ಚಲಾಯಿಸುವ ಎಲ್ಲಾ ಅಧಿಕಾರ ಮತ್ತು ಕಾರ್ಯಗಳನ್ನು ಇದು ಮಾಡುತ್ತದೆ. ಇಲ್ಲಿ ಈ ವಕ್ಫ್ ನ್ಯಾಯಮಂಡಳಿಯ ನಿರ್ಧಾರವೇ ಅಂತಿಮವಾಗಿರುತ್ತದೆ. ಈ ತೀರ್ಪಿನ ವಿರುದ್ಧ ದೂರುದಾರರಿಗೆ ದೇಶದ ಯಾವುದೇ ನ್ಯಾಯಾಲದಲ್ಲಿ ಪ್ರಶ್ನಿಸುವ ಅಧಿಕಾರ ಇರುವುದುಲ್ಲ. ಹೀಗಾಗಿ, ವಕ್ಫ್ ಆಸ್ತಿಗಳ ವಿಚಾರದಲ್ಲಿ ವಕ್ಫ್ ಟ್ರಿಬ್ಯೂನಲ್ ದೇಶದ ಯಾವುದೇ ಸಿವಿಲ್ ನ್ಯಾಯಾಲಯಳಿಗಿಂತ ಮರಮೋಚ್ಚ ಅಧಿಕಾರ ಹೊಂದಿರುತ್ತದೆ

**2013ರ ತಿದ್ದುಪಡಿಗಳು :** ವಕ್ಫ್ ನಿರ್ವಹಣೆಯನ್ನು ಹೆಚ್ಚು ಪರಿಣಾಮಕಾರಿಯಾಗಿ ಮತ್ತು ಪಾರದರ್ಶಕವಾಗಿಸಲು 2013 ರಲ್ಲಿ ಕಾಯಿದೆಯಯಲ್ಲಿ ಕೆಲವು ತಿದ್ದುಪಡಿಗಳನ್ನು ಮಾಡಲಾಗಿದೆ. ಆದಾಗ್ಯೂ, ಕಾಯಿದೆಯ ಅನುಷ್ಠಾನದ ಸಮಯದಲ್ಲಿ, ವಕ್ಫ್ ಆಡಳಿತವನ್ನು ಸುಧಾರಿಸುವಲ್ಲಿ ಕಾಯಿದೆಯು ಪರಿಣಾಮಕಾರಿ ಆಗಿಲ್ಲ ಎಂದು ಭಾವಿಸಲಾಗಿದೆ.

**ವಕ್ಫ್ ರದ್ದತಿ ಮಸೂದೆ, 2022 :** ಇದೇ ಉದ್ದೇಶದ ಅಡಿಯಲ್ಲಿ ಸ್ಥಾಪಿಸಲಾದ ವಕ್ಫ್ ಮತ್ತು ಇತರ ಮಾನ್ಯತೆ ಪಡೆದ ಧಾರ್ಮಿಕ ಘಟಕಗಳಂತಹ ಸಂಸ್ಥೆಗಳ ಜೊತೆಗಿರುವ ಅಸಮಾನತೆಯನ್ನು

**ವಕ್ಫ್ ಆಸ್ತಿಗಳನ್ನು ಹಿಂಪಡೆಯಬಹುದೇ?**

ಇಲ್ಲ, ವಕ್ಫ್ ನ ಸಂದರ್ಭದಲ್ಲಿ ಆಸ್ತಿಯ ಮಾಲೀಕತ್ವವನ್ನು ವಕ್ಫ್ ನಿಂದ ಅಲ್ಲಾಹನಿಗೆ ವರ್ಗಾಯಿಸಲಾಗುತ್ತದೆ ಮತ್ತು ಆಸ್ತಿಯನ್ನು ಅಲ್ಲಾಹನಿಂದ ಹಿಂತೆಗೆದುಕೊಳ್ಳಲಾಗುವುದಿಲ್ಲ, ಒಮ್ಮೆ ಆಸ್ತಿ ವಕ್ಫ್ ಆಗಿದ್ದರೆ, ಅದು ಯಾವಾಗಲೂ ವಕ್ಫ್ ಆಗಿ ಉಳಿಯುತ್ತದೆ, ಅದನ್ನು ಬದಲಾಯಿಸಲಾಗುವುದಿಲ್ಲ. ಒಮ್ಮೆ ಆಸ್ತಿಯನ್ನು ವಕ್ಫ್ ಎಂದು ಘೋಷಿಸಿದರೆ, ಅದು ಶಾಶ್ವತವಾಗಿ ಉಳಿಯುತ್ತದೆ. ಉದಾಹರಣೆಗಳಲ್ಲಿ ಬೆಂಗಳೂರು ಈದ್ಗಾ ಮೈದಾನವನ್ನು 1850 ರಿಂದ ವಕ್ಫ್ ಆಸ್ತಿ ಎಂದು ಹೇಳಲಾಗುತ್ತದೆ. ಅದೇ ರೀತಿ, ಮೊಘಲ್ ಆಡಳಿತದಲ್ಲಿ ಹಜ್ ಸಮಯದಲ್ಲಿ ಸಾರ್ೈ ಎಂದು ಐತಿಹಾಸಿಕವಾಗಿ ಬಳಸಿದ್ದರಿಂದ ಸೂರತ್ ಮುನ್ಸಿಪಲ್ ಕಾರ್ಪೊರೇಶನ್ ಕಟ್ಟಡದ ಹಕ್ಕನ್ನು ಸಾಧಿಸಲಾಯಿತು.

**ಎಲ್ಲಾ ಇಸ್ಲಾಮಿಕ್ ದೇಶಗಳು ವಕ್ಫ್ ಆಸ್ತಿಗಳನ್ನು ಹೊಂದಿದೆಯೇ?**

ಇಲ್ಲ, ಎಲ್ಲಾ ಇಸ್ಲಾಮಿಕ್ ದೇಶಗಳು ವಕ್ಫ್ ಆಸ್ತಿಗಳನ್ನು ಹೊಂದಿಲ್ಲ. ಇಸ್ಲಾಮಿಕ್ ದೇಶಗಳಾದ ಟರ್ಕಿ, ಲಿಬಿಯಾ, ಈಜಿಪ್ಟ್, ಸುಡಾನ್, ಲೆಬನಾನ್, ಸಿರಿಯಾ, ಜೋರ್ಡಾನ್, ಟುನೀಶಿಯಾ ಮತ್ತು ಇರಾಕ್‌ಗಳು ವಕ್ಫ್ ಗಳನ್ನು ಹೊಂದಿಲ್ಲ. ಆದಾಗ್ಯೂ, ಭಾರತದಲ್ಲಿ, ವಕ್ಫ್ ಬೋರ್ಡ್‌ಗಳು ಅತಿದೊಡ್ಡ ನಗರ ಭೂಮಾಲೀಕರು ಮಾತ್ರವಲ್ಲ, ಅವುಗಳನ್ನು ಕಾನೂನುಬದ್ಧವಾಗಿ ರಕ್ಷಿಸುವ ಕಾಯಿದೆಯನ್ನು ಸಹ ಹೊಂದಿವೆ.

**ವಕ್ಫ್ ಮಂಡಳಿಯು ಎಷ್ಟು ಆಸ್ತಿಗಳನ್ನು ನಿಯಂತ್ರಿಸುತ್ತದೆ?**

ವಕ್ಫ್ ಮಂಡಳಿಗಳು ಪ್ರಸ್ತುತ ಭಾರತದಾದ್ಯಂತ 9.4 ಲಕ್ಷ ಎಕರೆಗಳಷ್ಟು ವ್ಯಾಪಿಸಿರುವ 8.7 ಲಕ್ಷ ಆಸ್ತಿಗಳನ್ನು ನಿಯಂತ್ರಿಸುತ್ತವೆ ಮತ್ತು ಅಂದಾಜು ಮೌಲ್ಯ 1.2 ಲಕ್ಷ ಕೋಟಿ. ಭಾರತವು ವಿಶ್ವದಲ್ಲೇ ಅತಿ ದೊಡ್ಡ ವಕ್ಫ್ ಹಿಡುವಳಿ ಹೊಂದಿದೆ. ಇದಲ್ಲದೆ, ರಕ್ಷಣಾ ಇಲಾಖೆ ಮತ್ತು ಭಾರತೀಯ ರೈಲ್ವೆಯ ನಂತರ ವಕ್ಫ್ ಬೋರ್ಡ್ ಭಾರತದಲ್ಲಿ ಅತಿ ದೊಡ್ಡ ಭೂಮಾಲೀಕತ್ವ ಹೊಂದಿದೆ

**ವಕ್ಫ್ ಬೋರ್ಡ್ ಅಡಿಯಲ್ಲಿ ಎಷ್ಟು ವಕ್ಫ್ ಎಸ್ಟೇಟ್‌ಗಳನ್ನು ನೋಂದಾಯಿಸಲಾಗಿದೆ?**

- ವಕ್ಫ್ ಬೋರ್ಡ್ ಅಡಿಯಲ್ಲಿ 356,051 ವಕ್ಫ್ ಎಸ್ಟೇಟ್‌ಗಳು ನೋಂದಣಿಯಾಗಿವೆ.
- ವಕ್ಫ್ ಬೋರ್ಡ್‌ಗಳು ಎಷ್ಟು ಡಿಜಟಲೀಕರಣ ಮಾಡಿದ ದಾಖಲೆಗಳನ್ನು ಹೊಂದಿವೆ?
- ವಕ್ಫ್ ಬೋರ್ಡ್ ಇದುವರೆಗೆ 3,30,000 ಡಿಜಟಲೀಕರಣ ಮಾಡಿದ ದಾಖಲೆಗಳನ್ನು ಹೊಂದಿದೆ.

**ವಕ್ಫ್ ಮಂಡಳಿಗೆ ಸಂಬಂಧಿಸಿದ ತೊಡಕುಗಳೇನು?**

ವಕ್ಫ್ ಕಾನೂನಲ್ಲಿರುವ ಮೂಲಭೂತವಾದ ಸಮಸ್ಯೆ ಎಂದರೆ ಈ ವ್ಯವಸ್ಥೆಯ ನಿರ್ವಹಣೆಯ ಜವಾಬ್ದಾರಿ ಹೊತ್ತಿರುವ ವಕ್ಫ್ ಬೋರ್ಡ್, ಸೆಂಟ್ರಲ್ ವಕ್ಫ್ ಕೌನ್ಸಿಲ್ ಹಾಗೂ ಮುತವಲ್ಲಿಗಳು ಅವರ ಅಧಿಕಾರದ ದುರುಪಯೋಗ ಮಾಡಿಕೊಂಡರೆ ಅದನ್ನು ತೆಗೆಯಲು ಮೇಲೆ ತಿಳಿಸಲಾದ ವಕ್ಫ್ ಕಾಯಿದೆ, 1995 ಅನ್ನು ತಿದ್ದುಪಡಿ ಮಾಡುವಂತೆ ಡಿಸೆಂಬರ್ 8, 2023 ರಂದು ರಾಜ್ಯಸಭೆಯಲ್ಲಿ ಮಸೂದೆಯೊಂದನ್ನು ಮಂಡಿಸಲಾಯಿತು.

**ವಕ್ಫ್ ಮಂಡಳಿಗೆ ಸಂಬಂಧಿಸಿದ ತೊಡಕುಗಳೇನು?**

ವಕ್ಫ್ ಕಾನೂನಲ್ಲಿ ಇರುವ ಮೂಲಭುತವಾದ ಸಮಸ್ಯೆ ಎಂದರೆ ಈ ವ್ಯವಸ್ಥೆಯ ನಿರ್ವಹಣೆಯ ಜವಾಬ್ದಾರಿ ಹೊತ್ತಿರುವ ವಕ್ಫ್ ಬೋರ್ಡ್, ಸೆಂಟ್ರಲ್ ವಕ್ಫ್ ಕೌನ್ಸಿಲ್ ಹಾಗೂ ಮುತವಲ್ಲಿಗಳು ಅವರ ಅಧಿಕಾರದ ದುರುಪಯೋ ಮಾಡಿಕೊಂಡರೆ ಅದನ್ನು ತಡೆಯಲ್ಲಿ ಸಂವಿಧಾನಿಕವಾಗಿ ಹೆಚ್ಚಿನ ಅವಕಾಶಗಳು ಇಲ್ಲ, ಮುತವಲ್ಲಿಗಳು ಆಸ್ತಿಗಳ ಸರಿಯಾದ ಖಾತೆಗಳನ್ನು ನಿರ್ವಹಿಸದಿರುವುದು, ಸ್ಥಳೀಯ ಕಂದಾಯ ಅಧಿಕಾರಿಗಳೊಂದಿಗೆ ಪರಿಣಾಮಕಾರಿ ಸಮನ್ವಯದ ಕೊರತೆ, ವಕ್ಫ್ ಆಸ್ತಿಗಳ ಅತಿಕ್ರಮಣದ ತೆರವುಗೊಳಿಸುವುದು, ವಕ್ಫ್ ಆಸ್ತಿಗಳ ನೊಂದಾವಣೆ ಮತ್ತು ನಿರ್ವಹಣೆ, ವಿವಾದಗಳು ಮತ್ತು ದಾವೆಗಳ ಪರಿಣಾಮವಾಗಿ ಆಸ್ತಿಗಳನ್ನು ಕ್ಲೈಮ್ ಮಾಡಲು ವಕ್ಫ್ ಬೋರ್ಡ್‌ಗಳಿಗೆ ಇರುವ ವ್ಯಾಪಕವಾದ ಅಧಿಕಾರ, ಮುಂತಾದವು ಸಮಾಜದಲ್ಲಿ ಸಮುದಾಯದಲ್ಲಿ ಸಾಕಷ್ಟು ಗೊಂದಲಗಳನ್ನು ಹಾಗೂ ಸಮಸ್ಯೆಗಳನ್ನು ನಿರ್ಮಾಣ ಮಾಡಿದೆ.


**ಮಂಡಳಿಗೆ ಸಂಬಂಧಿಸಿದ ಸಮಸ್ಯೆಗಳು**

**ವಕ್ಫ್ ಆಸ್ತಿಗಳ ಅವ್ಯವಹಾರ :** ಒಮ್ಮೆ ವಕ್ಫ್, ಅದು ಎಂದಿಗೂ ವಕ್ಫ್ ಎನ್ನುವ ಮೂಲಭೂತ ನಿಯಮ ಅನೇಕ ವಿವಾದಗಳಿಗೆ ಕಾರಣವಾಗಿದೆ. ಅವುಗಳಲ್ಲಿ ಕೆಲವು, ಬೆಟ್ ದ್ವಾರಕಾದಲ್ಲಿನ ಎರಡು ದ್ವೀಪಗಳ ಮೇಲಿನ ವಕ್ಫ್ ಮಂಡಳಿಯ ಹಕ್ಕು ಸ್ವಾಮಿತ್ವ, ನ್ಯಾಯಾಲವೇ ಗೊಂದಲಮಯವಾಗಿದೆ ಎಂದು ಹೇಳಿದೆ.


**ದಾವೆ ಮತ್ತು ದುರುಪಯೋಗ :** ವಕ್ಫ್ ಆಸ್ತಿಯ ಮಾಲೀಕತ್ವದ ವಿವಾದಗಳು ಮತ್ತು ನೋಂದಣಿ ಮತ್ತು ಭೂಮಾಪನದಲಿ ಆಗುವ ವಿಳಂಬದಂತಹ ಸಮಸ್ಯೆಗಳಿಗೆ, ವಕ್ಫ್ ಆಸ್ತಿಗಳ ಮಾಲೀಕತ್ವದ ಮತ್ತು ಸ್ವಾಧೀನತೆಯ ಸಮಸ್ಯೆಗೆ ಸಂಬಂಧಿಸಿದಂತೆ ನೋಂದಣಿಯ ದೂರುಗಳು ಮತ್ತು ಕುಂದುಕೊರತೆಗಳು, ನ್ಯಾಯಮಂಡಳಿಯ ಕಾರ್ಯನಿರ್ವಹಣೆ ಮತ್ತು ಸಂಬಂಧಿತ ಇರುವ ದೊಡ್ಡ ಪ್ರಮಾಣದ ದಾವೆಗಳು ಇಂತಹಾ ಅನೇಕ ಸಮಸ್ಯೆಗಳನ್ನು ನಿವಾರಿಸುವಲ್ಲಿ ವಕ್ಫ್ ಕಾಯಿದೆ 1995 ಮತ್ತು ಅದರ 2013 ತಿದ್ದುಪಡಿಯು ಸಂಪೂರ್ಣವಾಗಿ ಸೋತಿದೆ ಎಂದು ಹೇಳಲಾಗಿದೆ.


**ನ್ಯಾಯಾಂಗದ ಮೇಲುಸ್ತುವಾರಿ ಇಲ್ಲ :** ವಕ್ಫ್ ನ್ಯಾಯಾಧಿಕರಣದ ತೀರ್ಪುಗಳ ಮೇಲೆ ನ್ಯಾಯಾಂಗದ ಮೇಲುಸ್ತುವಾರಿ ಇಲ್ಲದಿರುವದು, ವಕ್ಫ್ ನಿರ್ವಹಣೆಗೆ ಮತ್ತಷ್ಟು ತೊಡಕಾಗಿದೆ. ಉನ್ನತ ನ್ಯಾಯಾಂಗ ಸಂಸ್ಥೆಗೆ ಮೇಲ್ಮನವಿ ಸಲ್ಲಿಸುವ ಸಾಧ್ಯತೆಯಿಲ್ಲದೆ, ನ್ಯಾಯಾಧಿಕರಣದ ನಿರ್ಧಾರಗಳು ವಕ್ಫ್ ಆಸ್ತಿಗಳ ನಿರ್ವಹಣೆಯಲ್ಲಿ ಪಾರದರ್ಶಕತೆ ಕೊರತೆಯ ಕಾರಣದಿಂದ ಅದರ ಹೊಣೆಗಾರಿಕೆಯ ಬಗ್ಗೆ ಸಾಕಷ್ಟು ಪ್ರಶ್ನೆಗಳು ಎದ್ದಿವೆ.

## ವಕ್ಫ್ ಮಂಡಳಿಯ ಪ್ರಕಾರ ನೋಂದಾಯಿಸಲ್ಪಟ್ಟ ವಕ್ಫ್ ಎಸ್ಟೇಟ್‌ಗಳು




## ವಕ್ಫ್ ಮಂಡಳಿಯ ಪ್ರಕಾರ ನೋಂದಾಯಿಸಲಾದ ಸ್ಥಿರ ಆಸ್ತಿ



ತಡೆಯಲು ಸಂಘನಿಕವಾಗಿ ಹೆಚ್ಚಿನ ಅವಕಾಶಗಳಿಲ್ಲ. ಮುತವಲ್ಲಿಗಳು ಆಸ್ತಿಗಳ ಸರಿಯಾದ ಖಾತೆಗಳನ್ನು ನಿರ್ವಹಿಸದಿರುವುದು, ಸ್ಥಳೀಯ ಕಂದಾಯ ಅಧಿಕಾರಿಗಳೊಂದಿಗೆ ಪರಿಣಾಮಕಾರಿ ಸಮನ್ವಯದ ಕೊರತೆ, ವಕ್ಫ್ ಆಸ್ತಿಗಳ ಅತಿಕ್ರಮಣದ ತೆರವುಗೊಳಿಸುವುದು ಅತಿಕ್ರಮಣಗಳ ತೆರವು, ವಕ್ಫ್ ಆಸ್ತಿಗಳ ನೊಂದಾವಣೆ ಮತ್ತು ನಿರ್ವಹಣೆ, ವಿವಾದಗಳು ಮತ್ತು ದಾವೆಗಳ ಪರಿಣಾಮವಾಗಿ ಆಸ್ತಿಗಳನ್ನು ಕ್ಲೈಮ್ ಮಾಡಲು ವಕ್ಫ್ ಬೋರ್ಡ್‌ಗಳಿಗಿರುವ ವ್ಯಾಪಕವಾದ ಅಧಿಕಾರ, ಮುಂತಾದವು ಸಮಾಜದಲ್ಲಿ ಸಮುದಾಯದಲ್ಲಿ ಸಾಕಷ್ಟು ಗೊಂದಲಗಳನ್ನು ಹಾಗೂ ಸಮಸ್ಯೆಗಳನ್ನು ನಿರ್ಮಾಣ ಮಾಡಿದೆ.

**ಸಚಿವಾಲಯ ಸ್ವೀಕರಿಸಿದ ವಕ್ಫ್‌ಗೆ ಸಂಬಂಧಿಸಿದ ದೂರುಗಳು:**

ವಕ್ಫ್ ಭೂಮಿಯನ್ನು ಉದ್ದೇಶಪೂರ್ವಕವಾಗಿ ಅತಿಕ್ರಮಣ ಮತ್ತು ವಕ್ಫ್ ಆಸ್ತಿಗಳ ದುರುಪಯೋಗ ಕುರಿತು ಸಚಿವಾಲಯವು ಮುಸ್ಲಿಮರು ಮತ್ತು ಮುಸ್ಲಿಮೇತರರಿಂದ ಹೆಚ್ಚಿನ ಸಂಖ್ಯೆಯ ದೂರುಗಳು ಮತ್ತು ಪ್ರಾತಿನಿಧ್ಯಗಳನ್ನು ಸ್ವೀಕರಿಸಿದೆ. ಸಚಿವಾಲಯವು ಅದರ ಸ್ವರೂಪ ಮತ್ತು ಗಂಭಿರತೆಯ ಕುರಿತು ವಿಮರ್ಶೆ ಮಾಡಿದೆ.

ಏಪ್ರಿಲ್ 2023 ರಿಂದ ವಕ್ಫ್ ಅತಿಕ್ರಮಣ, ವಕ್ಫ್ ಭೂಮಿಯ ಅಕ್ರಮ ಮಾರಾಟ, ಸರ್ವೆ ಮತ್ತು ನೋಂದಣಿಯಲ್ಲಿ ವಿಳಂಬ ಮತ್ತು ವಕ್ಫ್ ಮಂಡಳಿಗಳು ಮತ್ತು ಮುತವಲ್ಲಿಗಳ ವಿರುದ್ಧದ ಅನೇಕ ದೂರುಗಳು ಮತ್ತು ಮನವಿಗಳು ಸಚಿವಾಲಯಕ್ಕೆ ಬಂದಿದೆ. ಹೀಗೆ AESíJ (ಕೇಂದ್ರೀಕೃತ ಸಾರ್ವಜನಿಕ ಕುಂದುಕೊರತೆ ಪರಿಹಾರ ಮತ್ತು ಮಾನಿಟರಿಂಗ್ ಸಿಸ್ಟಂ) ನಲ್ಲಿ ಬಂದ ದೂರುಗಳನ್ನು ಸಚಿವಾಲಯವು ವಿಶ್ಲೇಷಿಸಿದೆ ಮತ್ತು 566 ದೂರುಗಳಲ್ಲಿ 194 ವಕ್ಫ್ ಭೂಮಿಯನ್ನು ಅಕ್ರಮವಾಗಿ ಒತ್ತುವರಿ ಮತ್ತು ವರ್ಗಾವಣೆಗೆ ಸಂಬಂಧಿಸಿದ ದೂರುಗಳು ಮತ್ತು 93 ದೂರುಗಳು ಮುತವಲ್ಲಿ ಸೆರಿದಂತೆ ವಕ್ಫ್ ಬೋರ್ಡಿನ ಸದಸ್ಯರ ವಿರುದ್ಧವಾಗಿತ್ತು. ಇದಲ್ಲದೆ, ವಕ್ಫ್ ಆಸ್ತಿಗಳ ನೋಂದಣಿ ವಿಳಂಬ, ವಕ್ಫ್ ಮಂಡಳಿಯಿಂದ ಮಾರುಕಟ್ಟೆ ಮೌಲ್ಯಕ್ಕಿಂತ ಕಡಿಮೆ ಬಾಡಿಗೆ ಪಡೆಯುವುದು, ವಕ್ಫ್ ಭೂಮಿಯಲ್ಲಿ ವ್ಯಾಪಕವಾದ ಅತಿಕ್ರಮಣ, ವಿಧವೆಯರ ಪಿತ್ರಾರ್ಜಿತ ಹಕ್ಕುಗಳನ್ನು ಪೂರ್ಣಗೊಳಿಸದಿರುವುದು, ಸರ್ವೆ ಆಯುಕ್ತರಿಂದ ಸಮೀಕ್ಷೆ; ವಕ್ಫ್ ಆಸ್ತಿ ದಾಖಲೆಗಳ ಡಿಜಿಟಲೀಕರಣದ ನಿಧಾನಗತಿಯ ಪ್ರಗತಿ ಇತ್ಯಾದಿ ದೂರುಗಳೂ ಬಂದಿವೆ.

**ವಕ್ಫ್ ಆಡಳಿತದಲ್ಲಿ ಎಷ್ಟು ಪ್ರಕರಣಗಳು ಬಾಕಿ ಇವೆ?**

ಸಚಿವಾಲಯವು ನ್ಯಾಯಮಂಡಳಿಗಳ ಕಾರ್ಯನಿರ್ವಹಣೆಯ ವಿಧಾನ ಪರೀಕ್ಷಣೆಯಲ್ಲಿ 40,951 ಪ್ರಕರಣಗಳು ಬಾಕಿ ಇರುವುದು ಕಂಡುಬಂದಿದೆ. ಅವುಗಳಲ್ಲಿ 9,942 ಪ್ರಕರಣಗಳು ಮುಸ್ಲಿಂ ಸಮುದಾಯದಿಂದ ವಕ್ಫ್ ನಿರ್ವಹಿಸುವ ಸಂಸ್ಥೆಗಳ ವಿರುದ್ಧ ದಾಖಲಾಗಿವೆ. ಇದಲ್ಲದೆ, ಪ್ರಕರಣಗಳ ವಿಲೇವಾರಿಯಲ್ಲಿ ವಿಳಂಬದ ಜೊತೆಗೆ ನ್ಯಾಯಾಧಿಕರಣದ ನಿರ್ಧಾರಗಳ ಮೇಲೆ ನ್ಯಾಯಾಂಗದ ಯಾವುದೇ ಮೇಲುಸ್ತುವಾರಿಗೆ ಅವಕಾಶವಿಲ್ಲದ ಕಾರಣ ಪ್ರಕ್ರಿಯೆಯಲ್ಲಿ ಮತ್ತಷ್ಟು ವಿಳಂಬವಾಗುತ್ತಿದೆ.

**ಅತೃಪ್ತಿಕರ ಸರ್ವೆ ಕಾರ್ಯ :** ಸರ್ವೆ ಆಯುಕ್ತರು ನಡೆಸಿದ ವಕ್ಫ್ ಆಸ್ತಿಗಳ ಸರ್ವೆ ಅತೃಪ್ತಿಕರವಾಗಿತ್ತು. ಗುಜರಾತ್ ಮತ್ತು ಉತ್ತರಾಖಂಡ ರಾಜ್ಯಗಳಲ್ಲಿ ವಕ್ಫ್ ಆಸ್ತಿಗಳ ಸರ್ವೆ ಇನ್ನೂ ಪ್ರಾರಂಭಿಸಬೇಕಾಗಿದೆ. ಉತ್ತರಪ್ರದೇಶದಲ್ಲಿ 2014ರಲ್ಲಿ ಸರ್ವೆಗೆ ಆದೇಶ ನೀಡಲಾಗಿದ್ದು, ಇನ್ನೂ ಆರಂಭವಾಗಿಲ್ಲ. ಸರ್ವೆಗಳು ಪೂರ್ಣಗೊಳ್ಳದಿರುವ ಪ್ರಮುಖ ತೊಡಕುಗಳು ಎಂದರೆ ಸರ್ವೆ ಕಾರ್ಯದಲ್ಲಿ ಸರ್ವೆ ಆಯುಕ್ತರ ಪರಿಣತಿ ಇಲ್ಲದಿರುವುದು. ಇದಲ್ಲದೆ, ವಕ್ಫ್ ಆಸ್ತಿಗಳ ನೋಂದಣಿ ಕಾರ್ಯವನ್ನು ಸುಗಮವಾಗಿ ನಿರ್ವಹಿಸಲು ಕಂದಾಯ ಇಲಾಖೆಯೊಂದಿಗೆ ಸಮಸನ್ವಯತೆಯ ಕೊರತೆ.

**ಕಾನೂನಿನ ದುರುಪಯೋಗ :** ರಾಜ್ಯ ವಕ್ಫ್ ಮಂಡಳಿಗಳು, ಕೆಲವು ನಡೆತಗಳು ಸಮಾಜಗಳ ಮಡುವೆ ಮತ್ತು ಸಮುದಾಯದ ಒಳಗೆ ಅನೇಕ ಬಿನ್ನಾಭಿಪ್ರಾಯ ಹಾಗು ಮನಸ್ತಾಪಗಳಿಗೆ ಕಾರಣವಾಗಿರುವ ಅಂಶಗಳು ಗೋಚರವಾಗಿವೆ ವಕ್ಫ್ ಕಾಯಿದೆಯ ಸೆಕ್ಷನ್ 40 ಅನ್ನು ವಕ್ಫ್ ಆಸ್ತಿಯನ್ನಾಗಿ ಸ್ವಾಧೀನಪಡಿಸಿಕೊಳ್ಳಲು ಮತ್ತು ಘೋಷಿಸಲು ವ್ಯಾಪಕವಾಗಿ ದುರ್ಬಳಕೆ ಮಾಡಲಾಗಿದೆ. ಇದು ಅಗಾಧ ಸಂಖ್ಯೆಯ ವ್ಯಾಜ್ಯಗಳನ್ನು ಹುಟ್ಟುಹಾಕಿದೆ ಮಾತ್ರವಲ್ಲದೆ ಸಮುದಾಯಗಳ ನಡುವೆ ಬಿನ್ನಾಭಿಪ್ರಾಯವನ್ನೂ ಉಂಟುಮಾಡಿದೆ.

**ಸಾಂವಿಧಾನಿಕ ಸಿಂಧುತ್ವ :** ದೇಶದಲ್ಲಿ ಇನ್ನಾವುದೇ ಇತರ ಧರ್ಮಕ್ಕೆ ಇಲ್ಲದ ಒಂದು ವಿಶೇಷಾದಿಕಾರ ಕೇವಲ ಒಂದು ಧರ್ಮದ ಧಾರ್ಮಿಕ ಆಸ್ತಿಗಳಿಗೆ ಅನ್ವಯ ಆಗಿರುವುದನ್ನು, ಪ್ರಸ್ತುತ ದೆಹಲಿ ಹೈಕೋರ್ಟ್‌ನಲ್ಲಿ ಸಲ್ಲಿಸಲಾದ ಸಾರ್ವಜನಿಕ ಹಿತಾಸಕ್ತಿ ಅರ್ಜಿಗೆ ದೆಹಲಿ ಹೈಕೋರ್ಟ್ ಭಾರತ ಸಕಾರಕ್ಕೆ ಈ ಕುರಿತು ಉತ್ತರಿಸಲು ನೋಟೀಸ್ ಕೊಟ್ಟಿದೆ.

**ಅಸ್ತಿತ್ವದಲ್ಲಿರುವ ವ್ಯವಸ್ಥೆಯಲ್ಲಿ ಪ್ರಚಲಿತದಲ್ಲಿರುವ ಸಮಸ್ಯೆಗಳು/ ದೂರುಗಳು ಯಾವುವು?**

ವಕ್ಫ್ ಬೋರ್ಡ್‌ನ ಅಪಾರದರ್ಶಕತೆ ಮತ್ತು ಹೆಚ್ಚಿನ ಅಧಿಕಾರದಿಂದಾಗಿ ಸಾಮಾನ್ಯ ಜನರಿಗೆ ಉಂಟಾದ ತೊಂದರೆಗಳನ್ನು ಈ ಕೆಳಗಿನ ಸಂದರ್ಭಗಳಲ್ಲಿ ಕಾಣಬಹುದು:

**ತಿರುಚೆಂತುರೈ ಗ್ರಾಮ, ತಮಿಳುನಾಡು :** ವಕ್ಫ್ ಬೋರ್ಡ್ ಸಂಪೂರ್ಣ ಗ್ರಾಮವಾದ ತಿರುಚೆಂತುರೈ ತನ್ನ ಆಸ್ತಿ ಎಂದು ಹೇಳಿದ್ದರಿಂದ ತಮಿಳುನಾಡಿನ ರೈತ ರಾಜಗೋಪಾಲ್ ಸಾಲವನ್ನು ಮರುಪಾವತಿಸಲು ತನ್ನ ಕೃಷಿ ಭೂಮಿಯನ್ನು ಮಾರಾಟ ಮಾಡಲು ಸಾಧ್ಯವಾಗಲಿಲ್ಲ. ನಿರಾಕ್ಷೇಪಣಾ ಪ್ರಮಾಣಪತ್ರ (ಎನ್‌ಒಸಿ) ಸಿಗದೆ ಆರ್ಥಿಕ ಮತ್ತು ತೊಂದರೆ ಹಾಗು ಮಾನಸಿಕ ಕಿರುಕುಳಕ್ಕೆ ಕಾರಣವಾಯಿತು. ಐತಿಹಾಸಿಕವಾಗಿ ಈ ಗ್ರಾಮವನ್ನು 1956 ರಲ್ಲಿ ನವಾಬ್ ಅನ್ವರ್ದೀನ್ ಖಾನ್ ಅನ್ನುವವರು ವಕ್ಫ್ ಆಗಿ ದೇಣಿಗೆ ನೀಡಿದ್ದರು. ಇದರ ಅಕ್ರಮ ಮಾರಾಟ ಅಥವಾ ಅತಿಕ್ರಮಣಗಳನ್ನು ತಡೆಗಟ್ಟಲು, ವಕ್ಫ್ ಬೋರ್ಡ್ ವಕ್ಫ್ ಆಸ್ತಿಗಳಿಗೆ 'ಶೂನ್ಯ

ಮೌಲ್ಯ'ವನ್ನು ನಿಯೋಜಿಸಲು ನೋಂದಣಿ ಇಲಾಖೆಗೆ ವಿನಂತಿಸಿತು, ಪ್ರಸ್ತುತ ಅಲ್ಪಸಂಖ್ಯಾತ ವ್ಯವಹಾರಗಳ ಸಚಿವಾಲಯವು ಈ ವಿನಂತಿಯನ್ನು ತಡೆಹಿಡಿದಿದೆ. ಇದು ಸದ್ಯ ಇದು ರಾಜಕೀಯ ಗಲಾಟೆ ಹಾಗ್ತು ಕೋಮು ಉದ್ವಿಗ್ನತೆಗೆ ಕಾರಣವಾಗಿದೆ

**ಬೆಂಗಳೂರು ಈದ್ಗಾ ಮೈದಾನ ಪ್ರಕರಣ :** ಬೆಂಗಳೂರು ಈದ್ಗಾ ಮೈದಾನದ ವಿಚಾರದಲ್ಲಿ ಸರ್ಕಾರದ ಪ್ರಕಾರ ಯಾವುದೇ ಮುಸ್ಲಿಂ ಸಂಘಟನೆಗೆ ಹಕ್ಕುಪತ್ರ ವರ್ಗಾವಣೆಯಾಗದಿದ್ದರೂ, 1850ರಿಂದಲೂ ವಕ್ಫ್ ಆಸ್ತಿ ಎಂದು ವಕ್ಫ್ ಹೇಳಿಕೊಂಡಿರುವುದು ಈಗ ಶಾಶ್ವತವಾಗಿ ವಕ್ಫ್ ಆಸ್ತಿಯಾಗಿದೆ.

**ಸೂರತ್ ಮುನ್ಸಿಪಲ್ ಕಾರ್ಪೊರೇನ್ ಪ್ರಕರಣ :** ಇತ್ತೀಚೆಗೆ, ಗುಜರಾತ್ ವಕ್ಫ್ ಮಂಡಳಿಯು ಸೂರತ್ ಮುನ್ಸಿಪಲ್ ಕಾರ್ಪೊರೇನ್ ಕಟ್ಟಡದ ಮೇಲೆ ಹಕ್ಕು ಸಾಧಿಸಿತ್ತು, ಅದು ಈಗ ದಾಖಲೆಗಳನ್ನು ನವೀಕರಿಸದ ಕಾರಣ ವಕ್ಫ್‌ನ ಆಸ್ತಿಯಾಗಿದೆ. ವಕ್ಫ್ ಪ್ರಕಾರ, ಮೊಘಲರ ಕಾಲದಲ್ಲಿ ಸೂರತ್ ಮುನ್ಸಿಪಲ್ ಕಾರ್ಪೊರೇಷನ್ ಕಟ್ಟಡವು ಸರಾಯಿ ಆಗಿ ಹಜ್ ಪ್ರಯಾಣದ ಸಮಯದಲ್ಲಿ ಬಳಸಲಾಗುತ್ತಿತ್ತು. ಬ್ರಿಟಿರ ಆಳ್ವಿಕೆಯಲ್ಲಿ ಈ ಆಸ್ತಿ ಬ್ರಿಟ್ ಸಾಮ್ರಾಜ್ಯಕ್ಕೆ ಸೇರಿತ್ತು. ಆದಾಗ್ಯೂ, 1947 ರಲ್ಲಿ ಭಾರತಕ್ಕೆ ಸ್ವಾತಂತ್ರ್ಯ ಬಂದಾಗ, ಆಸ್ತಿಗಳನ್ನು ಭಾರತ ಸರ್ಕಾರಕ್ಕೆ ವರ್ಗಾಯಿಸಲಾಯಿತು. ಆದಾಗ್ಯೂ, ದಾಖಲೆಗಳನ್ನು ನವೀಕರಿಸದ ಕಾರಣ, ಎಸ್‌ಎಂಸಿ ಕಟ್ಟಡವು ನಂತರ ವಕ್ಫ್ ಆಸ್ತಿಯಾಯಿತು ಮತ್ತು ವಕ್ಫ್ ಬೋರ್ಡ್ ಹೇಳುವಂತೆ, ಒಮ್ಮೆ ವಕ್ಫ್ , ಯಾವಾಗಲೂ ವಕ್ಫ್ .

**ಬೆಟ್ ದ್ವಾರಕಾದಲ್ಲಿ ದ್ವೀಪಗಳು :** ದೇವಭೂಮಿ ದ್ವಾರಕಾದಲ್ಲಿರುವ ಎರಡು ದ್ವೀಪಗಳ ಮಾಲೀಕತ್ವದ ಮೇಲೆ ವಕ್ಫ್ ಮಂಡಳಿಯು ಗುಜರಾತ್ ಹೈಕೋರ್ಟ್‌ಗೆ ಅರ್ಜಿಯನ್ನು ಬರೆದಿದೆ ಎಂದು ದಿವ್ಯಾ ಭಾಸ್ಕರ್ ವರದಿ ಮಾಡಿದ್ದರು. ಗೊಂದಲಕ್ಕೊಳಗಾದ ಹೈಕೋರ್ಟ್ ನ್ಯಾಯಾಧೀಶರು ಅರ್ಜಿಯನ್ನು ಆಲಿಸಲು ನಿರಾಕರಿಸಿದರು ಮತ್ತು ಕೃಷ್ಣನಗರಿಯಲ್ಲಿ ವಕ್ಫ್ ಭೂಮಿಯ ಮೇಲೆ ಹೇಗೆ ಹಕ್ಕು ಸಾಧಿಸಬಹುದು ಎಂದು ಯೋಚಿಸಿ ಅದರ ಅರ್ಜಿಯನ್ನು ಪುನಃ ಪರಿಷ್ಕರಿಸಲು ಮಂಡಳಿಯನ್ನು ಕೇಳಿದರು.

**ಶಿವಶಕ್ತಿ ಸೊಸೈಟಿ, ಸೂರತ್ :** ಸೂರತ್‌ನಲ್ಲಿರುವ ಶಿವಶಕ್ತಿ ಸೊಸೈಟಿಯಲ್ಲಿ ಪ್ಲಾಟಿನ ಮಾಲೀಕರೊಬ್ಬರು ತಮ್ಮ ನಿವೇಶನವನ್ನು ಗುಜರಾತ್ ವಕ್ಫ್ ಬೋರ್ಡ್‌ನಲ್ಲಿ ನೋಂದಾಯಿಸಿ, ಅದನ್ನು ಮುಸ್ಲಿಮರಿಗೆ ಪ್ರಾರ್ಥನಾ ಸ್ಥಳವನ್ನಾಗಿ ಮಾಡಿದರು ಮತ್ತು ಜನರು ಪ್ರಾರ್ಥನೆಯನ್ನು ಮಾಡಲು ಪ್ರಾರಂಭಿಸಿದರು. ಇಂತಹಾ ಸಂದರ್ಭಗಳಲ್ಲಿ ವಕ್ಫ್ ಆ ಸೊಸೈಟಿಯಲ್ಲಿ ಉಳಿದ ಇನ್ಯಾರಿಗೂ ಮಾಹಿತಿ ನೀಡದೆ ಅಲ್ಲಿ ಯಾವಾಗ ಬೇಕಿದ್ದರೂ ಮಸೀದಿ ನಿರ್ಮಾಣ ಮಾಡಬಹುದು.

### ತಿದ್ದುಪಡಿ ಮಸೂದೆಗಳನ್ನು ಪರಿಚಯಿಸುವ ಮೊದಲು ಸಚಿವಾಲಯವು ಯಾವ ಕ್ರಮಗಳನ್ನು ತೆಗೆದುಕೊಂಡಿತು?

ಸಚಿವಾಲಯವು ವಕ್ಫ್ ಕಾಯಿದೆ, 1995 ರ ನಿಬಂಧನೆಗಳ ಪರಿಶೀಲನೆಯ ಪ್ರಕ್ರಿಯೆಯನ್ನು ಪ್ರಾರಂಭಿಸಿದೆ ಮತ್ತು ಸಂಭಂದಪಟ್ಟವರೊಂದಿಗೆ ಸಮಾಲೋಚನೆ ನಡೆಸಿದೆ. ಕಳೆದ ವರ್ಷ ಎರಡು ಸಭೆಗಳನ್ನು ನಡೆಸಲಾಯಿತು, ಒಂದು 24.07.23 ರಂದು ಲಕ್ನೋದಲ್ಲಿ ಮತ್ತು ಇನ್ನೊಂದು 20.07.23 ರಂದು ನವದೆಹಲಿಯಲ್ಲಿ. ಅಲ್ಲಿ ಈ ಕೆಳಗಿನ ವಿಷಯಗಳನ್ನು ಚರ್ಚಿಸಲಾಯಿತು, ಇದರಲ್ಲಿ ಸಂತ್ರಸ್ತರ ಸಮಸ್ಯೆಗಳನ್ನು ಪರಿಹರಿಸಲು ಕಾನೂನಿನಲ್ಲಿ ಸೂಕ್ತ ತಿದ್ದುಪಡಿಗಳನ್ನು ಮಾಡಲು ಒಮ್ಮತವು ಹೊರಹೊಮ್ಮಿತು. .

CWC ಮತ್ತು SWBS ಸಂಯೋಜನೆಯ ಬೇಸ್‌ನ್ನು ವಿಸ್ತರಿಸುವುದು

- ಮುತವಲ್ಲಿಯ ಪಾತ್ರ ಮತ್ತು ಜವಾಬ್ದಾರಿಗಳು
- ವಕ್ಫ್ ನ್ಯಾಯಮಂಡಳಿಗಳ ಮರು-ರಚನೆ
- ನೋಂದಣಿ ಪ್ರಕ್ರಿಯೆಯನ್ನು ಸುಧಾರಣೆ
- ಆಸ್ತಿಗಳ ಘೋಣೆ
- ವಕ್ಫ್ ಆಸ್ತಿಗಳ ಸಮೀಕ್ಷೆ
- ವಕ್ಫ್ ನಿರ್ವಹಣೆ
- ಮುತವಲ್ಲಿ ಅವರಿಂದ ವಿವರವನ್ನು ಸಲ್ಲಿಸುವುದು
- ವಾರ್ಷಿಕ ಲೆಕ್ಕಪತ್ರ ಸಲ್ಲಿಸುವಲ್ಲಿ ಸುಧಾರಣೆಗಳು
- ಆಸ್ತಿಗಳು/ ಮಿತಿ ಕಾಯಿದೆಗೆ ಸಂಬಂಧಿಸಿದ ನಿಬಂಧನೆಗಳ ಪರಿಶೀಲನೆ
- ವಕ್ಫ್ ಆಸ್ತಿಗಳ ವೈಜ್ಞಾನಿಕ ನಿರ್ವಹಣೆ

ಇದಲ್ಲದೆ, ಸೌದಿ ಅರೇಬಿಯಾ, ಈಜಿಪ್ಟ್, ಕುವೈತ್, ಓಮನ್, ಪಾಕಿಸ್ತಾನ, ಬಾಂಗ್ಲಾದೇಶ ಮತ್ತು ಟರ್ಕಿಯಂತಹ ದೇಶಗಳಲ್ಲಿ ನಡೆಯುತ್ತಿರುವ ವಕ್ಫ್ ನಿರ್ವಹಣೆಯ ಅಂತರರಾಷ್ಟ್ರೀಯ ವಿಧಾನಗಳನ್ನು ಸಚಿವಾಲಯವು ವಿಶ್ಲೇಷಿಸಿದೆ ಹಾಗು ಈ ದೇಶಗಳಲ್ಲಿ ವಕ್ಫ್ ಆಸ್ತಿಯನ್ನು ಸರಿಯಾದ ಕಾನೂನು ಮತ್ತು ಸರಕಾರಿ ನಿಯಂತ್ರಣದ ಸಂಸ್ಥೆಗಳ ಮೂಲಕ ಇದರ ನಿರ್ವಹಣೆ ಮಾಡುತ್ತಿರುವುದು ಗಮನಕ್ಕೆ ಬಂದಿದೆ

### ಸಚಿವಾಲಯವು ಯಾವ ಮಧ್ಯಸ್ಥಗಾರರನ್ನು ಸಂಪರ್ಕಿಸಿದೆ?

ಅಲ್ಪಸಂಖ್ಯಾತ ವ್ಯವಹಾರಗಳ ಸಚಿವಾಲಯವು ಇದಕ್ಕೆ ಸಂಭಂದಿಸಿದಂತೆ ಎಲ್ಲರೊಂದಿಗೆ ಸಮಾಲೋಚನೆ ನಡೆಸಿತು; ಸಾಚಾರ್ ಸಮಿತಿಯ ವರದಿ, ಜಂಟಿ ಸಂಸದೀಯ ಸಮಿತಿಗಳ (JPCs) ಅವಲೋಕನಗಳು, ಸಾರ್ವಜನಿಕ ಪ್ರತಿನಿಧಿಗಳು, ಮಾಧ್ಯಮಗಳು ಮತ್ತು ಸಾರ್ವಜನಿಕರು ವಕ್ಫ್ ಕಾಯಿದೆಯ ಅಧಿ ಕಾರಗಳ ದುರುಪಯೋಗ ಮತ್ತು ವಕ್ಫ್ ಸಂಸ್ಥೆಗಳಿಂದ ವಕ್ಫ್ ಆಸ್ತಿಗಳ ದುರ್ಬಳಕೆಯ ಬಗ್ಗೆ ಕಳವಳ ವ್ಯಕ್ತಪಡಿಸಿದ್ದಾರೆ. ಸಚಿವಾಲಯವು ರಾಜ್ಯ ವಕ್ಫ್ ಮಂಡಳಿಗಳೊಂದಿಗೂ ಈಕುರಿತು ಸಮಾಲೋಚನೆ ನಡೆಸಿದೆ.

### ಸಾಚಾರ್ ಸಮಿತಿಯ ಶಿಫಾರಸುಗಳೇನು?

ಸಾಚಾರ್ ಸಮಿತಿಯು ಈ ಆಸ್ತಿಗಳನ್ನು ಸಮರ್ಥ ಮತ್ತು ಮಾರುಕಟ್ಟೆಯ ಬಳಕೆಗೆ ಒಳಪಡಿಸಿದರೆ, ಅವು ಕನಿಷ್ಠ 10% ಆದಾಯವನ್ನು ಗಳಿಸಬಹುದು, ಅಂದರೆ ಸುಮಾರು 12,000 ಕೋಟಿ ರೂ. ಸಾಚಾರ್ ಸಮಿತಿಯು 2006 ರಲ್ಲಿ ತನ್ನ ವರದಿಯನ್ನು ಸಲ್ಲಿಸಿತು ಮತ್ತು ವಕ್ಫ್ ನಿರ್ವಹಣೆಯನ್ನು ಸುಧಾರಿಸಲು ವಿವಿಧ ಕ್ರಮಗಳನ್ನು ಶಿಫಾರಸು ಮಾಡಿದೆ.:

1. ಮುತವಲ್ಲಿಗಳ ನಿಯಂತ್ರಣ ಮತ್ತು ಕಾರ್ಯನಿರ್ವಹಣೆಯ ಅಗತ್ಯ,
2. ದಾಖಲೆಗಳ ಸಮರ್ಥ ನಿರ್ವಹಣೆ,
3. ವಕ್ಫ್ ನಿರ್ವಹಣೆಯಲ್ಲಿ ಮುಸ್ಲಿಮೇತರ ತಾಂತ್ರಿಕ ಪರಿಣತಿಯನ್ನು ಸೇರಿಸುವುದು,
4. ಕೇಂದ್ರೀಯ ವಕ್ಫ್ ಬೋರ್ಡ್ ಮತ್ತು ಪ್ರತಿ ರಾಜ್ಯ ವಕ್ಫ್ ಬೋರ್ಡ್‌ನಲ್ಲಿ ಇಬ್ಬರು ಮಹಿಳಾ ಸದಸ್ಯರನ್ನು ಸೇರಿಸಲು ವಕ್ಫ್ ಮಂಡಳಿಗಳನ್ನು ಆಡಳಿತಾತ್ಮಕವಾಗಿ ಬಲಪಡಿಸಲು ಸಾಂಸ್ಥಿಕ ಸುಧಾರಣೆಗಳು,
5. SWC/SWBಗಳಲ್ಲಿ ಜಂಟಿ ಕಾರ್ಯದರ್ಶಿ ಮಟ್ಟದ ಅಧಿ ಕಾರಿಯ ನೇಮಕಾತಿ,
6. ವಕ್ಫ್ ನ್ನು ಹಣಕಾಸು ಲೆಕ್ಕಪರಿಶೋಧನೆಯ ಯೋಜನೆಯಡಿ ತನ್ನಿ.

### ಜಂಟಿ ಸಂಸದೀಯ ಸಮಿತಿಯ ಶಿಫಾರಸುಗಳು ಯಾವುವು?

ವಕ್ಫ್ ಕುರಿತ ಜಂಟಿ ಸಂಸದೀಯ ಸಮಿತಿಯ ವರದಿಯನ್ನು 4ನೇ ಮಾರ್ಚ್ 2008 ರಂದು ರಾಜ್ಯಸಭೆಯಲ್ಲಿ ಮಂಡಿಸಲಾಯಿತು:

1. ವಕ್ಫ್ ಮಂಡಳಿಗಳ ಸಂಯೋಜನೆಯ ಮರು-ವ್ಯಾಂಪಿಂಗ್,
2. SWB ಗಳಿಗೆ CEO ಆಗಿ ಹಿರಿಯ ಮಟ್ಟದ ಅಧಿ ಕಾರಿಯನ್ನು ನೇಮಿಸುವುದು,
3. ವಕ್ಫ್ ಆಸ್ತಿಗಳ ಅನಧಿ ಕೃತ ಪರಾಭಾರೆಯ ವಿರುದ್ಧ ಕಠಿಣ ಕ್ರಮ,
4. ಮುತವಲ್ಲಿ ತನ್ನ ಕರ್ತವ್ಯಗಳನ್ನು ಅನುಸರಿಸಲು ವಿಫಲವಾದರೆ ಅವನಿಗೆ ಕಠಿಣ ಶಿಕ್ಷೆ;.
5. ರಿಟ್ ಅಧಿಕಾರ ವ್ಯಾಪ್ತಿಯಡಿಯಲ್ಲಿ ಕೆಲವು ವಿಷಯಗಳನ್ನು ಸರ್ವೋಚ್ಚ ನ್ಯಾಯಾಲಯದಿಂದ ಅಭಿಪ್ರಾಯವನ್ನೂ ಪಡೆಯುವುದು.
6. ವಕ್ಫ್ ಮಂಡಳಿಗಳ ಗಣಕೀಕರಣ ಮತ್ತು CWC ಯಲ್ಲಿ ಶಿಯಾ ಸಮುದಾಯದ ಸಾಕಷ್ಟು ಪ್ರಾತಿನಿಧ್ಯ.

### ವಕ್ಫ್ (ತಿದ್ದುಪಡಿ) ಮಸೂದೆ, 2024ರ ಪ್ರಮುಖ ಲಕ್ಷಣಗಳು ಯಾವುವು?

**ವಕ್ಫ್ (ತಿದ್ದುಪಡಿ) ಮಸೂದೆ, 2024 ರ ಪ್ರಮುಖ ಲಕ್ಷಣಗಳು:**

ವಕ್ಫ್ ಕಾಯಿದೆಯ ಮರುನಾಮಕರಣ, 1995: ಕಾಯಿದೆಯನ್ನು ಏಕೀಕೃತ ವಕ್ಫ್ ನಿರ್ವಹಣೆ, ಸಬಲೀಕರಣ, ದಕ್ಷತೆ ಮತ್ತು ಅಭಿವೃದ್ಧಿ ಕಾಯಿದೆ, (Unified Waqf Management,Empowerment, Efficiency, and Development Act) 1995 ಎಂದು ಮರುನಾಮಕರಣ ಮಾಡಲಾಗಿದೆ, ವಕ್ಫ್ ಮಂಡಳಿಗಳು ಮತ್ತು ಆಸ್ತಿಳ ನಿರ್ವಹಣೆ ಮತ್ತು ಅದರ ಸಮಗ್ರ ಉದ್ದೇಶವನ್ನು ಆಚರಣೆಗೆ ತರಲು ಸಬಲೀಕರಣ ಮತ್ತು ಪರಿಣಾಮಕಾರಿ ಆಡಳಿತದೊಂದಿಗೆ ಅಭಿವೃದ್ಧಿ.

**ವಕ್ಫ್ ರಚನೆ :** ಕಾಯಿದೆಯು ವಕ್ಫ್‌ನ್ನು ಈ ಮೂಲಕ ರೂಪಿಸಲು ಅನುಮತಿಸುತ್ತದೆ: (i) ಘೋಣೆ, (ii) ದೀರ್ಘಕಾಲೀನ ಬಳಕೆಯ ಆಧಾರದ ಮೇಲೆ ಗುರುತಿಸುವಿಕೆ (ಬಳಕೆದಾರರಿಂದ ವಕ್ಫ್), ಅಥವಾ (iii) ಉತ್ತರಾಧಿ ಕಾರದ ಸಾಲು ಕೊನೆಗೊಂಡಾಗ (ವಕ್ಫ್ - ಎಲ್ಲಾ ಮಕ್ಕಳು).

ಕನಿಷ್ಠ ಐದು ವರ್ಗಗಳ ಕಾಲ ಇಸ್ಲಾಂ ಧರ್ಮವನ್ನು ಪಾಲಿಸುವ ವ್ಯಕ್ತಿ ಮಾತ್ರ ವಕ್ಫ್ ಅನ್ನು ಘೋಷಿಸಬಹುದು ಎಂದು ಬಿಲ್ ಹೇಳುತ್ತದೆ. ಘೋಷಿಸಲಾದ ಆಸ್ತಿಯನ್ನು ವ್ಯಕ್ತಿಯು ಹೊಂದಿರಬೇಕು ಎಂದು ಅದು ಸ್ಪಷ್ಟಪಡಿಸುತ್ತದೆ.

ಇದು ಬಳಕೆಯಿಂದಗಿ (waqf by user) ವಕ್ಫ್‌ನ್ನು ತೆಗೆದುಹಾಕುತ್ತದೆ, ಅಲ್ಲಿ ಆಸ್ತಿಗಳನ್ನು ಧಾರ್ಮಿಕ ಉದ್ದೇಶಗಳಿಗಾಗಿ ದೀರ್ಘಾವಧಿಯ ಬಳಕೆಯ ಆಧಾರದ ಮೇಲೆ ವಕ್ಫ್ ಎಂದು ಪರಿಗಣಿಸಬಹುದು.

ವಕ್ಫ್ -ಅಲಾಲ್-ಔಲಾದ್ ಮಹಿಳಾ ಉತ್ತರಾಧಿಕಾರಿಗಳನ್ನು ಒಳಗೊಂಡಂತೆ ದಾನಿಯ ಉತ್ತರಾಧಿ ಕಾರಿಗೆ ಉತ್ತರಾಧಿ ಕಾರ ಹಕ್ಕುಗಳ ನಿರಾಕರಣೆ ಮಾಡಬಾರದು

1. ಸರಕಾರಿ ಆಸ್ತಿಯನ್ನು ವಕ್ಫ್ ಆಸ್ತಿ ಎನ್ನುವುದು. ವಕ್ಫ್ ಯಾವುದೇ ಸರಕಾರ ಆಸ್ತಿಯನ್ನು ವಕ್ಫ್ ಆಸ್ತಿ ಎಂದು ಘೋಷಿಸದ ತಕ್ಷಣ ಅದರ ಮಾಕಲತ್ವ ವಕ್ಫ್ ವರ್ಗವಾಗದೇ ಅದು ಸರಕಾರಿ ಆಸ್ತಿಯಾಗಿಯೇ ಇರುತ್ತದೆ. ಅಂತಹಾ ಸಂದರ್ಭದಲ್ಲಿ ಪ್ರದೇಶದ ಕಲೆಕ್ಟರ್ ಅದರ ಮಾಲೀಕತ್ವವನ್ನು ನಿರ್ಧರಿಸುತ್ತಾರೆ, ಒಂದೊಮ್ಮೆ ದಾಖಲೆಗಳಲ್ಲಿ ಗೊಂದಲಗಳಿದ್ದರೆ ರಾಜ್ಯ ಸರ್ಕಾರಕ್ಕೆ ವರದಿಯನ್ನು ಸಲ್ಲಿಸುತ್ತಾರೆ. ಒಂದೊಮ್ಮೆ ಅದು ಸರ್ಕಾರಿ ಆಸ್ತಿ ಎಂದು ಪರಿಗಣಿಸಿದರೆ, ಅವರು ಕಂದಾಯ ದಾಖಲೆಗಳನ್ನು ಅದರಂತೆಯೇ ನವೀಕರಿಸುತ್ತಾರೆ.
2. ಆಸ್ತಿ ವಕ್ಫ್ ಆಗಿದೆಯೇ ಎಂದು ನಿರ್ಧರಿಸುವ ಅಧಿ ಕಾರ: ಈ ಕಾಯಿದೆಯು ವಕ್ಫ್ ಬೋರ್ಡ್‌ಗೆ ಆಸ್ತಿಯನ್ನು ವಕ್ಫ್ ಆಗಿದೆಯೇ ಎಂದು ವಿಚಾರಿಸಿ ನಿರ್ಧರಿಸವ ಪರಮಾಧಿ ಕಾರವನ್ನು ತೆಗೆದು ಹಾಕುತ್ತದೆ
3. ವಕ್ಫ್ ಸರ್ವೆ: ವಕ್ಫ್ ಸಮೀಕ್ಷೆಗಾಗಿ ಸರ್ವೆ ಕಮಿಷನರ್ ಮತ್ತು

ಹೆಚ್ಚುವರಿ ಆಯುಕ್ತರನ್ನು ನೇಮಿಸಲು ಕಾಯಿದೆ ಒದಗಿಸುತ್ತದೆ. ಈ ವಿಧೇಯಕ ಕಲೆಕ್ಟರ್‌ಗಳಿಗೆ ಸಮೀಕ್ಷೆ ಮಾಡಲು ಅಧಿ ಕಾರ ನೀಡುತ್ತದೆ. ಬಾಕಿ ಉಳಿದಿರುವ ಸಮೀಕ್ಷೆಗಳನ್ನು ರಾಜ್ಯ ಕಂದಾಯ ಕಾನೂನಿನ ಪ್ರಕಾರ ನಡೆಸಲಾಗುವುದು.

4. ಕೇಂದ್ರೀಯ ವಕ್ಫ್ ಕೌನ್ಸಿಲ್: ಈ ಕಾಯಿದೆಯು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಮತ್ತು ವಕ್ಫ್ ಮಂಡಳಿಗಳಿಗೆ ಸಲಹೆ ನೀಡಲು ಕೇಂದ್ರೀಯ ವಕ್ಫ್ ಕೌನ್ಸಿಲ್ ಅನ್ನು ರಚಿಸುತ್ತದೆ. ವಕ್ಫ್ ನ ಉಸ್ತುವಾರಿ ಸಚಿವರು ಕೌನ್ಸಿಲ್‌ನ ಪದನಿಮಿತ್ತ ಅಧ್ಯಕ್ಷರಾಗಿದ್ದಾರೆ. ಎಲ್ಲಾ ಕೌನ್ಸಿಲ್ ಸದಸ್ಯರು ಮುಸ್ಲಿಮರಾಗಿರಬೇಕು ಮತ್ತು ಕನಿಷ್ಠ ಇಬ್ಬರು ಮಹಿಳೆಯರಾಗಿರಬೇಕು ಎಂಬ ನಿಯಮವಿತ್ತು. ಬದಲಿಗೆ ಇಬ್ಬರು ಸದಸ್ಯರು ಮುಸ್ಲೀಮೇತರರಾಗಿರಬೇಕು ಎಂದು ವಿಧೇಯಕದಲ್ಲಿ ಉಲ್ಲೇಕಿಸಲಾಗಿದೆ. ಸಂಸದರು, ಮಾಜಿ ನ್ಯಾಯಾಧೀಶರು ಮತ್ತು ಕಾಯ್ದೆಯ ಪ್ರಕಾರ ಕೌನ್ಸಿಲ್‌ಗೆ ನೇಮಕಗೊಂಡ ಗಣ್ಯ ವ್ಯಕ್ತಿಗಳು ಮುಸ್ಲಿಮರಾಗಿರಬೇಕಾಗಿಲ್ಲ. ಕೆಳಗಿನ ಸದಸ್ಯರು ಮುಸ್ಲೀಮರಾಗಿರಬೇಕು:

(i) ಮುಸ್ಲಿಂ ಸಂಘಟನೆಗಳ ಪ್ರತಿನಿಧಿ ಗಳು,

(ii) ಇಸ್ಲಾಮಿಕ್ ಕಾನೂನಿನಲ್ಲಿ ವಿದ್ವಾಂಸರು, ಮತ್ತು

(iii) ವಕ್ಫ್ ಮಂಡಳಿಗಳ ಅಧ್ಯಕ್ಷರು.

ಮುಸ್ಲಿಂ ಸದಸ್ಯರಲ್ಲಿ ಇಬ್ಬರು ಮಹಿಳೆಯರಾಗಿರಬೇಕು.

5. **ವಕ್ಫ್ ಬೋರ್ಡ್‌ಗಳು:** ಮುಸ್ಲಿಮರ ಎಲ್ಲಟ್ರಾಕ್ ಕಾಲೇಜುಗಳಿಂದ ತಲಾ ಇಬ್ಬರು ಸದಸ್ಯರನ್ನು ಆಯ್ಕೆ ಮಾಡಲು ಕಾಯಿದೆಯಲ್ಲಿ ಅವಕಾಶವಿರುತ್ತದೆ. (i) ಸಂಸದರು, (ii) ಶಾಸಕರು ಮತ್ತು ವಿಧಾನಪರಿಷತ್ ಸದಸ್ಯರು ಮತ್ತು (iii) ಬಾರ್ ಕೌನ್ಸಿಲ್ ಸದಸ್ಯರು, ರಾಜ್ಯದಿಂದ ಮಂಡಳಿಗೆ ಆಯ್ಕೆ ಮಾಡಬಹುದು. ಈ ವಿಧೇಯಕವು ಮೇಲಿನ ಪ್ರತಿಯೊಂದು ಹಿನ್ನೆಲೆಯಿಂದ ಒಬ್ಬ ವ್ಯಕ್ತಿಯನ್ನು ಮಂಡಳಿಗೆ ನಾಮನಿರ್ದೇಶನ ಮಾಡುವ ಅಧಿಕಾರವನ್ನು ರಾಜ್ಯ ಸರ್ಕಾರಕ್ಕೆ ನೀಡುತ್ತದೆ. ಅವರು ಮುಸ್ಲಿಮರೇ ಆಗಿರಬೇಕು ಎಂಬುದು ನಿಯಮವಲ್ಲ.

**ಮಂಡಳಿಯುಯಲ್ಲಿ :** (i) ಇಬ್ಬರು ಮುಸ್ಲಿಮೇತರ ಸದಸ್ಯರು. ಮತ್ತು (ii) ಶಿಯಾಗಳು, ಸುನ್ನಿಗಳು ಮತ್ತು ಮುಸ್ಲಿಮರ ಹಿಂದುಳಿದ ವರ್ಗಗಳಿಂದ ಕನಿಷ್ಠ ಒಬ್ಬ ಸದಸ್ಯರು ಇರಬೇಕು. ಇದು ರಾಜ್ಯದಲ್ಲಿ ವಕ್ಫ್ ಹೊಂದಿದ್ದರೆ ಬೋಹ್ರಾ ಮತ್ತು ಅಗಾಖಾನಿ ಸಮುದಾಯಗಳಿಂದ ತಲಾ ಒಬ್ಬ ಸದಸ್ಯರನ್ನು ಹೊಂದಿರಬೇಕು. ಕನಿಷ್ಠ ಇಬ್ಬರು ಇಬ್ಬರು ಮುಸ್ಲಿಂ ಸದಸ್ಯರು ಮಹಿಳೆಯರಾಗಿರಬೇಕು ಎಂದು ಮಸೂದೆ ಹೇಳುತ್ತದೆ.

6. **ನ್ಯಾಯಮಂಡಳಿಗಳ ಸಂಯೋಜನೆ:** ಕಾಯಿದೆಯು ರಾಜ್ಯಗಳು ವಕ್ಫ್ ವಿವಾದಗಳನ್ನು ಪರಿಹರಿಸಲು ನ್ಯಾಯಮಂಡಳಿಗಳನ್ನು ರಚಿಸುವ ಅಗತ್ಯವಿದೆ. ಈ ನ್ಯಾಯಮಂಡಳಿಗಳ ಅಧ್ಯಕ್ಷರು ಕ್ಲಾಸ್ 1, ಜಿಲ್ಲೆ, ಸೆಸ್ಸ್ ಅಥವಾ ಸಿವಿಲ್ ನ್ಯಾಯಾಧೀಶರಿಗೆ ಸಮನಾದ ಶ್ರೇಣಿಯ ನ್ಯಾಯಾಧೀಶರಾಗಿರಬೇಕು.

ಇತರ ಸದಸ್ಯರು (i) ಹೆಚ್ಚುವರಿ ಜಿಲ್ಲಾ ಮ್ಯಾಜಿಸ್ಟ್ರೇಟ್‌ಗೆ ಸಮಾನವಾದ ರಾಜ್ಯ ಅಧಿ ಕಾರಿ, ಮತ್ತು (ii) ಮುಸ್ಲಿಂ ಕಾನೂನು ಮತ್ತು ನ್ಯಾಯಶಾಸ್ತ್ರದಲ್ಲಿ ಜ್ಞಾನವಿರುವ ವ್ಯಕ್ತಿ. ಮಸೂದೆಯು ನ್ಯಾಯಮಂಡಳಿಯಿಂದ ಎರಡನೆಯದನ್ನು ತೆಗೆದುಹಾಕುತ್ತದೆ. ಇದು ಬದಲಾಗಿ ಈ ಕೆಳಗಿನವರನ್ನು ಸದಸ್ಯರನ್ನಾಗಿ ಒದಗಿಸುತ್ತದೆ: (iii) ಹಾಲಿ ಅಥವಾ ಮಾಜಿ ಜಿಲ್ಲಾ ನ್ಯಾಯಾಲಯದ ನ್ಯಾಯಾಧೀಶರು ಅದರ ಅಧ್ಯಕ್ಷರಾಗಿ, ಮತ್ತು (iv) ಹಾಲಿ ಅಥವಾ ರಾಜ್ಯ ಸರ್ಕಾರದ ಕಾರ್ಯದರ್ಶಿ ಶ್ರೇಣಿಯ ಅಧಿ ಕಾರಿ.

7. **ನ್ಯಾಯಮಂಡಳಿಗಳ ಆದೇಶಗಳ ಮೇಲೆ ಮೇಲ್ಮನವಿ:** ಈಗಿರುವ ಕಾಯಿದೆಯಡಿಯಲ್ಲಿ, ನ್ಯಾಯಮಂಡಳಿಯ ನಿರ್ಧಾರಗಳು ಅಂತಿಮವಾಗಿರುತ್ತವೆ ಮತ್ತು ನ್ಯಾಯಾಲಯಗಳಲ್ಲಿ ಅದರ ನಿರ್ಧಾರಗಳ ವಿರುದ್ಧ ಮೇಲ್ಮನವಿಗಳನ್ನು ನಿಶೇಧಿಸಲಾಗಿದೆ. ಮಂಡಳಿಯು ಅಥವಾ ಬಾಧಿತ ಪಕ್ಷದ ಅರ್ಜಿಯ ಮೇಲೆ ಹೈಕೋರ್ಟ್ ತನ್ನ ಸ್ವಂತ ಇಚ್ಚೆಯ ಮೇರೆಗೆ ವಿಷಯಗಳನ್ನು ಪರಿಗಣಿಸಬಹುದು. ತಿದ್ದುಪಡಿ ಮಸೂದೆಯು ನ್ಯಾಯಮಂಡಳಿಯ ನಿರ್ಧಾರಗಳಿಗೆ ಅಂತಿಮವೆಂದು ಪರಿಗಣಿಸುವ ನಿಬಂಧನೆಗಳನ್ನು ತೆಗೆದುಹಾಕಿದೆ. ನ್ಯಾಯಮಂಡಳಿ ಈ ಆದೇಶಗಳನ್ನು ಪ್ರಶ್ನಿಸಿ 90 ದಿನಗಳಲ್ಲಿ ಹೈಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸುವ ಅವಕಾಶ ತಿದ್ದುಪಡಿ ಮಸೂದೆಯಲ್ಲಿ ಕೊಡಲಾಗಿದೆ

8. **ಕೇಂದ್ರ ಸರ್ಕಾರದ ಅಧಿಕಾರಗಳು:** (i) ನೋಂದಣಿ, (ii) ವಕ್ಫ್ ಖಾತೆಗಳ ಪ್ರಕಟಣೆ, ಮತ್ತು (iii) ವಕ್ಫ್ ಮಂಡಳಿಗಳ ನಡಾವಳಿಗಳ ಪ್ರಕಟಣೆಗೆ ಸಂಬಂಧಿಸಿದ ನಿಯಮಗಳನ್ನು ಮಾಡಲು ಮಸೂದೆಯು ಕೇಂದ್ರ ಸರ್ಕಾರಕ್ಕೆ ಅಧಿಕಾರ ನೀಡುತ್ತದೆ. ಕಾಯಿದೆಯಡಿಯಲ್ಲಿ, ರಾಜ್ಯ ಸರ್ಕಾರವು ವಕ್ಫ್‌ಗಳ ಖಾತೆಗಳನ್ನು ಯಾವುದೇ ಹಂತದಲ್ಲಿ ಆಡಿಟ್ ಮಾಡಬಹುದು. ಈ ಮಸೂದೆಯು ಸಿಎಜಿ ಅಥವಾ ನಿಯೋಜಿತ ಅಧಿ ಕಾರಿಯಿಂದ ಇವುಗಳನ್ನು ಆಡಿಟ್ ಮಾಡಲು ಕೇಂದ್ರ ಸರ್ಕಾರಕ್ಕೆ ಅಧಿ ಕಾರ ನೀಡುತ್ತದೆ.

9. **ಬೋಹ್ರಾ ಮತ್ತು ಅಗಾಖಾನಿಗಾಗಿ ವಕ್ಫ್ ಮಂಡಳಿಗಳು:** ರಾಜ್ಯದಲ್ಲಿನ ಎಲ್ಲಾ ವಕ್ಫ್ ಆಸ್ತಿಗಳು ಅಥವಾ ವಕ್ಫ್ ಆದಾಯದಲ್ಲಿ ಶಿಯಾ ವಕ್ಫ್ 15% ಕ್ಕಿಂತ ಹೆಚ್ಚು ಇದ್ದರೆ ಸುನ್ನಿ ಮತ್ತು ಶಿಯಾ ಪಂಗಡಗಳಿಗೆ ಪ್ರತ್ಯೇಕ ವಕ್ಫ್ ಮಂಡಳಿಗಳನ್ನು ಸ್ಥಾಪಿಸಲು ಕಾಯಿದೆ ಅನುಮತಿಸುತ್ತದೆ. ಮಸೂದೆಯು ಅಘಖಾನಿ ಮತ್ತು ಬೋಹ್ರಾ ಪಂಥಗಳಿಗೆ ಪ್ರತ್ಯೇಕ ವಕ್ಫ್ ಮಂಡಳಿಗಳನ್ನು ಸಹ ಅನುಮತಿಸುತ್ತದೆ.



# ಸತ್ಯಶೋಧನಾ ಸಮಿತಿಯ ವರದಿಯ ಸಾರಾಂಶ

**ವಕ್ಫ್ ಆಸ್ತಿಯ ವಿಚಾರವಾಗಿ ಕರ್ನಾಟಕ ರಾಜ್ಯ ಸರ್ಕಾರವು ಇತ್ತೀಚೆಗೆ ತಥಾಕಥಿತ 1974 ರ ಗೆಜೆಟ್ ನೋಟಿಫಿಕೇಶನ್ ಆಧರಿಸಿ ಹೊರಡಿಸಿದ ಆದೇಶದ ಕಾರಣ ರಾಜ್ಯದ ರೈತರು, ಹಿಂದೂ ಧಾರ್ಮಿಕ ಕೇಂದ್ರಗಳು (ಮಠ) ದೇವಸ್ಥಾನಗಳು ತಮ್ಮ ತಮ್ಮ ಆಸ್ತಿಗಳನ್ನು ಕಳೆದುಕೊಳ್ಳುವ ಭೀತಿಯಲ್ಲಿದ್ದಾರೆ. ಈ ಕುರಿತು ಬಿಜೆಪಿಯ ಸತ್ಯ ಶೋಧನಾ ಸಮಿತಿಯು ನೀಡಿದ ವರದಿಯ ಸಾರಂಶ.**

ಕರ್ನಾಟಕ ರಾಜ್ಯ ಸರ್ಕಾರವು ವಿಜಯಪುರ ಜಿಲ್ಲೆಯಲ್ಲಿ 1974ರ ತಥಾಕಥಿತ ಗೆಜೆಟ್ ನೋಟಿಫಿಕೇಶನ್ ಆಧಾರದ ಮೇಲೆ ವಕ್ಫ್ ಆಸ್ತಿಗಳ ಒತ್ತುವರಿ ಕುರಿತು ಹೊರಡಿಸಿದ ಆದೇಶದ ಕಾರಣ ಆ ಭಾಗದ ಅನೇಕ ರೈತರ, ದೇವಸ್ಥಾನಗಳು ಧಾರ್ಮಿಕ ಕೇಂದ್ರಗಳು (ಮಠಗಳ) ಆಸ್ತಿಯ ದಾಖಲೆ ಪತ್ರದ ಕಾಲಂ 11ರಲ್ಲಿ ವಕ್ಫ್ ಎಂದು ನಮೂದಾದ ಕಾರಣದಿಂದಾಗಿ ಭಯಭೀತರಾದ ಸಂತ್ರಸ್ತರ ಸಮಸ್ಯೆಗಳನ್ನು ಆಲಿಸಲು ಸತ್ಯಶೋಧನ ತಂಡ ವಿಜಯಪುರ ಜಿಲ್ಲೆಯ ಅನೇಕ ಗ್ರಾಮಗಳನ್ನು ಸಂಚರಿಸಿ ಸಂತ್ರಸ್ತರಿಂದ ದಿನಾಂಕ 29-10-2024ರಂದು ಮಾಹಿತಿಗಳನ್ನು ಹಾಗೂ ಅಹವಾಲುಗಗಳನ್ನು ಸಂಗ್ರಹಿಸಿತು.

ಸಮಿತಿಯು ಭೇಟಿ ನೀಡಿದ ಸ್ಥಳಗಳ ವಿವರಗಳನ್ನು ಈ ವರದಿಯ ಇನ್ನೊಂದು ಭಾಗದಲ್ಲಿ ನೀಡಲಾಗಿದೆ. ಅಂದರೆ, ಪ್ರತೀ ಭೇಟಿಯ ಸ್ಥಳದಲ್ಲಿ ಸುಮಾರು 100 ರಿಂದ 200 ಜನರನ್ನು ಒಳಗೊಂಡಿರುವ ರೈತರ ಬೃಹತ್ ಸಭೆ ಯೋಜಿಸಲಾಗಿತ್ತು. ವಿವಿಧ ಸ್ಥಳಗಳಿಗೆ ಭೇಟಿ ನೀಡಿದ ನಂತರ ವಿಜಯಪುರ ಜಿಲ್ಲಾಧಿಕಾರಿಯವರೊಂದಿಗೂ ಸಭೆ ನಡೆಸಲಾಯಿತು. ಈ ಸಭೆಯಲ್ಲಿ ಜಿಲ್ಲಾಧಿಕಾರಿಗಳು ಸಮಿತಿಯ ಪ್ರಶ್ನೆಗಳಿಗೆ ತೃಪ್ತಿಕರ ಉತ್ತರವನ್ನು ನೀಡಲು ವಿಫಲರಾದರು. ಪಹಣಿಯ ಕಾಲಂ ನಂ.11 ರಲ್ಲಿ ವಕ್ಫ್ ನಿಂದ 45 ಆಸ್ತಿಗಳಿಗೆ ಸಂಬಂಧಿಸಿದಂತೆ ಆದೇಶವನ್ನು ಹಿಂಪಡೆಯುವುದಾಗಿ ಜಿಲ್ಲಾಧಿಕಾರಿ ಮೌಖಿಕವಾಗಿ ಸಮಿತಿಗೆ ಭರವಸೆ ನೀಡಿದ್ದರೂ. ಆ ಭರವಸೆಯನ್ನು ಲಿಖಿತ ರೂಪದಲ್ಲಿ ನೀಡಲು ನಿರಾಕರಿಸಿದರು.

ಈ ಸತ್ಯ ಶೋಧನ ಕಾರ್ಯದಲ್ಲಿ ಸಮಿತಿಗೆ ಸಿಕ್ಕ ಮಾಹಿತಿಯ ಪ್ರಕಾರ, ದಿನಾಂಕ 08.09.2024 ರಂದು, ಮಾನ್ಯ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರಾದ, ಶ್ರೀ ಬಿ. ಜೆಡ್. ಜಮೀರ್ ಅಹಮದ್ ಅವರು ಹಾಗೂ ರಾಜ್ಯ ವಕ್ಫ್ ಬೋರ್ಡ್‌ನ ಅಧ್ಯಕ್ಷರಾದ



ಶ್ರೀ ಅನ್ವರ್ ಬಾಷಾ ಕೆ. ಅವರು, ಬೆಂಗಳೂರು, ವಿಜಯಪುರ ಜಿಲ್ಲೆಯ ಕಂದಾಯ ಅಧಿಕಾರಿಗಳೊಂದಿಗೆ ಸಭೆ ನಡೆಸಿ, ಜಿಲ್ಲಾಧಿಕಾರಿ, ತಹಶೀಲ್ದಾರ್ ಸೇರಿದಂತೆ ವಿವಿಧ ಸರ್ಕಾರಿ ಅಧಿಕಾರಿಗಳಿಗೆ ಈ ಸಭೆಯಲ್ಲಿ ನಿರ್ದೇಶನ ನೀಡಿದ್ದಾರೆ. ಪಹಣಿಯ ಕಾಲಂ ನಂ. 9 ಹಾಗೂ 11 ರಲ್ಲಿ ವಕ್ಫ್ ಹೆಸರನ್ನು ನಮೂದಿಸುವಂತೆ ನಿರ್ದೇಶಿಸಿದ್ದಾರೆ.

ರಾಜ್ಯ ವಕ್ಫ್ ಬೋರ್ಡಿನ ಸಚಿವರು ಮತ್ತು ಅಧ್ಯಕ್ಷರ ನಿರ್ದೇಶನದ ಮೇರೆಗೆ ಜಿಲ್ಲಾಧಿಕಾರಿಗಳು ಕಂದಾಯ ದಾಖಲೆಗಳನ್ನು ಬದಲಾಯಿಸಲು ಸೂಚನೆಗಳನ್ನು ನೀಡಲು ಪ್ರಾರಂಭಿಸಿದರು, ಈ ಮೂಲಕ ಇವರು ಕರ್ನಾಟಕ ಭೂಕಂದಾಯ ಕಾಯಿದೆ, 1964, ಮತ್ತು ಕರ್ನಾಟಕ ಭೂ ಕಂದಾಯ ನಿಯಮ 1966 ರ ಕಡ್ಡಾಯ ನಿಬಂಧನೆಗಳು, ವಿಶೇಷವಾಗಿ ಕರ್ನಾಟಕ ಭೂ ಕಂದಾಯ ನಿಯಮ 1966 ರ ನಿಯಮ 61ರ ನಿಬಂಧನೆಗಳನ್ನು ಸ್ಪಷ್ಟವಾಗಿ ಉಲ್ಲಂಘನೆ ಮಾಡಿರುತ್ತಾರೆ. ಬಾಧಿತ ಕಕ್ಷಿದಾರರಿಗೆ ಯಾವುದೇ ರೀತಿಯ ಸೂಚನೆಗಳನ್ನು ನೀಡದೆ, ಅವರ ಅಹವಾಲನ್ನೂ ಕೇಳುವ ಅವಕಾಶವನ್ನು ನೀಡದೆ ಮತ್ತು ವ್ಯಕ್ತಿಗಳ ಸಾಂವಿಧಾನಿಕ ಹಕ್ಕುಗಳು ಮತ್ತು ಸ್ವಾಭಾವಿಕ ನ್ಯಾಯವನ್ನು ಭಾಧಿತ ಕಕ್ಷೀದಾದರಿಗೆ ಲಭ್ಯವಾಗದಂತೆ ಮಾಡಿರುತ್ತಾರೆ.

ವಿಜಯಪುರ ಜಿಲ್ಲೆಯ ಸಿಂಧಗಿ ತಾಲೂಕಿನ ಗೊಲಗೇರಿ ಗ್ರಾಮಕ್ಕೆ ಸಮಿತಿ ಭೇಟಿ ನೀಡಿದಾಗ, ಗ್ರಾಮಸ್ಥರು ಸಮಿತಿಯನ್ನು ಭೇಟಿಯಾಗಿ ದಾಖಲೆಗಳನ್ನು ಒದಗಿಸಿದರು ಮತ್ತು ತಮ್ಮ ಸಮಸ್ಯೆಗಳನ್ನು ವಿವರಿಸಿದರು ಮತ್ತು ಸಮಿತಿಗೆ ಮನವರಿಕೆಯಾದ ಅಂಶಗಳಲ್ಲಿ ಕೆಳಗಿನವುಗಳನ್ನು ಉಲ್ಲೇಖಿಸಲಾಗಿದೆ.

ಗೋಲಗೇರಿ ಗ್ರಾಮ, ತಾಲೂಕು: ವಿಜಯಪುರ, ಜಿಲ್ಲೆ. (1) ಸಂಗನಗೌಡ ಅಪ್ಪಾಸಾಹೇಬ ಬಿರಾದಾರ್ (2) ಶ್ರೀಮತಿ. ಗೀತಾ ಗೊಲ್ಲಪ್ಪಗೌಡ ಬಿರಾದಾರ್, (3) ಬಸವರಾಜಗೌಡ ಗೊಲ್ಲಪ್ಪಗೌಡ ಬಿರಾದಾರ್ (4) ನಾಗಲಾಂಬಿಕಾ ಗೊಲ್ಲಪ್ಪಗೌಡ ಬಿರಾದಾರ್, ಅವರ ಹೆಸರಿನಲ್ಲಿದ್ದ ಖ.ಫೆಣ. 3/1 ಅಳತೆಯ 03 ಎಕರೆ 38 ಗುಂಟಾಗಳು, 07 ಗುಂಟಾಗಳ (ಎ) ಪೋತ ಖರಾಬು ಸೇರಿದಂತೆ 07 ಗುಂಠಗಳು. ವಟ್ಟು 03 ಎಕರೆ 31 ಗುಂಠಗಳು ಸಾಗುವಳಿ ಭೂಮಿಯ ,ಪಹಣಿಯ ಕಾಲಂ ನಂ.11 ರಲ್ಲಿ, ಎಂಆರ್‌ಟಿ-45/2018-19 ರ ಪ್ರಕಾರ ಮುಸಲ್ಮಾನ್ ದೇವ್ ಮಸೀದಿಯ ಹೆಸರನ್ನು ವಕ್ಫ್ ಆಸ್ತಿ ಎಂದು ನಮೂದಿಸಲಾಗಿದೆ. ಬಾಧಿತ ಪಕ್ಷಗಳಿಗೆ ಯಾವುದೇ ರೀತಿಯ ಸೂಚನೆ ನೀಡದೆಯೇ ನಿಡದೆ ದಾಖಲೆಯನ್ನು ತಿದ್ದಿದ್ದಾರೆ. ಇದೇ ರೀತಿಯ ಪ್ರಕರಣಗಳು ಇಡೀ ತಾಲೂಕಿನಾದ್ಯಂತ ನಡೆದಿದೆ.

ವಿಜಯಪುರ ಜಿಲ್ಲೆಯ ದೇವರಹಿಪ್ಪರಗಿಯ ಪಡಗಾನೂರ ಗ್ರಾಮಕ್ಕೆ ಸಮಿತಿ ಭೇಟಿ ನೀಡಿದಾಗ, ರೈತರು ಗ್ರಾಮದ ಶ್ರೀದೇವಿ ಶ್ರೀಶೈಲ್ ಬಿರಾದಾರ್, ಮೇಘ ಶ್ರೀ ಶೈಲ್ ಬಿರಾದಾರ್, ರೈತ ಸಂಘದ ಅಧ್ಯಕ್ಷ ಚಂದ್ರಪ್ಪ ತಿಪ್ಪಣ್ಣ ಅವರ ಆರ್.ಎಸ್.ನಂ. 220 ಒಟ್ಟು ಅಳತೆದಾರರು 57 ಎಕರೆ 07 ಗುಂಟಾ ಜಮೀನು ಹಾಗೂ ಶ್ರೀಶೈಲ್ ಶರಣಪ್ಪ ಬಿರಾದಾರ್ ಹೆಸರಿನಲ್ಲಿರುವ ಆರ್.ಎಸ್.ನಂ.



220/1ಎ/ಎ, 4 ಎಕರೆ ಪ್ರದೇಶ ವಕ್ಫ್ ಆಸ್ತಿಯಲ್ಲದಿದ್ದರೂ, ಈ ಎರಡು ಜಮೀನುಗಳಲ್ಲಿ, ಕಾಲಂ ನಂ.11 ರಲ್ಲಿ ವಕ್ಫ್ ನಮೂದು ಇಲ್ಲದಿದ್ದರೂ, ಮಾಲೀಕರುಗಳಿಗೆ 04.10.2024 ರಂದು ನೋಟಿಸ್ ನೀಡಲಾಗಿದೆ. ಜಿಲ್ಲಾಧಿಕಾರಿಗಳ ನಿರ್ದೇಶನದಂತೆ ವಕ್ಫ್ ಹೆಸರನ್ನು ನಮೂದಿಸಲಾಗುವುದು ಎಂದು ತಿಳಿಸಿದ್ದಾರೆ. ಆದರೆ, ಯಾವ ಆಧಾರದ ಮೇಲೆ ನಮೂದು ಮಾಡಲು ಉದ್ದೇಶಿಸಲಾಗಿದೆ ಎಂಬುದನ್ನು ಮಾತ್ರ ಉಲ್ಲೇಖಿಸಲಾಗಿಲ್ಲ.

ಅದೇ ರೀತಿ ಸಿಂಧಗಿ ಪಟ್ಟಣಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಪರಮಪೂಜ್ಯ ಗುರುಬಸವ ಚನ್ನಬಸವ ಮಹಾಸ್ವಾಮಿಗಳಿಂದಲೂ ಸಮಿತಿ ಮಾಹಿತಿ ಪಡೆದಿದೆ. ಸಿಂಧಗಿಯ ವಿರಕ್ತಮಠ, ಧಾರ್ಮಿಕ ಸಂಸ್ಥೆಯಾಗಿದ್ದು, ಈ ಮಠವು 12ನೇ ಶತಮಾನದ ಬಸವಣ್ಣನವರ ಕಾಲದ್ದು. ಈ ಸಂಸ್ಥೆಯು ಬೆಳಗಾವಿಯ ಸಹಾಯಕ ಚಾರಿಟಿ ಕಮಿಷನರ್ ಕಚೇರಿಯಲ್ಲಿ ನೋಂದಣಿ ಸಂಖ್ಯೆ ಅ– 525 ರ ಅಡಿಯಲ್ಲಿ ಹಾಗೂ ಬಾಂಬೆ ಪಬ್ಲಿಕ್ ಟ್ರಸ್ಟ್ ಆ್ಯಕ್ಟ್ 1950ರ ಅಡಿಯಲ್ಲಿ ಧಾರ್ಮಿಕ ಟ್ರಸ್ಟ್ ಆಗಿ ನೋಂದಾಯಿಸಲ್ಪಟ್ಟಿದೆ. ಸಂಸ್ಥೆಯು 1 ಎಕರೆ 58 ಗುಂಟೆ ಆಸ್ತಿ ಇದ್ದು ಇದಕ್ಕೆ ಯಾವುದೇ ರೀತಿಯ ನೋಟಿಸ್ ನೀಡದೆ ಯಾವುದೇ ಆಧಾರವಿಲ್ಲದೆ ಈ ಆಸ್ತಿಯನ್ನು ಖಬರಸ್ತಾನ ವಕ್ಫ್ ಆಸ್ತಿ ಎಂದು ಘೋಷಿಸಿ ಗೆಜೆಟ್ ನೋಟಿಫಿಕೇಶನ್ ಮಾಡಲಾಗಿದೆ.

ಇಲ್ಲಿ ಕೆಲವು ಪ್ರಕರಣಗಳನ್ನು ಮಾತ್ರ ಉಲ್ಲೇಖಿಸಲಾಗಿದೆ. ಈ ರೀತಿಯ ಹಲವಾರು ಪ್ರಕರಣಗಳು ಇಡೀ ರಾಜ್ಯದಲ್ಲಿ ದಾಖಲಾಗಿವೆ. ಸಮಿತಿಯು ವಿಜಯಪುರ ಜಿಲ್ಲೆಯ ವಿವಿಧ ಗ್ರಾಮಗಳಿಗೆ ಸಂಬಂಧಿಸಿದಂತೆ ವಕ್ಫ್ ಹೆಸರು ದಾಖಲಾಗಿರುವ ಆಸ್ತಿಗಳ ಪಟ್ಟಿಯನ್ನು ಸಿದ್ಧಪಡಿಸಿದೆ. ಸಮಿತಿಯ ಮುಂದೆ ಸಲ್ಲಿಸಿರುವ ಮೇಲಿನ ದಾಖಲೆಗಳನ್ನು ಪರಿಶೀಲಿಸಿದಾಗ, ಕರ್ನಾಟಕ ರಾಜ್ಯ ಸರ್ಕಾರವು ಜೆಪಿಸಿ ಮುಂದೆ ಬಾಕಿ ಇರುವ ಉದ್ದೇಶಿತ ತಿದ್ದುಪಡಿ ಮಸೂದೆಯನ್ನು ಉಲ್ಲಂಘಿಸಿ ಸಾರ್ವಜನಿಕರಿಗೆ ಹಾನಿ ಮಾಡುವ ಉದ್ದೇಶದಿಂದ ಭೂ ದಾಖಲೆಯನ್ನು ತಿದ್ದಲು ಮುಂದಾಗಿದೆ ಎಂಬುದು ಸ್ಪಷ್ಟವಾಗಿದೆ.

ವಕ್ಫ್ ಬೋರ್ಡ್ ಮತ್ತು ಆ ಕಾಯ್ದೆಯ ನೆಪದಲ್ಲಿ ಅಮಾಯಕರ ಆಸ್ತಿಯನ್ನು ಕಬಳಿಸಲು ಯತ್ನಿಸಲಾಗುತ್ತಿದೆ. ಆದ್ದರಿಂದ ಮೇಲಿನ ನಿರಪರಾಧಿಗಳಂತರೆ ಸೇರಿದಂತೆ ಎಲ್ಲ ನೊಂದವರ ಹಿತಾಸಕ್ತಿಗಳನ್ನು ರಕ್ಷಿಸಲು ಮತ್ತು ಉದ್ದೇಶಿತ ವಕ್ಫ್ ತಿದ್ದುಪಡಿ ಮಸೂದೆಯಲ್ಲಿ ಸೂಕ್ತ ಷರತ್ತುಗಳನ್ನು ಸೇರಿಸುವ ಮೂಲಕ ಜೆಪಿಸಿ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಬೇಕು. ಅದಲ್ಲದೆ, ಮೇಲಿನ ಮಸೂದೆಯನ್ನು ಅಂಗೀಕರಿಸುವವರೆಗೆ ಯಾವುದೇ ಕಂದಾಯ ದಾಖಲೆಗಳನ್ನು ಬದಲಾಯಿಸದಂತೆ ಸಂಬಂಧಪಟ್ಟ ರಾಜ್ಯ ಸರ್ಕಾರಗಳಿಗೆ ಸೂಕ್ತ ನಿರ್ದೇಶನಗಳನ್ನು ನೀಡಬೇಕು. ಆದ್ದರಿಂದ ನೋಂದಾಯಿತ ಗಿಫ್ಟ್ ಡೀಡ್ ಅಥವಾ ರಿಲಿಂಕ್ವಿಶ್ಮೆಂಟ್ ಡೀಡ್‌ಗಳಂತಹ ನಿಜವಾದ ಮತ್ತು ಅಧಿಕೃತ ದಾಖಲೆಗಳನ್ನು ಪಡೆದಿರುವ ವಕ್ಫ್ ಆಸ್ತಿಗಳನ್ನು ರಕ್ಷಿಸಲು ಜೆಪಿಸಿಯು ಉದ್ದೇಶಿತ ತಿದ್ದುಪಡಿಯಲ್ಲಿ ಸೂಕ್ತ ಷರತ್ತನ್ನು ಸೇರಿಸಲು ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಬೇಕು, ವಿವಿಧ ಸ್ಥಳಗಳಿಗೆ ಸಮಿತಿಯು ಭೇಟಿ ನೀಡಿದ ಸಮಯದಲ್ಲಿ ಅಗತ್ಯ ಮಾಹಿತಿ ಮತ್ತು ದಾಖಲೆಗಳನ್ನು ಒದಗಿಸುವ ಮೂಲಕ ನಮಗೆ ತಮ್ಮ ಅಮೂಲ್ಯವಾದ ಸೇವೆಗಳನ್ನು ಸಲ್ಲಿಸಿದ ಎಲ್ಲಾ ಸಾರ್ವಜನಿಕರಿಗೆ ಸಮಿತಿಯು ಕೃತಜ್ಞತೆಯನ್ನು ಸಲ್ಲಿಸಿದೆ.

## ಚರ್ಚೆಗೊಂದು ಸಾಲು...

**ಜನ ಜಾಗೃತಿಯು ಜನಪರ ಸಂಘಟನೆಯ ನಿರಂತರ ಕಾಯಕ**

# ರೈತರ ಮತ್ತು ಮಠಮಾನ್ಯಗಳ ಪಹಣಿಯಲ್ಲಿ ವಕ್ಫ್ ಆಸ್ತಿ ಎಂದು ನಮೂದಿಸುತ್ತಿರುವ ವಿರುದ್ಧ

# ಬಿಜೆಪಿ ವತಿಯಿಂದ ಪ್ರತಿಭಟನೆ



ಕೊಪ್ಪಳ



ಮೈಸೂರು



ಬೀದರ್



ದಾವಣಗೆರೆ



ಮಂಡ್ಯ



ಧಾರವಾಡ ಗ್ರಾಮಾಂತರ




ಹಾಸನ




## ಬ್ರಿಕ್ಸ್ ಶೃಂಗಸಭೆಯಲ್ಲಿ ಪ್ರಧಾನಿ ಮೋದಿ

# ಭಯೋತ್ಪಾದನೆ ವಿರುದ್ಧ ಗುಡುಗು!!!

**ಭಾರತದ ನೀತಿ, ನಿರ್ಧಾರಗಳ ಬಗ್ಗೆ ಇಡೀ ವಿಶ್ವ ಕಾತುರದಿಂದ ಕಾಯುತ್ತಿರುವ ಸಮಯದಲ್ಲಿ ಬ್ರಿಕ್ಸ್ ಶೃಂಗಸಭೆಯಲ್ಲಿನ ಭಾರತದ ನಿಲುವು, ನಿರ್ಧಾರ, ಪ್ರತಿಪಾದನೆ ಮತ್ತು ಭಾರತದ ಪ್ರಾಮುಖ್ಯತೆಯ ಬಗ್ಗೆ ಎಲ್ಲರ ಗಮನ ಕೇಂದ್ರಿಕರಿಸಿದ್ದಂತು ಸತ್ಯ. ಯಶಸ್ವಿಯಾಗಿ ನಡೆದ ಬ್ರಿಕ್ಸ್ ಸಭೆಯು, ಭಾರತದ ಹಿರಿಮೆಯನ್ನು ಹೆಚ್ಚಿಸುವಲ್ಲಿ, ನಾಯಕತ್ವದ ವಹಿಸುವಲ್ಲಿ ಮೋದಿಯವರು ಸಹ ಯಶಸ್ವಿಯಾಗಿದ್ದರ ದ್ಯೋತಕವಾಗಿತ್ತು.**



**ಮಹೇಶ್ ಹೆಗಡೆ**
ಬಿಜೆಪಿ ಕಾರ್ಯಕರ್ತರು

ರಷ್ಯಾದಲ್ಲಿ ಅಕ್ಟೋಬರ್ 23, 24 ರಂದುನಡೆದ 16 ನೇ ಬ್ರಿಕ್ಸ್ ಶೃಂಗ ಸಭೆಯಲ್ಲಿ ಪ್ರಧಾನಿ ಮೋದಿ ಭಾಗಿಯಾಗಿ ಭಾರತದ ನಿಲುವುಗಳನ್ನು ವ್ಯಕ್ತಪಡಿಸುವುದರ ಜೊತೆಗೆ, ಬ್ರಿಕ್ಸ್ ದೇಶಗಳ ನಾಯಕರೊಂದಿಗೆ ದ್ವಿಪಕ್ಷಿಯ ಮಾತುಕತೆ ನಡೆಸಿದರು.

ರಷ್ಯಾ ನೆಲದಲ್ಲಿ ಮೋದಿಗೆ ಅದ್ದೂರಿ ಸ್ವಾಗತ : ಬ್ರಿಕ್ಸ್ ಶೃಂಗ ಸಭೆಯಲ್ಲಿ ಪಾಲ್ಗೊಳ್ಳಲು ರಷ್ಯಾದ ಕಝಾನ್‌ಗೆ ಆಗಮಿಸಿದ ಪ್ರಧಾನಿ ಮೋದಿಗೆ ಭವ್ಯ ಸ್ವಾಗತ ದೊರೆಯಿತು. ಸಂಸ್ಕೃತದಲ್ಲಿ ಸ್ವಾಗತ ಗೀತೆ, ರಷ್ಯನ್ ನೃತ್ಯ ಮತ್ತು ಇಸ್ಕಾನ್ ಭಕ್ತರಿಂದ ಕೃಷ್ಣ ಭಜನೆ ಮೊದಲಾದ ವಿಶೇಷತೆಗಳಿಂದ ಬರಮಾಡಿಕೊಳ್ಳಲಾಯಿತು. ಇನ್ನು ವಸತಿಗಾಗಿ ಕೊರ್‌ಸ್ಟನ್ ಹೋಟೆಲ್ ತಲುಪಿದಾಗ ಅಲ್ಲೂ ಸಹ ಭಾರತೀಯ ಸಮುದಾಯದವರು ತ್ರಿವರ್ಣಧ್ವಜ ಪ್ರದರ್ಶಿಸಿ, ಭಾರತದ ಪರ ಘೋಷಣೆಗಳನ್ನು ಕೂಗುವ ಮೂಲಕ ಸ್ವಾಗತ ನೀಡಿದರು.

**ಬ್ರಿಕ್ಸ್ ಹಿನ್ನಲೆ :** 2006 ರಲ್ಲಿ ಬ್ರೆಜಿಲ್, ರಷ್ಯಾ, ಭಾರತ ಮತ್ತು ಚೀನಾ ಸೇರಿ ರಾಜಕೀಯ, ಆರ್ಥಿಕ ವಿಚಾರವಾಗಿ ಹುಟ್ಟುಹಾಕಿದ ಸಂಘಟನೆಯೇ ಬ್ರಿಕ್ಸ್. 2010 ರಲ್ಲಿ ದಕ್ಷಿಣ ಆಫ್ರಿಕಾ ಕೂಡ ಸೇರ್ಪಡೆಯಾಯಿತು. ಮುಂದುವರೆದು 2023 ರಲ್ಲಿ ಬ್ರಿಕ್ಸ್ ಒಕ್ಕೂಟಕ್ಕೆ ಈಜಿಪ್ಟ್, ಇರಾನ್,






## ಯುದ್ಧಕ್ಕೆ ನಮ್ಮ ಬೆಂಬಲವಿಲ್ಲ

ಭಾರತ ಮಾತುಕತೆ ಮತ್ತು ರಾಜತಾಂತ್ರಿಕತೆಗೆ ಬೆಂಬಲ ನೀಡುತ್ತದೆಯೇ ಹೊರತು ಯುದ್ಧಕ್ಕಲ್ಲ ಎಂದು ಮೋದಿ ಹೇಳಿದರು. ಈ ಮೂಲಕ ರಷ್ಯಾ- ಉಕ್ರೇನ್ ಕದನವನ್ನು ಶಾಂತಿಯುತ ಮಾತುಕತೆಗಳಿಂದ ಬಗೆಹರಿಸಬೇಕು ಎಂದು ಸ್ಪಷ್ಟ ಸಂದೇಶ ನೀಡಿದರು. ಯುದ್ದಗಳು, ಆರ್ಥಿಕ ಅನಿಶ್ಚತೆ, ಹವಮಾನ ಬದಲಾವಣೆ, ಭಯೋತ್ಪಾದನೆ, ಮುಂತಾದ ತುರ್ತು ಸವಾಲುಗಳ ಬಗ್ಗೆ ಕಳವಳ ವ್ಯಕ್ತಪಡಿಸಿ, ಜಗತ್ತನ್ನು ಸರಿಯಾದ ದಿಕ್ಕಿನಲ್ಲಿ ಒಯ್ಯುವಲ್ಲಿ ಬ್ರಿಕ್ಸ್ ದೇಶಗಳು ಧನಾತ್ಮಕ ಪಾತ್ರ ವಹಿಸಬೇಕು ಎಂದರು. ಒಟ್ಟಾರೆ ಭಯೋತ್ಪಾದನೆ ಸೇರಿದಂತೆ ಪ್ರಸ್ತುತ ತುರ್ತು ವಿಚಾರಗಳ ಬಗ್ಗೆ ಪ್ರಧಾನಿ ಮೋದಿಯವರು ಸಮರ್ಥವಾಗಿ ವಿಷಯ ಮಂಡಿಸಿ ಭಾರತದ ನಿಲುವು ಮತ್ತು ಪಾತ್ರದ ಬಗ್ಗೆ ಸ್ಪಷ್ಟ ಸಂದೇಶ ನೀಡುವಲ್ಲಿ ಯಶಸ್ವಿಯಾದರು.

ಇಥಿಯೋಪಿಯಾ, ಯುಎಇ ಸೇರ್ಪಡೆಯಾದರೆ, 2024 ಜನವರಿಯಲ್ಲಿ ಸೌದಿ ಅರೇಬಿಯಾ ಸೇರ್ಪಡೆಗೊಳ್ಳುವುದರೊಂದಿಗೆ ಒಟ್ಟು 10 ದೇಶಗಳ ಒಕ್ಕೂಟ ಇದಾಗಿದೆ. ಜೊತೆಗೆ ಮಲೇಷ್ಯಾ ಮತ್ತು ಥಾಯ್ಲೆಂಡ್ ಬ್ರಿಕ್ಸ್ ಒಕ್ಕೂಟ ಸೇರಲು ಉತ್ಸುಕವಾಗಿದೆ.

**ಬ್ರಿಕ್ಸ್ ಹೆಜ್ಜೆ ಗುರುತು ಮತ್ತು ಉದ್ದೇಶ :** ಜಾಗತಿಕ ಜಿಡಿಪಿಯಲ್ಲಿ ಬ್ರಿಕ್ಸ್ ಸದಸ್ಯ ದೇಶಗಳ ಪಾಲು ಶೇ.28 ರಷ್ಟಿದ್ದರೆ, ಜಾಗತಿಕ ಜನಸಂಖ್ಯೆಯಲ್ಲಿ ಬ್ರಿಕ್ಸ್ ದೇಶಗಳ ಪಾಲು ಶೇ.48 ರಷ್ಟಿದ್ದು, ವ್ಯಾಪಾರ, ಇಂಧನ, ಹವಮಾನ ಬದಲಾವಣೆ ಅಭಿವೃದ್ಧಿ, ಭದ್ರತೆ ಇತ್ಯಾದಿ ವಿಚಾರಗಳಿಗೆ ಸಂಬಂಧಿಸಿದಂತೆ ಪರಸ್ಪರ ಸಹಕಾರ ಉದ್ದೇಶದಿಂದ ಸಭೆಯಲ್ಲಿ ಚರ್ಚೆ ನಡೆಸಿ ನಿರ್ಧಾರಗಳನ್ನು ತೆಗೆದುಕೊಳ್ಳಲಿದೆ. ಅಲ್ಲದೆ ಪಶ್ಚಿಮದ ಅಭಿವೃದ್ಧಿ ಹೊಂದಿದ ದೇಶಗಳಿಗೆ ಪರ್ಯಾಯ ಶಕ್ತಿ ಸೃಷ್ಟಿಸುವ ಉದ್ದೇಶ ಸಹ ಹೊಂದಿದೆ. ಸದಸ್ಯ ದೇಶಗಳು ಸರದಿ ಪ್ರಕಾರ ಬ್ರಿಕ್ಸ್ ಅಧ್ಯಕ್ಷ ಸ್ಥಾನ ವಹಿಸುತ್ತವೆ. ಭಾರತ ಈವರೆಗೆ ಮೂರು ಸಲ ಅಧ್ಯಕ್ಷ ಸ್ಥಾನ ವಹಿಸಿದ್ದು, ಈ ವರ್ಷ ರಷ್ಯಾ ಅಧ್ಯಕ್ಷ ಸ್ಥಾನ ವಹಿಸಿತ್ತು. ಇನ್ನು ಬ್ರಿಕ್ಸ್ ವಿಸ್ತಾರವಾದಷ್ಟು ಭಾರತಕ್ಕೂ ಅನುಕೂಲ ಹೆಚ್ಚಲಿದೆ. ಮಧ್ಯ ಪ್ರಾಚ್ಯ ಸೇರಿದಂತೆ ವಿವಿಧ ದೇಶಗಳ ಜೊತೆ ಸಂಬಂಧ ಬಲವರ್ಧನೆಗೆ ಪೂರಕವಾಗಲಿದೆ.

**ಬ್ರಿಕ್ಸ್ ಸಭೆಯಲ್ಲಿ ಪ್ರಧಾನಿ ಶ್ರೀ ಮೋದಿ ಮಾತು :** ಬ್ರಿಕ್ಸ್ ಸಭೆಯಲ್ಲಿ ಮಾತನಾಡಿ ಪ್ರಧಾನಿ ಮೋದಿ ಭಯೋತ್ಪಾದನೆಯ ವಿರುದ್ದ ಕಿಡಿಕಾರಿದರು. ಭಯೋತ್ಪಾದನೆ ವಿರುದ್ದ ಹೋರಾಡಲು ಏಕಚಿತ್ತದಿಂದ ಗಮನವನ್ನು ಕೇಂದ್ರೀಕರಿಸಬೇಕು ಜೊತೆಗೆ ಆ ಪ್ರಯತ್ನದಲ್ಲಿ ಎಲ್ಲರೂ ದೃಢವಾದ ಬೆಂಬಲ ನೀಡಬೇಕು ಎಂದು ಕರೆ ನೀಡಿದರು. ಭಯೋತ್ಪಾದನೆಯ ಸವಾಲು ಎದುರಿಸುವಲ್ಲಿ ಇಬ್ಬಗೆ ಧೋರಣೆಗೆ ಅವಕಾಶವೇ ಇಲ್ಲವೆಂದು ಅಭಿಪ್ರಾಯ ವ್ಯಕ್ತಪಡಿಸಿದರು. ನಮ್ಮ ನಮ್ಮ ದೇಶಗಳಲ್ಲಿ ಯುವಕರು ಉಗ್ರಗಾಮಿಗಳನ್ನಾಗಿ ಮಾಡುವುದನ್ನು ತಡೆಯಲು ಕಠಿಣ ಕ್ರಮ ತೆಗೆದುಕೊಳ್ಳಬೇಕು ಎಂದು ಬ್ರಿಕ್ಸ್ ನಾಯಕರ ಸಮ್ಮುಖದಲ್ಲಿ ಪ್ರತಿಪಾದಿಸಿದರು. ಮುಂದುವರೆದು

ಭಯೋತ್ಪಾದನೆ ಹಾಗೂ ಅದಕ್ಕೆ ಆರ್ಥಿಕ ನೆರವು ಒದಗಿಸುವುದನ್ನು ತಡೆಯಲು ಸ್ಥಿರವಾದ ಮನಸ್ಸು ಮತ್ತು ಎಲ್ಲರ ಬೆಂಬಲ ಅಗತ್ಯ ಎಂದು ತಿಳಿಸಿದರು. ಪಾಕ್ ಮೂಲದ ಕೆಲವರನ್ನು ಘೋಷಿತ ಉಗ್ರರು ಎಂದು ಸಾರುವ ವಿಶ್ವಸಂಸ್ಥೆಯಲ್ಲಿ ಮಂಡನೆಯಾದ ಪ್ರಸ್ತಾವನೆಗೆ ಚೀನಾ ಅಡ್ಡಿಪಡಿಸಿದ್ದರಿಂದ ಇಬ್ಬಗೆ ನೀತಿ ವಿಚಾರವಾಗಿ ಚೀನಾಕ್ಕೆ ಟಾಂಗ್ ನೀಡಿದರು. ಅಂತಾರಾಷ್ಟ್ರೀಯ ಭಯೋತ್ಪಾದನೆ ಕುರಿತ ಸಮಗ್ರ ನಿಯಮದ ವಿಚಾರ ವಿಶ್ವಸಂಸ್ಥೆಯಲ್ಲಿ ದೀರ್ಘಕಾಲದಿಂದ ಬಾಕಿ ಉಳಿದ್ದಿದ್ದು ಆ ಸಂಬಂಧ ನಾವೆಲ್ಲ ಕೆಲಸ ಮಾಡಬೇಕಾಗಿದೆ ಎಂದು ಹೇಳಿದರು. ಜೊತೆಜೊತೆಗೆ ಸೈಬರ್ ಭದ್ರತೆ ಹಾಗೂ ಸುರಕ್ಷಿತ ಕೃತಕ ಬುದ್ಧಿವಂತ್ತೆ ವಿಚಾರದಲ್ಲೂ ಜಾಗತಿಕ ನಿಯಮಗಳಿಗಾಗಿ ವಿಶ್ರಮಿಸುವುದು ಅಗತ್ಯ ಎಂದು ಅವರು ಎಚ್ಚರಿಸಿದರು.

**ಬ್ರಿಕ್ಸ್ ಶೃಂಗ ಸಭೆಯಲ್ಲಿ ಭಾರತ-ಚೀನಾ ಮಾತುಕತೆ :** ಬ್ರಿಕ್ಸ್ ಶೃಂಗ ಸಭೆಯಲ್ಲಿ ಪ್ರಧಾನಿ ಮೋದಿ ಮತ್ತು ಚೀನಾದ ಅಧ್ಯಕ್ಷ ಜಿನ್‌ಪಿಂಗ್ ಮಾತುಕತೆ ನಡೆಸಿದರು. ಈ ಸಂದರ್ಭದಲ್ಲಿ ಗಡಿಯಲ್ಲಿನ ಗಸ್ತು, ಸೇನಾ ವಾಪಸಾತಿಗೆ ಸಹಮತ ವ್ಯಕ್ತಪಡಿಸಿದರು. ಲಡಾಖ್ ಗಾಲ್ವಾನ್‌ನಲ್ಲಿ ನಡೆದ ಘರ್ಷಣೆಯ ನಂತರ ತೀವ್ರ ಹದಗೆಟ್ಟಿದ್ದ ಭಾರತ-ಚೀನಾ ನಡುವಿನ ಸಂಬಂಧ ಈಗ ಮತ್ತೆ ಸುಧಾರಿಸುವ ಲಕ್ಷಣ ಕಾಣುತ್ತಿದೆ. ಇದಕ್ಕೆ ವೇದಿಕೆಯಾಗಿದ್ದು ರಷ್ಯಾದಲ್ಲಿ ನಡೆದ ಬ್ರಿಕ್ಸ್ ಶೃಂಗ ಸಭೆ. ಇಲ್ಲಿ ಉಭಯ ನಾಯಕರು ಮಹತ್ವದ ಮಾತುಕತೆ ನಡೆಸಿದ್ದು, ಗಡಿಯಲ್ಲಿ ಶಾಂತಿ, ಪರಸ್ಪರ ನಂಬಿಕೆ ಮತ್ತು ಗೌರವದಿಂದ ಮಾತ್ರ ಎರಡೂ ದೇಶಗಳ ನಡುವೆ ಸ್ನೇಹ ಮುಂದುವರಿಯಲು ಸಾಧ್ಯ ಎಂದು ಪ್ರಧಾನಿ ಶ್ರೀ ಮೋದಿ ಚೀನಾದ ಅಧ್ಯಕ್ಷರಿಗೆ ಸ್ಪಷ್ಟಪಡಿಸಿದರು. ಇದಕ್ಕೆ ಚೀನಾ ಸಹಮತ ವ್ಯಕ್ತಪಡಿಸಿದ್ದು, ಗಡಿಯಲ್ಲಿನ ಸೇನೆ ವಾಪಸಾತಿಗೆ ಒಪ್ಪಿಗೆ ವ್ಯಕ್ತಪಡಿಸಿದೆ.

2019 ರ ನಂತರ ಉಭಯ ನಾಯಕರ ನಡುವೆ ಇದು ಮೊದಲ ದ್ವಿಪಕ್ಷೀಯ ಮಾತುಕತೆಯಾಗಿದ್ದು, ವಿವಾದವನ್ನು ಬಗೆ ಹರಿಸುವಲ್ಲಿ ಮತ್ತು ಗಡಿ ಭಾಗದಲ್ಲಿ ಶಾಂತಿ ನೆಮ್ಮದಿ ನೆಲೆಸುವಂತಾಗುವಲ್ಲಿ ಭಾರತ-ಚೀನಾ ಗಡಿ ಪ್ರಶ್ನೆ ಕುರಿತ ವಿಶೇಷ ಪ್ರತಿನಿಧಿಗಳಿಗೆ ನಿರ್ಣಾಯಕ ಪಾತ್ರವಿದೆ ಎಂದು ಹೇಳಿದ್ದಾರೆ. ಭಾರತ- ಚೀನಾ ಸ್ನೇಹ ಹಸ್ತಕ್ಕೆ ಮುಂದಾಗಿದ್ದು, ಕುತಂತ್ರಿ ಚೀನಾ ಎಷ್ಟರ ಮಟ್ಟಿಗೆ ಈ ಸ್ನೇಹವನ್ನು ಮುಂದುವರೆಸಲಿದೆ ಎಂದು ಕಾದು ನೋಡಬೇಕಾಗಿದೆ.

**ಭಾರತ- ರಷ್ಯಾ ಮಾತುಕತೆ :** ಬ್ರಿಕ್ಸ್ ಶೃಂಗ ಸಭೆಯ ಸಮಯದಲ್ಲೆ ಪ್ರಧಾನಿ ಮೋದಿ ಮತ್ತು ರಷ್ಯಾ ಅಧ್ಯಕ್ಷ ವ್ಲಾಡಿಮರ್ ಪುಟಿನ್ ಅವರು ದ್ವಿಪಕ್ಷೀಯ ಮಾತುಕತೆ ನಡೆಸಿದರು. ಈ ಸಂದರ್ಭದಲ್ಲಿ ರಷ್ಯಾ ಮತ್ತು ಉಕ್ರೇನ್ ನಡುವಿನ ಯುದ್ಧದ ವಿಚಾರವನ್ನೂ ಮೋದಿ ಅವರು ಪ್ರಸ್ತಾಪಿಸಿದ್ದು, ಶಾಂತಿಯುತವಾಗಿ ಬಗೆಹರಿಯಬೇಕು ಎಂದು ಪ್ರತಿಪಾದಿಸಿದರು. ಇದಕ್ಕೆ ಪೂರಕವಾಗಿ ರಷ್ಯ ಸಹ ಶಾಂತಿಯುತ ಪರಿಹಾರಕ್ಕೆ ಭಾರತದ ಸಹಾಯ ಹಸ್ತ ಚಾಚಿದ್ದು, ನಮ್ಮೆಲ್ಲ



## ರಷ್ಯಾ-ಉಕ್ರೇನ್ ಸಂಧಾನಕ್ಕೆ ಭಾರತ ಸಹಕಾರ

**ಬ್ರಿಕ್ಸ್ ಶೃಂಗ ಸಭೆಯಲ್ಲಿ ಭಾಗಿಯಾಗಿದ್ದ ಮೋದಿ, ಉಕ್ರೇನ್ ಜೊತೆಗಿನ ಯುದ್ಧಕ್ಕೆ ತೆರೆ ಎಳೆದು ಶಾಂತಿ ಸ್ಥಾಪಿಸುವ ಪ್ರಯತ್ನಕ್ಕೆ ಸಂಪೂರ್ಣ ಸಹಕಾರ ನೀಡುವ ವಾಗ್ದಾನ ನೀಡಿದ್ದಾರೆ. ಇನ್ನು ರಷ್ಯಾ ಅಧ್ಯಕ್ಷ ಪುತಿನ್ ಮತ್ತು ಮೋದಿ ಪರಸ್ಪರ ಆಲಂಗಿಸಿಕೊಂಡಿದ್ದು ಅನೇಕ ವಿದೇಶಿ ನಾಯಕರ ಹುಬ್ಬೇರಿಸುವಂತೆ ಮಾಡಿರುವುದಂತು ಸತ್ಯ.**

ಪ್ರಯತ್ನಗಳನ್ನು ನಡೆಸಿ ಸಮರ ನಿಲ್ಲಿಸಿ ಶಾಂತಿ ನೆಲೆಸಲು ಸಹಕರಿಸುವುದಾಗಿ ಮೋದಿ ತಿಳಿಸಿದರು. ಇನ್ನು ಬ್ರಿಕ್ಸ್ ಕೂಟದ ಈ ವರ್ಷದ ಅಧ್ಯಕ್ಷ ಸ್ಥಾನ ವಹಿಸಿ ಯಶಸ್ವಿಯಾಗಿ ನಿರ್ವಹಿಸಿದ್ದಕ್ಕೆ ಮೋದಿ ಅವರು ರಷ್ಯಾವನ್ನು ಅಭಿನಂದಿಸಿದರು.

**ಪುತಿನ್ ಮಾತಿಗೆ-ನಗುವಿನ ಸಾಕ್ಷಿ :** ಮೋದಿ ಮತ್ತು ಪುಟಿನ್ ದ್ವಿಪಕ್ಷೀಯ ಮಾತುಕತೆಯಲ್ಲಿ, ಪುಟಿನ್ ಅವರು ನಮ್ಮ ಮತ್ತು ಭಾರತದ ಬಾಂಧವ್ಯ ಹೇಗಿದೆಯೆಂದರೆ, ನನ್ನ ಮಾತುಗಳು ಅರ್ಥವಾಗಲು ಮೋದಿ ಅವರಿಗೆ ಅನುವಾದದ ಅಗತ್ಯವೇ ಇಲ್ಲ ಎಂದು ಹೇಳಿದರು. ಇದಕ್ಕೆ ಮೋದಿಯವರು ಬಾಯಿ ತುಂಬ ನಗುವ ಮೂಲಕ ಪುಷ್ಟಿಕರಿಸಿದ್ದು ವಿಶೇಷವಾಗಿತ್ತು.

ಒಟ್ಟಾರೆ ಭಾರತದ ನೀತಿ, ನಿರ್ಧಾರಗಳ ಬಗ್ಗೆ ಇಡೀ ವಿಶ್ವ ಕಾತುರದಿಂದ ಕಾಯುತ್ತಿರುವ ಸಮಯದಲ್ಲಿ ಬ್ರಿಕ್ಸ್ ಶೃಂಗಸಭೆಯಲ್ಲಿನ ಭಾರತದ ನಿಲುವು, ನಿರ್ಧಾರ, ಪ್ರತಿಪಾದನೆ ಮತ್ತು ಭಾರತದ ಪ್ರಾಮುಖ್ಯತೆಯ ಬಗ್ಗೆ ಎಲ್ಲರ ಗಮನ ಕೇಂದ್ರಿಕರಿಸಿದ್ದಂತು ಸತ್ಯ. ಯಶಸ್ವಿಯಾಗಿ ನಡೆದ ಬ್ರಿಕ್ಸ್ ಸಭೆಯು, ಭಾರತದ ಹಿರಿಮೆಯನ್ನು ಹೆಚ್ಚಿಸುವಲ್ಲಿ, ನಾಯಕತ್ವದ ವಹಿಸುವಲ್ಲಿ ಮೋದಿಯವರು ಸಹ ಯಶಸ್ವಿಯಾಗಿದ್ದರ ದ್ಯೋತಕವಾಗಿತ್ತು.

# ಪಾರ್ಟಿ ವಿತ್ ಡಿಫರೆನ್ಸ್ ಮತ್ತು ಸಂಘಟನಾ ಪರ್ವ






**ರತನ್ ರಮೇಶ್ ಪೂಜಾರಿ**

ರಾಜ್ಯ ಮಾಧ್ಯಮ ಸಮಿತಿ ಸದಸ್ಯರು,
ಬಿಜೆಪಿ ಕರ್ನಾಟಕ


**ಭಾರತ ಅತ್ಯಂತ ದೊಡ್ಡ ಪ್ರಜಾಪ್ರಭುತ್ವ ದೇಶ ಹಾಗೂ ಅತ್ಯಂತ ಹೆಚ್ಚು ಜನಸಂಖ್ಯೆಯನ್ನು ಹೊಂದಿರುವ ಪ್ರಜಾಪ್ರಭುತ್ವ ದೇಶ. ಕಳೆದ 78 ವರ್ಷಗಳಲ್ಲಿ ನಿರಂತರವಾಗಿ ಯಾವುದೇ ಗೊಂದಲವಿಲ್ಲದೆ ಈ ದೇಶದಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಅಧಿಕಾರದ ಹಸ್ತಾಂತರವಾಗಿದೆ. ಈ ಪ್ರಜಾಪ್ರಭುತ್ವ ವ್ಯವಸ್ಥೆ ಇನ್ನಷ್ಟು ಬಲಿಷ್ಠವಾಗಬೇಕು ಮತ್ತು ಗ್ರಾಮಾಂತರ ವ್ಯವಸ್ಥೆಗಳಲ್ಲಿ ಕೂಡ ಪ್ರಜಾಪ್ರಭುತ್ವ ವ್ಯವಸ್ಥೆಯ ಅರ್ಥವನ್ನು ಮನಗಾಣಬೇಕು ಎಂದರೆ ಪ್ರಜಾಪ್ರಭುತ್ವದಲ್ಲಿ ಭಾಗವಹಿಸುವ ರಾಜಕೀಯ ಪಕ್ಷಗಳಲ್ಲಿ ಈ ರೀತಿಯ ಆಂತರಿಕ ಪ್ರಜಾಪ್ರಭುತ್ವ ನೆಲಗಟ್ಟಾಗುವ ದೃಷ್ಟಿಯಿಂದ ಬಿಜೆಪಿಯು ಆಂತರಿಕ ಪ್ರಜಾಪ್ರಭುತ್ವವನ್ನು ಆಂತರಿಕವಾಗಿಯೂ ಅಳವಡಿಸಿಕೊಂಡಿದೆ.**

ಆಂತರಿಕ ಪ್ರಜಾಪ್ರಭುತ್ವದ ಮೂಲಕ ರಾಷ್ಟ್ರೀಯ ಪ್ರಜಾಪ್ರಭುತ್ವವನ್ನು ಗಟ್ಟಿಗೊಳಿಸುವ ಸಂಘಟನಾ ಪರ್ವ ಭಾರತೀಯ ಜನತಾ ಪಾರ್ಟಿ ಈ ದೇಶದ ರಾಜಕೀಯ ಪಕ್ಷಗಳಲ್ಲಿ ಒಂದು ವಿಭಿನ್ನವಾದ ರಾಜಕೀಯ ಪಕ್ಷ. ಒಂದು ರಾಷ್ಟ್ರೀಯ ಪಕ್ಷವಾಗಿ ತನ್ನ ಪಂಚ ನಿಷ್ಠೆಗಳಲ್ಲಿ ಅತ್ಯಂತ ಪ್ರಮುಖ ಅಂಗವಾದ ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇಟ್ಟಿರುವ ಏಕೈಕ ಪಕ್ಷ ಭಾರತೀಯ ಜನತಾ ಪಕ್ಷ. ಪಕ್ಷ ಸ್ಥಾಪನೆಯಾದಾಗಿನಿಂದ ಇಲ್ಲಿಯವರೆಗೆ ಆಂತರಿಕ ಪ್ರಜಾಪ್ರಭುತ್ವವನ್ನು ಅನುಷ್ಠಾನಗಳಿಸಿಕೊಂಡು ಆಂತರಿಕ ಚುನಾವಣೆಗಳನ್ನು ಅತ್ಯಂತ ಸಮರ್ಪಕವಾಗಿ ಮತ್ತು ಪರಿಣಾಮಕಾರಿಯಾಗಿ ನಡೆಸಿಕೊಂಡು ಬಂದಿದೆ. ಆದ್ದರಿಂದ ನಮ್ಮ ಪಕ್ಷದಲ್ಲಿ ಮೂರು ವರ್ಷಕ್ಕೊಮ್ಮೆ ರಾಷ್ಟ್ರಮಟ್ಟದಿಂದ ಹಿಡಿದು ಬೂತ್ ಸಮಿತಿಯವರೆಗೆ ಸಂಘಟನಾತ್ಮಕವಾಗಿ ಹೊಸ ಪದಾಧಿಕಾರಿಗಳನ್ನು ಪ್ರಜಾಪ್ರಭುತ್ವ ವಿಧಿವಿಧಾನಗಳಿಗನುಗುಣವಾಗಿ ಆಯ್ಕೆ ಮಾಡಲಾಗುತ್ತದೆ. ಆ ರೀತಿಯ ಸಂಘಟನಾ ಪರ್ವ (ಚುನಾವಣೆ ಎಂದು ನಾವು ಕರೆಯೋದಿಲ್ಲ) ಸೆಪ್ಟೆಂಬರ್ 2ನೇ ತಾರೀಖಿನಿಂದ ನಮ್ಮ ರಾಜ್ಯದಲ್ಲಿ ಪ್ರಾರಂಭ ಆಗಿದೆ.

ಒಟ್ಟು ಸಂಘಟನಾ ಪರ್ವದ ಉದ್ದೇಶವಿರುವಂಥದ್ದು ಆಂತರಿಕ ಪ್ರಜಾಪ್ರಭುತ್ವದ ಅನುಷ್ಠಾನ ಮತ್ತು ಕ್ರಮಬದ್ಧವಾಗಿ ಮೂರು ವರ್ಷಕ್ಕೊಮ್ಮೆ ರಾಷ್ಟ್ರಮಟ್ಟದಿಂದ ಹಿಡಿದು ಬೂತ್ ಸಮಿತಿಯವರೆಗೆ ಸಮಿತಿಗಳ ರಚನೆ. ಇಂದು ಇದು ಇಡೀ ದೇಶದಲ್ಲಿ ನಡೆಯುತ್ತಿದೆ. ಕರ್ನಾಟಕದಲ್ಲಿ ಕೂಡ ಅತ್ಯಂತ ವ್ಯವಸ್ಥಿತವಾಗಿ ನಡೆಯುತ್ತಿದೆ. ಈಗಾಗಲೇ ರಾಷ್ಟ್ರಮಟ್ಟದಲ್ಲಿ ಸುಮಾರು 10 ಕೋಟಿ 75 ಲಕ್ಷದಷ್ಟು ಪ್ರಾಥಮಿಕ ಸದಸ್ಯರ ನೊಂದಾವಣಿ ಆಗಿದೆ. ಜೊತೆಗೆ ಬೂತ್ ಸಮಿತಿಗಳ ರಚನೆ ಕಾರ್ಯವು ಕೂಡ ಅತ್ಯಂತ ಭರದಿಂದ ಸಾಗುತ್ತಿದೆ. ಈ ತಿಂಗಳಿನ 27ನೇ ತಾರೀಕಿನ ಒಳಗೆ ರಾಜ್ಯದ ಎಲ್ಲಾ ಬೂತ್ ಸಮಿತಿಗಳ ರಚನೆಯಾಗಲಿದೆ ಎಂಬ ನಿರೀಕ್ಷೆ ಇದೆ. ಭಾರತೀಯ ಜನತಾ ಪಾರ್ಟಿ ಒಂದು ವಿಭಿನ್ನವಾದ ರಾಜಕೀಯ ಪಕ್ಷ. ಯಾಕೆಂದರೆ ನಾವು ಐದು ಪ್ರಮುಖ ಸಿದ್ಧಾಂತಗಳಲ್ಲಿ ನಂಬಿಕೆ ಇಟ್ಟುಕೊಂಡಿದ್ದೇವೆ. ಅದನ್ನು ನಾವು 'ಪಂಚನಿಷ್ಠೆ' ಎಂದು ಕರೆಯುತ್ತೇವೆ. ಯಾರು ಭಾರತೀಯ ಜನತಾ ಪಾರ್ಟಿಯ ಅಧಿಕೃತ ಸದಸ್ಯರಾಗುತ್ತಾರೋ, ಅವರು ಈ ಪಂಚ ನಿಷ್ಠೆಗಳಲ್ಲಿ ತನ್ನ ನಂಬಿಕೆಯನ್ನು ಪ್ರಕಟಿಗೊಳಿಸಬೇಕು. ಈ ಐದು ನಂಬಿಕೆಗಳು ಅಥವಾ ನಿಷ್ಠೆಗಳು ಯಾವುದೆಂದರೆ: 1. ರಾಷ್ಟ್ರೀಯತೆ ಮತ್ತು ರಾಷ್ಟ್ರೀಯ ಸಮಗ್ರತೆ. 2. ಪ್ರಜಾಪ್ರಭುತ್ವದಲ್ಲಿ ನಂಬಿಕೆ. 3. ಗಾಂಧಿ ಪ್ರಣೀತ ಸಮಾಜವಾದ. 4. ನೈಜ ಜಾತ್ಯಾತೀತತೆ ಅಥವಾ ಸರ್ವಪಂಥ ಸಮಭಾವ. 5. ಮೌಲ್ಯಾಧಾರಿತ ರಾಜಕಾರಣ. ಈ ಐದು ನಿಷ್ಠೆಗಳನ್ನು ಅವಲೋಕನ ಮಾಡಿದರೆ ಮತ್ತು ವಿಸ್ತೃತ ಮಾಡುವ ಪ್ರಯತ್ನವನ್ನು ಮಾಡಿದರೆ ರಾಜಕಾರಣದಲ್ಲಿ ಭಾರತೀಯ ಜನತಾ ಪಾರ್ಟಿ ಯಾಕೆ ವಿಭಿನ್ನ ಪಕ್ಷ ಎನ್ನುವಂತದ್ದು ನಮ್ಮೆಲ್ಲರಿಗೂ



# ಸಂಘಟನಾ ಪರ್ವ

ನಮ್ಮ ರಾಜ್ಯದಲ್ಲಿ ಈ ಸಂಘಟನಾ ಪರ್ವವನ್ನು ನಾವು **ಮೂರು ಹಂತ**ಗಳಲ್ಲಿ ಮಾಡುತ್ತಿದ್ದೇವೆ. ಒಂದು **ಪ್ರಾಥಮಿಕ ಸದಸ್ಯತಾ ಅಭಿಯಾನ.** ಅಂದರೆ ತಳಮಟ್ಟದಿಂದ ಸರ್ವಸ್ಪರ್ಶಿ ಸರ್ವವ್ಯಾಪಿ ಅನ್ನುವ ರೀತಿನಲ್ಲಿ ಬೂತ್ ಮಟ್ಟದಿಂದ ಪಕ್ಷಕ್ಕೆ ಅಧಿಕೃತವಾಗಿ ಸದಸ್ಯರನ್ನು ಮರು ನೊಂದಣಿ ಮತ್ತು ಹೊಸ ನೊಂದಣಿ ಮಾಡಿಕೊಳ್ಳಲಾಗುತ್ತದೆ. ಈ ಒಂದು ಸದಸ್ಯತಾ ಅಭಿಯಾನ ಅಥವಾ ಪ್ರಾಥಮಿಕ ಸದಸ್ಯತಾ ಅಭಿಯಾನದಡಿಯಲ್ಲಿ ಯಾರು 50 ಕ್ಕಿಂತ ಹೆಚ್ಚು ಸದಸ್ಯರನ್ನು ಮಾಡುತ್ತಾರೆ ಮತ್ತು ಯಾರು ಪಕ್ಷಕ್ಕೆ ನೂರು ರೂಪಾಯಿ ಅಧಿಕೃತ ದೇಣಿಗೆ ನೀಡಿ ಸಕ್ರಿಯ ಸದಸ್ಯರಾಗುತ್ತಾರೋ ಅವರನ್ನು ಗುರುತಿಸುವ ಪ್ರಯತ್ನ ಆಗುತ್ತದೆ.

ಹಾಗೆ ಮೊದಲ ಹಂತದಲ್ಲಿ ಪ್ರಾಥಮಿಕ ಸದಸ್ಯತ್ವ, ಎರಡನೇ ಹಂತದಲ್ಲಿ ಸಕ್ರಿಯ ಸದಸ್ಯತ್ವ ಮತ್ತು ಈ ಎರಡು ಪ್ರಕ್ರಿಯೆ ಆಧಾರದಲ್ಲಿ **ಬೂತ್ ಸಮಿತಿಯ ರಚನೆ** ಇದು ಮೂರನೇ ಹಂತದಲ್ಲಾಗುತ್ತದೆ. ಬೂತ್ ಸಮಿತಿ ರಚನೆಯಾದಾಗ **ಮಂಡಲ ಸಮಿತಿ ರಚನೆ** ಮಾಡುವ ಅರ್ಹತೆ ಬರುತ್ತದೆ.

ಒಂದು ಸಲ ರಾಷ್ಟ್ರಮಟ್ಟದ ಹಂತದಲ್ಲಿರುವ ಎಲ್ಲಾ ಬೂತ್‌ಗಳಲ್ಲಿ ಬೂತ್ ಸಮಿತಿಗಳು ರಚನೆಯಾದ ಮೇಲೆ ಮುಂದಿನ ಹಂತದಲ್ಲಿ ಮಂಡಲ ಅಥವಾ ವಿಧಾನಸಭಾ ಕ್ಷೇತ್ರದ ಸಮಿತಿಯನ್ನು ರಚನೆ ಮಾಡಲಾಗುತ್ತದೆ. ಮಂಡಲ ಸಮಿತಿಯ ರಚನೆಯಾದ ಮೇಲೆ ಮಂಡಲ ಸಮಿತಿಯ ರಚನೆಯ ಅರ್ಹತೆಯ ಆಧಾರದ ಮೇಲೆ ಜಿಲ್ಲಾ ಸಮಿತಿಗಳನ್ನು ರಚನೆ ಮಾಡಲಾಗುತ್ತದೆ.

ಜಿಲ್ಲಾ ಸಮಿತಿಯ ರಚನೆಯ ಅರ್ಹತೆಯ ಆಧಾರದಲ್ಲಿ ರಾಜ್ಯ ಸಮಿತಿಯನ್ನು ರಚನೆ ಮಾಡಲಾಗುತ್ತದೆ. ಮತ್ತು ಇದೇ ಆಧಾರದಲ್ಲಿ ಮುಂದೆ ರಾಷ್ಟ್ರೀಯ ಸಮಿತಿಯನ್ನು ರಚನೆ ಮಾಡಲಾಗುತ್ತದೆ.

ಮನದಟ್ಟಾಗುತ್ತದೆ. ಮತ್ತು ಈ ಪಂಚ ನಿಷ್ಠೆಗಳ ಆಧಾರದಲ್ಲಿ ಆಂತರಿಕ ಪ್ರಜಾಪ್ರಭುತ್ವವನ್ನು ಬೂತ್ ಮಟ್ಟದಿಂದಲೇ ಪ್ರಕಟಗೊಳಿಸುವಂಥ ಒಂದು ಪ್ರಾಮಾಣಿಕ ಪ್ರಯತ್ನವೇ ನಮ್ಮ ಸಂಘಟನಾ ಪರ್ವಾದ ಉದ್ದೇಶ.

ಒಟ್ಟು ಭಾರತೀಯ ರಾಜಕಾರಣದ ವ್ಯವಸ್ಥೆಯಲ್ಲಿ ಅತ್ಯಂತ ಪ್ರಮುಖವಾದ ಪಾತ್ರ ರಾಜಕೀಯ ಪಕ್ಷಗಳದ್ದು. ಭಾರತ ಅತ್ಯಂತ ದೊಡ್ಡ ಪ್ರಜಾಪ್ರಭುತ್ವ ದೇಶ ಹಾಗೂ ಅತ್ಯಂತ ಹೆಚ್ಚು ಜನಸಂಖ್ಯೆಯನ್ನು ಹೊಂದಿರುವ ಪ್ರಜಾಪ್ರಭುತ್ವ ದೇಶ. ಕಳೆದ 78 ವರ್ಷಗಳಲ್ಲಿ ನಿರಂತರವಾಗಿ ಯಾವುದೇ ಗೊಂದಲವಿಲ್ಲದೆ ಈ ದೇಶದಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಅಧಿಕಾರದ ಹಸ್ತಾಂತರವಾಗಿದೆ. ಈ ಪ್ರಜಾಪ್ರಭುತ್ವ ವ್ಯವಸ್ಥೆ ಇನ್ನಷ್ಟು ಬಲಿಷ್ಠವಾಗಬೇಕು ಮತ್ತು ಗ್ರಾಮಾಂತರ ವ್ಯವಸ್ಥೆಗಳಲ್ಲಿ ಕೂಡ ಪ್ರಜಾಪ್ರಭುತ್ವ ವ್ಯವಸ್ಥೆಯ ಅರ್ಥವನ್ನು ಮನಗಾಣಬೇಕು ಎಂದರೆ ಪ್ರಜಾಪ್ರಭುತ್ವದಲ್ಲಿ ಭಾಗವಹಿಸುವ ರಾಜಕೀಯ ಪಕ್ಷಗಳಲ್ಲಿ ಈ ರೀತಿಯ ಆಂತರಿಕ ಪ್ರಜಾಪ್ರಭುತ್ವ ನೆಲಗಟ್ಟಾಗುವ ದೃಷ್ಟಿಯಿಂದ ಬಿಜೆಪಿಯು ಆಂತರಿಕ ಪ್ರಜಾಪ್ರಭುತ್ವವನ್ನು ಆಂತರಿಕವಾಗಿಯೂ ಅಳವಡಿಸಿಕೊಂಡಿದೆ. ಇದಾಗದಿದ್ದ ಇನ್ನಿತರ ಪಕ್ಷಗಳನ್ನು ಒಂದೇ ಕುಟುಂಬಗಳು ನಿರ್ವಹಿಸುವಂತಹ, ಪ್ರಾಬಲ್ಯ ಸಧಿಸುವಂತಹ ಅನೇಕ ಪ್ರಸಂಗಗಳನ್ನು ನಾವು ನಮ್ಮ ದೇಶದ ರಾಜಕಾರಣದಲ್ಲಿ ಕಾಣಸಿಗುತ್ತವೆ. ಇದಕ್ಕೆ ಭಿನ್ನವಾಗಿ ಭಾರತೀಯ ಜನತಾ ಪಾರ್ಟಿ ವಂಶವಾದ ಅಥವಾ ಕುಟುಂಬಧಾರಿತ ಪಕ್ಷಗಳ ನಿರ್ವಹಣೆಯನ್ನು ಬೆಂಬಲಿಸದೇ, ಆಂತರಿಕ ಪ್ರಜಾಪ್ರಭುತ್ವವನ್ನು ಎಲ್ಲಾ ಹಂತದಲ್ಲಿ ಅನುಸರಿಸುವ ಮೂಲಕ ಪ್ರಜಾಪ್ರಭುತ್ವಕ್ಕೆ ಇನ್ನಷ್ಟು ಮೌಲ್ಯವನ್ನು ತುಂಬುವಂತಹ ಕೆಲಸವನ್ನು ಮಾಡಿಕೊಂಡು ಬಂದಿದೆ.

ಕಳೆದ ಸೆಪ್ಟೆಂಬರ್ 2ರಿಂದ ಇಲ್ಲಿಯವರೆಗೆ ರಾಷ್ಟ್ರಾದ್ಯಂತ ಲಕ್ಷಾಂತರ ಕಾರ್ಯಕರ್ತರು ಈ ನಿಟ್ಟಿನಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಬಲಪಡಿಸಲು ಹಾಗೂ ಆಂತರಿಕ ಪ್ರಜಾಪ್ರಭುತ್ವವನ್ನು ಅನುಷ್ಠಾನಗೊಳಿಸುವುದಕ್ಕಾಗಿ ಬೂತ್ ಮಟ್ಟದಿಂದ ಹಿಡಿದು ರಾಷ್ಟ್ರೀಯ ಮಟ್ಟದವರೆಗೆ ಸದಸ್ಯರನ್ನು ನೋಂದಾವಣೆ ಮಾಡುವುದರ ಜೊತೆಗೆ ಬೂತ್ ಸಮಿತಿ, ಮಂಡಲ ಸಮಿತಿ, ಜಿಲ್ಲಾ ಸಮಿತಿ, ರಾಜ್ಯ ಸಮಿತಿ, ರಾಷ್ಟ್ರ ಸಮಿತಿಯ ರಚನೆಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿರುವಂಥದ್ದು ಇಡೀ ಪ್ರಜಾಪ್ರಭುತ್ವ ವ್ಯವಸ್ಥೆಗೆ ಒಂದು ಕಿರೀಟಪ್ರಾಯ ಹಾಗೂ ನಾವೆಲ್ಲರೂ ಹೆಮ್ಮೆ ಪಡುವಂತ ಸಂಗತಿಯಾಗಿದೆ.


# 'ಬರಿಗಾಲ ಸಂತ'
## ಗುರುರಾಜ್ ಗಂಟಿಹೊಳೆ



ಸರಳ ಸಜ್ಜನಿಕೆಯ ರಾಜಕಾರಿಣಿ ಶ್ರೀ ಗುರುರಾಜ್ ಗಂಟಿಹೊಳೆ ರವರು ಬೈಂದೂರಿನ ಶಾಸಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಬರಿಗಾಲ ಸಂತನೆಂದೇ ಹೆಸರಾಗಿರುವ ಇವರ ನಡೆ ತಾವು ಸಂಘದಲ್ಲಿ ಪ್ರಚಾರಕರಾಗಿ ಸೇವೆ ಸಲ್ಲಿಸುವಾಗಿನಿಂದಲೂ ಬಂದಂತಹ ಹವ್ಯಾಸ. ಇವರ ಗೋಮಾತೆಯ ರಕ್ಷಣೆ ಕೇವಲ ಭಾಷಣಕ್ಕೆ ಸೀಮಿತವಾಗಿರದೆ '**ಗಂಟಿಧಾಮ**' ಎಂಬ ಹೆಸರಿನಲ್ಲಿ ಗೋಶಾಲೆ ನಿರ್ಮಾಣ ಮಾಡಿ ನಿತ್ಯ ಅದರಲ್ಲಿ ಗೋ ಸೇವಕನಂತೆ ಕೆಲಸ ಮಾಡುತ್ತಿದ್ದಾರೆ.

ಬೈಂದೂರು ಉತ್ಸವವನ್ನು ಅದ್ದೂರಿಯಾಗಿ ಆಯೋಜನೆ ಮಾಡಿ ಅದರಲ್ಲಿ ಯಶಸ್ಸು ಕಂಡು ಪ್ರತಿ ನಿತ್ಯವೂ ತಾವಾಯಿತು ತಮ್ಮ ಕೆಲಸವಾಯಿತು ಎಂದು ಬದುಕುತ್ತಿದ್ದ ಅಲ್ಲಿಯ ಜನರಿಗೆ ಮನೋರಂಜನೆಯನ್ನು ಉಣಬಡಿಸಿ, ರಾಜ್ಯದವರಲ್ಲದೆ ದೇಶ ವಿದೇಶದ ಪ್ರವಾಸಿಗರು ಬೈಂದೂರಿನತ್ತ ತಿರುಗುವಂತೆ ಮಾಡಿ ಅಲ್ಲಿನ ಪ್ರವಾಸೋದ್ಯಮದ ಮೂಲಕ ಸ್ಥಳೀಯರಿಗೆ ದುಡಿಮೆಯ ದಾರಿ ಮಾಡಿಕೊಡುವ ದೊಡ್ಡ ಪ್ರಯತ್ನದಲ್ಲಿ ಯಶಸ್ವಿಯಾಗಿರುವುದು ಶ್ಲಾಘನೀಯ ಹಾಗೂ ಅನುಕರಣೀಯ.

# ಭಾಷೆಯ ಮೂಲಕ ಭಂಜಿಸುವ ಕಾರ್ಯ...







ಸಂತೋಷ್ ತಮ್ಮಯ್ಯ
ಲೇಖಕರು


**ಸಾಂಸ್ಕೃತಿಕವಾಗಿ ಇಡೀ ಭಾರತ ಒಂದು ಎನ್ನುವುದನ್ನು ಒಪ್ಪದವರಿಗೆ ಪ್ರಾದೇಶಿಕತೆ ಎಂಬುದು ಪ್ರತ್ಯೇಕ ಎಂಬಂತೆ ಕಾಣತೊಡಗಿತು. ಅದರ ಪರಿಣಾಮವನ್ನು ತಮಿಳುನಾಡಿನ ಪೆರಿಯಾರ್ ಚಳವಳಿಯಲ್ಲಿ ನಾವು ನೋಡಿದ್ದೇವೆ. ಪಕ್ಷ ರಾಜಕಾರಣದ ಪೈಪೋಟಿಯಲ್ಲೂ ಕಂಡಿದ್ದೇವೆ. ಇವೆಲ್ಲವೂ ತನ್ನ ಭಾಷಾ ಪ್ರೀತಿಯನ್ನು ಉದ್ದೀಪಿಸುವುದರ ಜೊತೆಜೊತೆಗೇ ಅನ್ಯ ಭಾಷೆಯನ್ನು ದ್ವೇಷಿಸುವ ಹಂತಕ್ಕೆ ಮುಟ್ಟಿದೆ ಎನ್ನುವುದು ಅಪಾಯಕಾರಿ ಲಕ್ಷಣ. ಭಾರತದಂಥ ದೇಶದಲ್ಲಿ ಒಂದು ಭಾಷೆ ಮತ್ತೊಂದನ್ನು ಕೊಂದು ಬೆಳೆಯುತ್ತದೆ ಎನ್ನುವುದು ಶುದ್ಧ ಅವೈಜ್ಞಾನಿಕ ಸಂಗತಿಯಾದರೂ ಭಾಷಾಂಧ ವರ್ಗ ಅದನ್ನಿನ್ನೂ ನಂಬಿಕೊಂಡಿದೆ.**


**ಭಾ**ಷೆಯನ್ನು ಶಕ್ತಿ - ಯುಕ್ತಿ, ಕಡಲು - ಆಕಾಶ, ಸಿಡಿಲು-ಗುಡುಗುಗಳಿಗೂ ಹೋಲಿಸಿದವರಿದ್ದಾರೆ. ಭಾಷೆಯಿಂದ ನಾಗರಿಕತೆ, ಭಾಷೆಯಿಂದ ಪರಂಪರೆ, ಭಾಷೆಯಿಂದ ಸಂಸ್ಕೃತಿ ಎನ್ನುವ ವಿಶೇಷಣಗಳಂತೂ ಹಿಂದಿನಿಂದಲೂ ನಡೆದಿದ್ದು,ಇಂದಿಗೂ ನಡೆಯುತ್ತಿವೆ. ಎಲ್ಲಾ ಭಾಷೆಗಳೂ ಸಂಸ್ಕೃತಿಯ ವಾಹಕಗಳೆಂಬುದರ ಬಗ್ಗೆ ಇಂದು ಯಾರಿಗೂ ಸಂಶಯಗಳಿಲ್ಲ. ಯಾರೂ ಆಡದ ಭಾಷೆಗಳೂ ಇಂದು ನಿಕೃಷ್ಟ ಸ್ಥಾನದಲ್ಲಿಲ್ಲ ಎಂಬುದು ಭಾಷೆಗಿರುವ ಶಕ್ತಿಗೆ ಒಂದು ಉದಾಹರಣೆ.

ಭಾಷೆ ಬೆವರು ಹರಿಸಬೇಕು, ಅದರ ಮೂಲಕ ಅದನ್ನು ಬೆಳೆಸಬೇಕೆಂಬ ಸೂತ್ರಕ್ಕೆ ಇಂದು ಭಾಷಾ ಶಾಸ್ತ್ರಜ್ಞರೂ ಬಂದಿದ್ದಾರೆ. ಬೇರೆ ಬೇರೆ ಭಾಷೆಗಳ ಮೂಲಕ ಬೇರೆ ಬೇರೆ ನಾಗರೀಕತೆಗಳ ಅಧ್ಯಯನ ಮತ್ತು ಸಂಶೋಧನೆ ನಡೆಸಬಹುದು ಎಂಬಷ್ಟರಮಟ್ಟಿಗೆ ಇಂದು ಜಗತ್ತಿನ ಎಲ್ಲಾ ಭಾಷೆಗಳು ಎಲ್ಲರ ಭಾಷೆಗಳೂ ಆಗಿವೆ. ಕಿರಿದಾದ ಆಧುನಿಕ ಜಗತ್ತು ಆ ಮಟ್ಟಿಗೆ ಜ್ಞಾನದ ವಿಶಾಲತೆಯನ್ನು ನಾಗರಿಕರಿಗೆ ಒದಗಿಸಿದೆ. ಭಾಷೆ, ಲಿಪಿ ಮತ್ತು ನಾಗರಿಕತೆಗಳಿಗೆ ಇರುವ ನೇರಾನೇರಾ ಸಂಬಂಧಗಳಿಂದ ಭಾಷೆಗಳ ಜವಾಬ್ದಾರಿಗಳೂ ಇಂದು ಹೆಚ್ಚಿವೆ. ಎಲ್ಲಾ ಭಾಷೆಗಳಿಗೂ ಹಿನ್ನಲೆ, ಶ್ರೀಮಂತಿಕೆ ಇದೆ. ಏಕೆಂದರೆ ಅದು ಸಮಾಜದಲ್ಲಿ ಸಾಕಷ್ಟು ದುಡಿದು ಈ ಮಟ್ಟಿಗೆ ಇಂದು ಉಳಿದುಕೊಂಡಿವೆ.

ಭಾಷೆಗಳಲ್ಲಿ ವೈವಿಧ್ಯತೆ ಇದ್ದರೂ ಬಹಳ ವಿಚಾರಗಳಲ್ಲಿ ಎಲ್ಲಾ ಭಾಷೆಗಳ ಮನಸ್ಸುಗಳು ಒಂದೆ. ಸಂವಹನಗಳೇ ಅವುಗಳ ಜೀವಿತೋದ್ದೇಶ. ಲೋಕಕ್ಕೆ ಅರಿವನ್ನು ಮೂಡಿಸುತ್ತಲೇ ಅದು ತನ್ನೊಳಗಿನ ಅರಿವನ್ನು ಹೆಚ್ಚಿಸಿಕೊಳ್ಳುತ್ತಾ ಸಾಗುತ್ತದೆ. ಭಾಷೆ ಹರಿದಷ್ಟೂ ಅದು ಶಕ್ತಿಶಾಲಿಯಾಗುತ್ತದೆ ಎನ್ನುವುದು ಅದಕ್ಕೆ. ಶಕ್ತಿಶಾಲಿಯಾಗುವ ಭಾಷೆಯ ಮುಂದಿನ ಹಾದಿಯೇನು?

ಯಾಕೋ ಇಂಥ ಪ್ರಶ್ನೆ ಇಂದು ತೀರಾ ಗಂಭೀರವಾಗಿ

ಸಮಾಜದೆದುರು ನಿಂತಿದೆ ಎನಿಸುತ್ತದೆ. ಇಂದು ಜಗತ್ತು ಎಲ್ಲರಿಗೂ ಎಟುಕುವಂಥಾದರೂ ಭಾಷೆಗಳನ್ನು ಸಂಕುಚಿತಗೊಳಿಸುವ ಮಾನಸಿಕತೆ ಬೆಳೆಯುತ್ತಿರುವುದು ಕಂಡುಬರುತ್ತಿದೆ. ಭಾಷೆ ಮತ್ತು ಪ್ರಭುತ್ವ, ಭಾಷೆ ಮತ್ತು ಸಮುದಾಯ, ಭಾಷೆ ಮತ್ತು ಒಂದು ಗುಂಪಿನ ಪ್ರಾಚೀನತೆಗಳು ಅಗತ್ಯಕ್ಕಿಂತ ಹೆಚ್ಚು ವ್ಯಾಖ್ಯಾನಕ್ಕೊಳಗಾಗುತ್ತಿವೆ. ಭಾಷೆಯ ಪ್ರಾಚೀನತೆಯನ್ನು ಅಳೆಯುತ್ತಾ ಒಂದು ಸಮುದಾಯದ ಯಜಮಾನಿಕೆಯ ಗುಣವನ್ನು ಅಳೆಯುವ ಗುಣ ಇಂದು ಹೆಚ್ಚಿದೆ. ಯಾವಾಗ ಭಾಷೆಗಳಿಗೆ ಯಜಮಾನಿಕೆಯ ಗುಣ ಹೇರಿಕೆಯಾಗುತ್ತದೋ ಅದಕ್ಕೆ ತನ್ನದಲ್ಲದ ಇತರ ಭಾಷೆಯ ಮೇಲೆ ನಿಕೃಷ್ಟತನವೂ ಆವರಿಸುತ್ತದೆ. ಇಷ್ಟಾದಮೇಲೆ ಇನ್ನು ವೈಮನಸುಗಳು ಉಳಿದ ಕ್ಷೇತ್ರಗಳಿಗೆ ವ್ಯಾಪಿಸಲು ಹೆಚ್ಚು ಕಾಲವೇನೂ ಬೇಕಾಗುವುದಿಲ್ಲ. ಇವೆಲ್ಲದರ ಪರಿಣಾಮವಾಗಿ ವಿವಿಧತೆ ಇರುವ ಭಾರತದಲ್ಲಿ ಇಂದು ಭಾಷೆ ಕೂಡ ಸೂಕ್ಷ್ಮಸಂಗತಿಯಾಗಿ ಮಾರ್ಪಟ್ಟಿದೆ.



ಭಾಷೆಯೆಂಬುದು ಕೊಡುಕೊಳ್ಳುವಿಕೆ, ವಿಭಿನ್ನ ಸಂಸ್ಕೃತಿಯನ್ನು ಬೆಸೆಯಲು ಅದೇನೋ ಗುರು ಶಿಷ್ಯ ಸಂಬಂಧ, ರಾಜಾಶ್ರಯ, ವಾಕ್ಯಾರ್ಥಗಳನ್ನೇನು ಅವಲಂಬಿಸಿರಲಿಲ್ಲ. ಅತ್ಯಂತ ಸಹಜವಾಗಿ ಭಾಷೆ ಹರಿಯುತ್ತಿತ್ತು ಮತ್ತು ಸಮಾಜವನ್ನು ಬೆಸೆಯುತ್ತಿತ್ತು. ಆದರೆ ಯಾವಾಗ ಪಾಶ್ಚಾತ್ಯ ಸಂಶೋಧಕರು ಭಾರತೀಯ ಜ್ಞಾನ ಪರಂಪರೆಯ ಅಧ್ಯಯನವನ್ನು ಆರಂಭಿಸಿದರೋ ಆಗ ಉಳಿದ ಭಾರತೀಯ ಜ್ಞಾನದ ಶಾಖೆಗಳಂತೆ ಭಾಷೆಯ ವ್ಯಾಖ್ಯಾನವೂ ಕುಲಗೆಡುತ್ತಾ ಬಂದಿತು.

ಭಾಷೆ ಕುಲಗೆಡುವುದು ಎಂದರೆ ಅದರೊಳಗಿನ ಸಹಜತೆ ಮಾಯವಾಗಿ ಅಹಂಕಾರ ಮೂಡುವುದು. ಮುಂದಿನ ಎಲ್ಲಾ ಅಧ್ವಾನಗಳ ವಿವರಣೆಯ ಅಗತ್ಯವಿಲ್ಲ ಎನ್ನುವ ಮಟ್ಟಿಗೆ ಅದಿಂದು ಬೆಳೆದಿವೆ. ಪಾಶ್ಚಾತ್ಯ ವಿಚಾರಧಾರೆಗಳ ಮೂಸೆಯಲ್ಲಿ ಮೂಡಿಬಂದ ಪರಿಣಾಮ ದೇಶವನ್ನು ಭಂಜಿಸಲು ಸಿದ್ಧಾಂತಗಳು ನೆಲೆಯಾದವು. ಭಾರತ ಒಂದು ದೇಶವೇ ಆಗಿರಲ್ಲವೆಂದು ಬಿಂಬಿಸುವ ಅವಶ್ಯಕತೆ ಪಾಶ್ಚಾತ್ಯರಿಗಿತ್ತು. ಆಗ ಉಳಿದೆಲ್ಲಾ ಸಂಗತಿಗಳಂತೆ ಬಳಲಿದ್ದು ಭಾಷೆ.

ಪಾಶ್ಚಾತ್ಯರ ಪ್ರಜ್ಞಾಘಾತಕ್ಕೆ ಭಾಷೆಯೂ ಬಲಿಯಾಗಿ ಕೆಲವು ಭಾಷೆಗಳು ಮೃತ ಭಾಷೆಗಳೆಂದು ಬಿಂಬಿಸಲ್ಪಟ್ಟವು. ಇನ್ನು ಕೆಲವು ಯಾವ ಕೊಡುಕೊಳ್ಳುವಿಕೆಯಿಲ್ಲದೆ ಸ್ವತಂತ್ರವಾಗಿ ಬೆಳೆದವು ಎನಿಸಿಕೊಂಡವು. ಆರ್ಯ-ದ್ರಾವಿಡ ಮಿಥ್ಯೆಯ ಹಿಂದೆ ಕೂಡ ಭಾಷಾ ಭೇದದ ಮತ್ತೊಂದು ಅಸ್ತವಾಗಿ ಬಳಕೆಯಾದವು. ಮುಂದೆ ಅದು ಸಂಸ್ಕೃತಭೂಯಿಷ್ಠ ಪದಗಳನ್ನು ಕಿತ್ತು ಹಾಕುವವರೆಗೆ ಮುಂದುವರಿಯಿತು.

ಭಾಷಾವಾರು ಪ್ರಾಂತ ರಚನೆಯನ್ನೂ ಭಾಷಾ ಭೇದದ ಪಾರ್ಶ್ವ ಪರಿಣಾಮ ಎಂದು ಬಿಂಬಿಸುವ ಪ್ರಯತ್ನಗಳು ನಡೆದಿವೆ. ಆದರೆ ರಾಜ್ಯ ವಿಂಗಡಣೆಗೆ ಯಾವುದಾದರೂ ಒಂದು ಮಾನದಂಡ ಅನ್ವಯವಾಗಲೇಬೇಕಿತ್ತು. ಒಂದು ಭಾಷೆ, ಒಂದು ಜನ ಸಮುದಾಯಗಳ ಗುಂಪಿನ ಆಡಳಿತ ವ್ಯವಸ್ಥೆ ಸುಸೂತ್ರವಾಗಿರಲಿ ಎಂದು ಭಾವಿಸಿದ ಪ್ರಾಂತ ರಚನೆಯು ಸೂತ್ರ, ಮುಂದೆ ಸಂಕುಚಿತತೆಯನ್ನು ಬೆಳೆಸಿದವು ಎನ್ನುವುದು ಒಂದು ವೈರುಧ್ಯ.

ಪ್ರಾದೇಶಿಕತೆ ಸಮಾಜದ ಸೌಂದರ್ಯವೆನ್ನುವುದು ಸರಿಯೇ ಆದರೂ ಅದನ್ನು ಅಪಾಯದ ಹಂತಕ್ಕೆ ಮುಟ್ಟಿಸಬಹುದೆಂಬುದಕ್ಕೆ ಇಂದಿನ ರಾಜಕಾರಣವೇ ಉದಾಹರಣೆ.

ಸಾಂಸ್ಕೃತಿಕವಾಗಿ ಇಡೀ ಭಾರತ ಒಂದು ಎನ್ನುವುದನ್ನು ಒಪ್ಪದವರಿಗೆ ಪ್ರಾದೇಶಿಕತೆ ಎಂಬುದು ಪ್ರತ್ಯೇಕ ಎಂಬಂತೆ ಕಾಣತೊಡಗಿತು. ಅದರ ಪರಿಣಾಮವನ್ನು ತಮಿಳುನಾಡಿನ ಪೆರಿಯಾರ್ ಚಳವಳಿಯಲ್ಲಿ ನಾವು ನೋಡಿದ್ದೇವೆ. ಪಕ್ಷ ರಾಜಕಾರಣದ ಪೈಪೋಟಿಯಲ್ಲೂ ಕಂಡಿದ್ದೇವೆ. ಇವೆಲ್ಲವೂ ತನ್ನ ಭಾಷಾ ಪ್ರೀತಿಯನ್ನು ಉದ್ದೀಪಿಸುವುದರ ಜೊತೆಜೊತೆಗೇ ಅನ್ಯ ಭಾಷೆಯನ್ನು ದ್ವೇಷಿಸುವ ಹಂತಕ್ಕೆ ಮುಟ್ಟಿದೆ ಎನ್ನುವುದು ಅಪಾಯಕಾರಿ ಲಕ್ಷಣ.


ಭಾರತದಂಥ ದೇಶದಲ್ಲಿ ಒಂದು ಭಾಷೆ ಮತ್ತೊಂದನ್ನು ಕೊಂದು ಬೆಳೆಯುತ್ತದೆ ಎನ್ನುವುದು ಶುದ್ಧ ಅವಿಜ್ಞಾನಿಕ ಸಂಗತಿಯಾದರೂ ಭಾಷಾಂಧ ವರ್ಗ ಅದನ್ನಿನ್ನೂ ನಂಬಿಕೊಂಡಿದೆ. ಪ್ರಧಾನಮಂತ್ರಿಗಳು ಭಾಷೆಯ ಮೂಲಕ ದೇಶವನ್ನು ಭಂಜಿಸುವ ಪ್ರಯತ್ನಗಳು ನಡೆಯುತ್ತಿವೆ, ಅದರ ಬಗ್ಗೆ ಸಮಾಜ ಎಚ್ಚರದಿಂದ ಇರಬೇಕೆಂದಿದ್ದು ಇದೇ ಆಧಾರದಲ್ಲಿ. ಭಾರತ ಒಂದು ದೇಶ ಆಗಿರಲೇ ಇಲ್ಲ, ನಮ್ಮ ಭಾಷೆಯ ಮೇಲೆ ಮತ್ತೊಂದು ಭಾಷೆಯನ್ನು ಹೇರುವ ಮೂಲಕ ಒಂದು ದೇಶದ ಕಲ್ಪನೆಯನ್ನು ಬಲವಂತದಿಂದ ಅನುಷ್ಠಾನಕ್ಕೆ ತರಲಾಗುತ್ತಿದೆ. ಬುಡಕಟ್ಟು ಭಾಷೆ-ವೇದಗಳ ಭಾಷೆ... ಇವೆಲ್ಲಾ ವಾದಗಳು ಮೊದಲಿನಿಂದಲೂ ಇದ್ದವಾದರೂ ಈಗ ಹೊಸ ರೆಕ್ಕೆಪುಕ್ಕಗಳನ್ನು ಅಂಟಿಸಿಕೊಂಡು ಬಂದಿವೆ.

ಪ್ರಾದೇಶಿಕವಾದ ಮೋಕಿಸಂ ಮತ್ತು ಸಾಂಸ್ಕೃತಿಕ ವಸಹಾತುಶಾಹಿಗಳ ರೂಪವನ್ನು ಪಡೆದುಕೊಂಡಿದೆ. ಇದರ ವಿರುದ್ಧ ನಾಜೂಕಿನ ಹೋರಾಟ ಮಾಡಬೇಕಾದ ಸಂದರ್ಭ ನಮ್ಮ ಮುಂದಿದೆ.

## ಪುಸ್ತಕ ಪರಿಚಯ

ಪುಸ್ತಕ ಲೇಖಕರು
**ವಿಕಾಸ್ ಕುಮಾರ್ .ಪಿ**

# ಸಂವಿಧಾನ ಬದಲಾಯಿಸಿದ್ದು ಯಾರು ?






**ಡಾ. ರೋಹಿಣಾಕ್ಷ ಶಿರ್ಲಾಲು**
ಅಂಕಣಕಾರರು

**ಕ**ಳೆದ ಲೋಕಸಭಾ ಚುಣಾವಣೆಯು ಸಂವಿಧಾನ ಬದಲಾವಣೆ ಮತ್ತು ಸಂವಿಧಾನ ರಕ್ಷಣೆ ಎನ್ನುವ ವಿಷಯದ ಚರ್ಚೆಯ ಸುತ್ತಲೇ ನಡೆದಿತ್ತು. ಈ ಚರ್ಚೆಯು ಹುಟ್ಟುಹಾಕಿದ ನಕಾರಾತ್ಮಕ ಅಲೆಯು ಅಂತಿಮವಾಗಿ ಆಡಳಿತಾರೂಢ ಭಾರತೀಯ ಜನತಾ ಪಕ್ಷದ ಹಲವು ಲೋಕಸಭಾ ಸೀಟುಗಳನ್ನು ಕಸಿದುಕೊಂಡಿತು ಎನ್ನುವುದು ರಾಜಕೀಯ ವಿಶ್ಲೇಷಕರ ಅಭಿಮತ. ಬಿಜೆಪಿಯನ್ನು ಸಂವಿಧಾನ ಬದಲಾವಣೆಯ ವಿಷಯದಲ್ಲಿ ಅಪರಾಧಿಯನ್ನಾಗಿ ನಿಲ್ಲಿಸಲು ಕಾರಣವಾದ ಸಂಗತಿಯಾದರೂ ಏನು? ಸಂವಿಧಾನ ಬದಲಾವಣೆ ನಿಜವಾಗಿಯೂ ಆಗಿದೆಯೇ? ಆಗಿರುವುದಾದರೆ ಯಾರಿಂದ? ಭಾರತದ ಸಂವಿಧಾನದ ಬದಲಾವಣೆ ಆಗಿರುವುದೋ ಅಥವಾ ತಿದ್ದುಪಡಿಯೋ? ತಿದ್ದುಪಡಿಯ ಕುರಿತು ಸಂವಿಧಾನ ಶಿಲ್ಪಿ ಬಾಬಾಸಾಹೇಬರ ನಿಲುವು ಏನಾಗಿತ್ತು? ಸಂವಿಧಾನವೇ ವಿಧಿಬದ್ಧವಾಗಿ ನೀಡಿದ ತಿದ್ದುಪಡಿಯ ಪ್ರಕ್ರಿಯೆ ಏನು? ಈವರೆಗೆ ನಡೆದ ತಿದ್ದುಪಡಿಗಳು ಅಂಬೇಡ್ಕರ್ ಆಶಯದಂತೆಯೇ ನಡೆದಿದೆಯೇ? ಈ ಎಲ್ಲಾ ಚರ್ಚೆಗಳು ಸಂವಿಧಾನವನ್ನು ಸ್ವೀಕರಿಸಿ ಎಪ್ಪತ್ತೈದನೇ ವರ್ಷಾಚರಣೆಗಾಗಿ ಸಿದ್ಧಗೊಳ್ಳುತ್ತಿರುವ ಈ ಹೊತ್ತಿನಲ್ಲಿ ತುಂಬಾ ಪ್ರಸ್ತುತವೂ ಹೌದು. ಇಂತಹ ಚರ್ಚೆಯನ್ನು ಕೇಂದ್ರವಾಗಿಸಿ ಕೃತಿಯೊಂದು ಇತ್ತೀಚೆಗೆ ಪ್ರಕಟವಾಗಿದೆ. ಶ್ರೀ ವಿಕಾಸ್ ಕುಮಾರ್.ಪಿ ಅವರ 0ಎನ್ನುವ ಈ ಕೃತಿಯು ಭಾರತದ ಸಂವಿಧಾನಕ್ಕೆ ಮಾಡಲಾದ ತಿದ್ದುಪಡಿಗಳ ಸುಧೀರ್ಘ ಕಥನವನ್ನು ಅದರ ಹಿಂದಿನ ರಾಜಕಾರಣ ಹಾಗೂ ಅಂಬೇಡ್ಕರ್ ಆಶಯಗಳ ಜತೆಗೆ ತುಲನಾತ್ಮಕವಾಗಿ ವಿಶ್ಲೇಷಿಸಿದೆ.

1949 ನವೆಂಬರ್ 25ರಂದು ಸಂವಿಧಾನ ಸ್ವೀಕರಿಸುವ ಸಭೆಯನ್ನು ಉದ್ದೇಶಿಸಿ ಮಾತನಾಡಿದ ಬಾಬಾಸಾಹೇಬರು ಈ ಸಭೆಯು ಕೆನಡಾ ದೇಶದಂತೆ ಸಂವಿಧಾನ ತಿದ್ದುಪಡಿ ಮಾಡುವ ಹಕ್ಕನ್ನು ಜನರಿಗಿಲ್ಲದಂತೆಯೇ ಮಾಡಿಲ್ಲ, ಅಮೇರಿಕಾ ಅಥವಾ ಆಸ್ಟ್ರೇಲಿಯಾದಂತೆ ಸಂವಿಧಾನ ತಿದ್ದುಪಡಿ ಮಾಡಲು ಅಸಾಧಾರಣ ನಿಬಂಧನೆಗಳನ್ನು ಪೂರೈಸುವಂತೆಯೂ ಮಾಡಿಲ್ಲ. ಬದಲಾಗಿ, ಸಂವಿಧಾನವನ್ನು ಸರಳ ಕಾರ್ಯವಿಧಾನದ ಮೂಲಕ ತಿದ್ದುಪಡಿ ಮಾಡುವ ಅವಕಾಶವನ್ನು ಕಲ್ಪಿಸಿ ಅದಕ್ಕೆ ಅಂತಿಮ ಮುದ್ರೆಯೊತ್ತಿದೆ. ಭಾರತವು ಇಂದು ಎದುರಿಸುತ್ತಿರುವ ವಿಷಮ ಪರಿಸ್ಥಿತಿಗಳ ನಡುವೆಯೂ ಸಂವಿಧಾನದ ತಿದ್ದುಪಡಿಗೆ ಅತ್ಯಂತ ಸರಳ ವಿಧಾನವನ್ನು ಕಲ್ಪಿಸಿದೆ. ಇಂತಹ ಪದ್ಧತಿ ಬೇರೆ ಯಾವುದಾದರೂ ದೇಶದಲ್ಲಿ ಇದೆಯೇ? ಈ ಸಂವಿಧಾನದ ಬಗ್ಗೆ ಯಾರಿಗಾದರೂ ಅಸಮಧಾನ, ಅಸಂತೃಪ್ತಿ ಇದ್ದರೆ, ಅವರು ಮೂರನೇ ಎರಡು ಬಹುಮತ ಪಡೆದರೆ

ಸಾಕು ಮತ್ತು ಒಂದು ವೇಳೆ ಅವರು ಮೂರನೇ ಎರಡರಷ್ಟು ಬಹುಮತ ಸಾಧಿಸುವುದು ಸಾಧ್ಯವಾಗದೇ ಇದ್ದರೆ ವಯಸ್ಕ ಮತದಾನ ಪದ್ಧತಿಯ ಪ್ರಕಾರ ಸಂಸತ್ತಿನಲ್ಲಿ ಅಧಿಕಾರ ಹಿಡಿದರೂ ಸಾಕು, ಅವರ ಅಸಂತೃಪ್ತಿಯನ್ನು ನಮ್ಮ ಸಂವಿಧಾನವು ತಿರಸ್ಕರಿಸುವುದಿಲ್ಲ ಎಂದಿದ್ದರು. ಈ ಹಿನ್ನೆಲೆಯಲ್ಲಿ ನಮ್ಮ ಸಂವಿಧಾನಕ್ಕೆ ಈವರೆಗೆ ನಡೆದ 106 ತಿದ್ದುಪಡಿಗಳನ್ನು ಅವಲೋಕಿಸಿದರೆ ಕಾಣುವುದು ಏನು? ಎನ್ನುವುದು ಕೃತಿಯ ತಿರುಳು. 1950 ರಿಂದ 2024ರ ನಡುವೆ ನಡೆದ ಈ ತಿದ್ದುಪಡಿಗಳನ್ನು ಆಳ್ವಿಕೆ ನಡೆಸಿದ ಪಕ್ಷವಾರು ಗುರುತಿಸಿದರೆ, 76 ಬಾರಿ ಕಾಂಗ್ರೆಸ್ ಅಧಿಕಾರವಧಿಯಲ್ಲಿ, 8 ಬಾರಿ ಜನತಾ ಪರಿವಾರದ ಅವಧಿಯಲ್ಲಿ ಹಾಗೂ 22 ಬಾರಿ ಬಿಜೆಪಿ-ಎನ್‌ಡಿಎ ಅವಧಿಯಲ್ಲಿ ನಡೆದಿದೆ.

ಸಂವಿಧಾನದ ತಿದ್ದುಪಡಿಯು ತನ್ನ ಮೂಲ ಉದ್ದೇಶವನ್ನು ಮರೆತು ಮೂಲ ರಚನೆಯನ್ನೇ ಬದಲಿಸುವ, ಸಂವಿಧಾನ ನಿರ್ಮಾತೃಗಳ ಆಶಯಕ್ಕೇ ಚ್ಯುತಿ ತಂದಾಗ ನ್ಯಾಯಾಂಗವು ಕೇಶವಾನಂದ ಭಾರತೀ ಪ್ರಕರಣದ ತೀರ್ಪಿನಲ್ಲಿ ಗಡಿರೇಖೆಯನ್ನು ಹಾಕಿರುವ ಪ್ರಸಂಗವೂ ಕಣ್ಮುಂದಿದೆ. ಇಷ್ಟಾಗಿಯೂ ತುರ್ತುಪರಿಸ್ಥಿತಿಯ ಸಂದರ್ಭದಲ್ಲಿ ಸಂವಿಧಾನದ ಪ್ರಸ್ತಾವನೆಯನ್ನೂ ಸೇರಿದಂತೆ ಅನೇಕ ಪ್ರಮುಖ ಅನುಚ್ಛೇದಗಳನ್ನು ಬದಲಾವಣೆ ಮಾಡಲಾದ ನಿದರ್ಶನಗಳನ್ನು ಗುರುತಿಸಿದ ಲೇಖಕರು, ಭಾರತದ ಮೊದಲ ಚುನಾವಣೆ ನಡೆಯುವ ಮೊದಲೇ, ಭಾರತದ ಮೊದಲ ಚುನಾಯಿತ ಸರ್ಕಾರ ರಚನೆಯಾಗುವ ಮೊದಲೇ, ಸಂವಿಧಾನಕ್ಕೆ 16 ತಿಂಗಳು ತುಂಬುವ ಮೊದಲೇ ವಾಕ್ ಸ್ವಾತಂತ್ರ್ಯ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯಗಳು ತಮ್ಮ ನೈಜ ಸಾಮರ್ಥ್ಯ ಕಳೆದುಕೊಂಡವು ಎನ್ನುವ ನಿಲುವನ್ನು ವ್ಯಕ್ತಪಡಿಸಿದ್ದಾರೆ. ಅನುಚ್ಛೇಧ 19ರ ತಿದ್ದುಪಡಿಯೊಂದಿಗೆ ಮೊದಲುಗೊಂಡು ಆರಂಭವಾದ ಈ ತಿದ್ದುಪಡಿಯು, ಸಂವಿಧಾನದೊಳಗೆ ಸಂವಿಧಾನದ ತಿದ್ದುಪಡಿಗೆ ಬೇಕಾದ ಪ್ರಕ್ರಿಯೆಯನ್ನು ತೋರುವ ಅನುಚ್ಛೇಧ 368ನ್ನೂ ಬಿಡಲಿಲ್ಲ ಎನ್ನುವುದನ್ನು ಬೊಟ್ಟುಮಾಡಿ ತೋರುತ್ತಾರೆ. ಸಂವಿಧಾನದ 24 ಮತ್ತು 42ನೇ ತಿದ್ದುಪಡಿಗಳು ಸಂವಿಧಾನದ ಮೂಲ ಆಶಯಗಳನ್ನೇ ನಾಶ ಮಾಡಿತು ಎನ್ನುವ ಮಾತುಗಳು ಅಂಬೇಡ್ಕರ್ ಸಂವಿಧಾನದ ಕುರಿತ ಕಾಳಜಿಯಿಂದಲೇ ಮೂಡಿ ಬಂದಿರುವುದು ಎನ್ನುವುದು ಸ್ಪಷ್ಟ. ಸದನದ ತೀರ್ಮಾನ ಪ್ರಶ್ನಾತೀತ ಎನ್ನುವುದನ್ನು ಸಾರುವ ತಿದ್ದುಪಡಿಯು ಸರ್ವಾಧಿಕಾರಕ್ಕೆ ಬರೆದ ಮುನ್ನುಡಿಯೇ ಆಗಿತ್ತು. ಈ ಮೂಲಕ ಅಂಬೇಡ್ಕರ್ ರಚಿತ ಸಂವಿಧಾನದ ಧ್ವನಿ ಹೇಗೆ ಕುಸಿಯಿತು ಎನ್ನುವುದನ್ನು ವಿಶ್ಲೇಷಿಸಲಾಗಿದೆ.. ಅದರಲ್ಲೂ ತುರ್ತುಪರಿಸ್ಥಿತಿಯ ಸಂದರ್ಭದಲ್ಲಿ, ವಿರೋಧ ಪಕ್ಷಗಳ ನಾಯಕರನ್ನು ಜೈಲಿನಲ್ಲಿಟ್ಟು, ಸದನದಲ್ಲಿ ಚರ್ಚೆಗಳೇ ಇಲ್ಲದೇ ನಡೆದ ತಿದ್ದುಪಡಿಗಳು ಸಂವಿಧಾನದ ಮೂಲ ಆಶಯವನ್ನು ಹೇಗೆ ಮಣ್ಣುಗೂಡಿಸಿತು ಎನ್ನುತ್ತಾ, ಅಂಬೇಡ್ಕರ್ ಆಶಯಕ್ಕಾದ ಅಪಮಾನದ ಚಿತ್ರಣವನ್ನು ಮುಂದಿಡುತ್ತಾರೆ. ಉದಾಹರಣೆಗಾಗಿ, 39ನೇ ತಿದ್ದುಪಡಿಯ ಪ್ರಹಸನವನ್ನು ಉಲ್ಲೇಖಿಸುತ್ತಾ, ಮೊದಲು ಲೋಕಸಭೆಯಲ್ಲಿ ಮಂಡನೆಯಾಗಿ ಅಂಗೀಕೃತವಾಗಿ, ಒಂದೇ ದಿನದಲ್ಲಿ ರಾಜ್ಯಸಭೆಯಲ್ಲೂ ಅಂಗೀಕಾರ ಪಡೆದು, 50%ಕ್ಕಿಂತ ಹೆಚ್ಚು ರಾಜ್ಯಗಳ ಒಪ್ಪಿಗೆ ಬೇಕಾದುದರಿಂದ ಸರ್ಕಾರಿ ರಜಾ ದಿನವಾಗಿದ್ದರೂ ರಾಜ್ಯಗಳಲ್ಲಿ ವಿಶೇಷ ಅಧಿವೇಶನ ಕರೆದು, ಅಂಗೀಕರಿಸಿ, ರಜಾ ದಿನದಂದೇ ರಾಷ್ಟ್ರಪತಿಗಳಿಂದಲೂ ಅನುಮೋದನೆಗೊಂಡು ಶಾಸನವಾದಂತಹ ಅಪರೂಪದ ಪ್ರಕರಣಗಳು ಸಂವಿಧಾನದ ಸ್ಪಿರಿಟ್ ಅನ್ನು ಹೇಗೆ ಧ್ವಂಸಗೊಳಿಸಿತು ಎನ್ನುವ ವಿಮರ್ಶಾತ್ಮಕ ಮಾತುಗಳು ಸಂವಿಧಾನ ಬದಲಾವಣೆ ಆದುದು ಯಾರಿಂದ ಎನ್ನುವ ಪ್ರಶ್ನೆಗೆ ಉತ್ತರ ನೀಡುತ್ತದೆ. ಸರ್ವಾಧಿಕಾರದ ಮನೋಭಾವವು ನ್ಯಾಯಾಂಗ, ಶಾಸಕಾಂಗ ಹಾಗು ಕಾರ್ಯಾಂಗದ ಸ್ವಾಯತ್ತತೆಯನ್ನು ಬಲಿತೆಗೆದುಕೊಳ್ಳುವ ಹಂತಕ್ಕೆ ಮುಟ್ಟಿತ್ತು ಎನ್ನುವ ವಾಸ್ತವದ ಅರಿವು ಇಲ್ಲದೇ ಹೋದರೆ ವರ್ತಮಾನದಲ್ಲಿ ನಡೆಸುವ ಚರ್ಚೆಯು ಕೇವಲ ಸೋಗಲಾಡಿತನದ್ದಾಗುತ್ತದೆ. ಪ್ರಸ್ತುತ ಸರ್ಕಾರದ ಮೇಲೆ ಆರೋಪಿಸಲಾಗುತ್ತಿರುವ ಸಂವಿಧಾನ ಬದಲಾವಣೆಯ ಗುಮ್ಮ ಕೇವಲ ಪೂರ್ವಾಗ್ರಹಪೀಡಿತವಾಗಿದ್ದು, ನಿಜವಾಗಿಯೂ ಸಂವಿಧಾನವನ್ನು, ಅದರ ಮೂಲ ಸ್ವರೂಪವನ್ನೇ ಬದಲಾಯಿಸಿದ್ದು ಯಾರು ಎನ್ನುವ ಪ್ರಶ್ನೆಗೆ ಆಧಾರ ಸಹಿತ ಉತ್ತರವನ್ನು ನೀಡುತ್ತದೆ. ಈ ಕೃತಿಯಲ್ಲಿ ಅಂಬೇಡ್ಕರ್ ಮಾಡಿದ ಮೂರು ಪ್ರಮುಖ ಭಾಷಣಗಳಿವೆ. 1947 ಡಿಸೆಂಬರ್ 17ರಂದು ಡಾ.ಅಂಬೇಡ್ಕರ್ ಅವರು, ನೆಹರೂ ಮಂಡಿಸಿದ ಸಂವಿಧಾನದ ಗುರಿ ಉದ್ದೇಶಗಳಿಗೆ ಪ್ರತಿಯಾಗಿ ಮಾಡಿದ ಭಾಷಣ, 1949 ನವೆಂಬರ್ 4ರಂದು ಸಂವಿಧಾನದ ಕರಡು ಮಂಡನೆಯ ಸಂದಭದಲ್ಲಿ ಮಾಡಿದ ಭಾಷಣ ಹಾಗೂ 1949 ನವೆಂಬರ 25ರಂದು ಸಂವಿಧಾನ ಸ್ವೀಕಾರದ ಸಂದರ್ಭದಲ್ಲಿ ಮಾಡಿದ ಭಾಷಣಗಳು ಸಂವಿಧಾನ ಸಿದ್ಧಾಂತವನ್ನು ವ್ಯಾಖ್ಯಾನಿಸಿದ, ಅದರೊಳಗಿನ ಸತ್ವವನ್ನು ಪ್ರಸ್ತುತ ಪಡಿಸಿದ ಮಾತುಗಳಾಗಿದ್ದು ತಿದ್ದುಪಡಿಯ ನೆಪದಲ್ಲಿ ಸಂವಿಧಾನದ ತಿಜೋರಿಯೊಳಗೆ ಕೈಹಾಕಿದವರಾರು ಎನ್ನುವ ಪ್ರಶ್ನೆಗೆ ಉತ್ತರ ಕಂಡುಕೊಳ್ಳಲು ಸಹಕಾರಿಯಾಗಿದೆ.

ಬಿಜೆಪಿ ಹಾಗೂ ಸಂಘ ಪರಿವಾರದ ಕುರಿತು ಹರಿಯ ಬಿಟ್ಟಿರುವ ಸಂವಿಧಾನ ವಿರೋಧಿಗಳು, ಸಂವಿಧಾನ ಬದಲಿಸುವವರು ಎಂಬ ಸುಳ್ಳು ಕಥನಗಳು ಈ ಕೃತಿಯ ಓದಿನ ಬಳಿಕ ಸತ್ಯದ ಮೊಣಚು ಸೂಜಿ ಚುಚ್ಚಿದ ಬಲೂನಿನಂತೆ ಒಡೆದುಹೋಗುತ್ತದೆ ಮಾತ್ರವಲ್ಲ, ಇಷ್ಟುಕಾಲ ಮರೆಯಲ್ಲಿಟ್ಟಂತೆ ಇದ್ದ ಸಂವಿಧಾನದ ಆಶಯಗಳನ್ನು ಎತ್ತಿ ಹಿಡಿದವರಾರು ಎನ್ನುವ ಸತ್ಯದ ದರ್ಶನವೂ ಆಗುತ್ತದೆ. ಸಂವಿಧಾನವನ್ನು ಸ್ವೀಕರಿಸಿದ ಅಮೃತ ಮಹೋತ್ಸವದ ಈ ಹೊತ್ತಿನಲ್ಲಿ ಸಂವಿಧಾನದ ಮೇಲೆ ಬೆಳಕುಚೆಲ್ಲುವ ಈ ಕೃತಿಯು ಹೊಸ ಬೌದ್ಧಿಕ ಸಂವಾದಕ್ಕೆ ನಾಂದಿಹಾಡಲಿ.



ಪುಸ್ತಕ ಬಿಡುಗಡೆ ಕಾರ್ಯಕ್ರಮ

# ಸಂವಿಧಾನ ಬದಲಾಯಿಸಿದ್ದು ಯಾರು?

**ಸಂ**ವಿಧಾನ ಸಮಿತಿಗೆ ಅಂದಿನ ರಾಷ್ಟ್ರಪತಿಯವರ ಸೂಚನೆಯ ಹೊರತಾಗಿಯೂ ಡಾ. ಅಂಬೇಡ್ಕರ ಹೆಸರನ್ನು ಸೇರಿಸಲು ಅಂದಿನ ಪ್ರಧಾನಿ ನೆಹರೂ ಅವಮಾನ ಮಾಡಿದ್ದೂ ಸೇರಿದಂತೆ ಅನೇಕ ಬಾರಿ ಕಾಂಗ್ರೆಸ್ ಪಕ್ಷ ಅಂಬೇಡ್ಕರ್‌ರವರಿಗೆ ಅವಮಾನ ಮಾಡಿತ್ತು ಎಂದು ಕೇಂದ್ರ ಕಾನೂನು ಮತ್ತು ನ್ಯಾಯ, ಸಂಸದೀಯ ವ್ಯವಹಾರಗಳ ಸಚಿವರಾದ ಶ್ರೀ ಅರ್ಜುನ್ ರಾಮ್ ಮೇಘ್ವಾಲ್ ಅವರು ತಿಳಿಸಿದರು.

ಬೆಂಗಳೂರಿನ ಭಾರತೀಯ ವಿದ್ಯಾಭವನದಲ್ಲಿ 'ಸಿಟಿಜನ್ಸ್ ಫಾರ್ ಸೋಷಿಯಲ್ ಜಸ್ಟೀಸ್' ಹಾಗೂ 'ಅಯೋಧ್ಯಾ ಪಬ್ಲಿಕೇಷನ್ಸ್' ಆಯೋಜಿಸಿದ್ದ **'ಸಂವಿಧಾನ ಬದಲಾಯಿಸಿದ್ದು ಯಾರು?'** ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ಅವರು ದೇಶವನ್ನು ಸ್ವತಂತ್ರ ರಾಷ್ಟ್ರವನ್ನಾಗಿ ಮಾಡಿ ಬ್ರಿಟಿಷರು ದೇಶ ತೊರೆಯುವ ಘೋಷಣೆ ಮಾಡಿದ ಸಂದರ್ಭದಲ್ಲಿ ನಾವೇ ಸಂವಿಧಾನ ರಚಿಸುವ ವಿಚಾರ ಬಂದಿತು. ಗಾಂಧೀಜಿ, ರಾಜೇಂದ್ರ ಪ್ರಸಾದ್ ಮೊದಲಾದವರು ಈ ವಿಚಾರವನ್ನು ಮುಂದಿಟ್ಟರು ಎಂದು ವಿವರಿಸಿದರು.

ಡಾ. ಬಾಬಾಸಾಹೇಬ ಅಂಬೇಡ್ಕರರನ್ನು ಕಾನ್ಸ್ಟಿಟ್ಯೂಟ್ ಅಸೆಂಬ್ಲಿಗೆ ಸ್ಥಾನ ಕೊಡಲಿಲ್ಲ. ಇದರಿಂದ ದಲಿತರಿಗೆ ಅಸಮಾಧಾನ ಉಂಟಾಯಿತು. ನಂತರ ಯೋಗೇಂದ್ರನಾಥ್ ಮಂಡಲ್, ಡಾ.ಶ್ಯಾಮಪ್ರಸಾದ್ ಮುಖರ್ಜಿ ಮೊದಲಾದವರ ಕೋರಿಕೆ ಮೇರೆಗೆ ಮುಂಬೈ ನಿವಾಸಿಯಾದ ಅಂಬೇಡ್ಕರ್ ಅವರಿಗೆ ದೂರದ ಬಂಗಾಲದಿಂದ ಅಸಂಬ್ಲಿಗೆ ಸ್ಪರ್ಧಿಸಲು ಅವಕಾಶ ದೊರೆತು ಗೆದ್ದರು

ಅಂಬೇಡ್ಕರರನ್ನು ದೇಶಭಕ್ತರಲ್ಲ; ಬ್ರಿಟಿಷರ ಏಜೆಂಟ್ ಎಂದು ಬಿಂಬಿಸುವ ಪ್ರಯತ್ನ ನಡೆದಿತ್ತು. ಅಂಬೇಡ್ಕರರು ಭಾರತವು ಸ್ವತಂತ್ರವಾಗುವ ಮೊದಲೇ ದೇಶವನ್ನು ಒಂದುಗೂಡಿಸುವ ಮಾತನಾಡಿದ್ದರು ಎಂದು ಹೇಳಿದರು. ಬಾಬಾ ಸಾಹೇಬರಿಗೆ ಕಾಂಗ್ರೆಸ್ ಮೋಸ ಮಾಡಿದ ಪರಿ, ಅವರನ್ನು ಅವಮಾನಿಸಿದ್ದು, ಕಷ್ಟಗಳನ್ನು ಕೊಟ್ಟಿದ್ದನ್ನು ಅವರು ಬಿಡಿಸಿಟ್ಟರು.

ಜನರನ್ನು ಒಗ್ಗೂಡಿಸುವ ಡಾ. ಅಂಬೇಡ್ಕರ್ ಅವರ ಮಾತನ್ನು ಆಲಿಸಿದ್ದ ಡಾ. ರಾಜೇಂದ್ರ ಪ್ರಸಾದ್ ಅವರು ಬಾಬಸಾಹೇಬರ ಭಾಷಣ ಕೇಳಿ ಗದ್ಗದಿತರಾಗಿದ್ದರು, ಅಲ್ಲದೆ ಬಾಬಾ ಸಾಹೇಬರಿಗೆ ಧನ್ಯವಾದ ಹೇಳಿದ್ದು ಕಾಂಗ್ರೆಸ್ಸಿಗರಿಗೆ ಇರಿಸುಮುರಿಸಾಗಿತ್ತು ಎಂದು ತಿಳಿಸಿದರು. ಪಾಕಿಸ್ತಾನದ ವಿಭಜನೆಯ ಚಿತ್ರಣವನ್ನೂ ಬಾಬ ಸಾಹೇಬರು ನೀಡಿದರು.

ನಾನು ಪಾಕಿಸ್ತಾನಕ್ಕೆ ಹೋಗಲು ಸಿದ್ಧನಿಲ್ಲ ಎಂದು ಡಾ. ಅಂಬೇಡ್ಕರ್ ಅವರು ಹೇಳಿದ್ದರು. ಸಂವಿಧಾನ ಸಿದ್ಧಪಡಿಸಲು ಹೊರಗಿನವರನ್ನು ಕರೆತರಲು ನೆಹರೂ ಮುಂದಾಗಿದ್ದರು. ಆದರೆ, ಡಾ. ರಾಜೇಂದ್ರ ಪ್ರಸಾದರು ನಿರಾಕರಿಸಿ ಅದಕ್ಕೆ ಡಾ. ಅಂಬೇಡ್ಕರ್ ಅವರ ಹೆಸರನ್ನು ಸೂಚಿಸಿದ್ದರು ಎಂದು ವಿವರಿಸಿದರು. ಬಳಿಕ ಅವರು ಸಂವಿಧಾನ ಕರಡು ಪ್ರತಿ ಸಿದ್ಧತಾ ಸಮಿತಿಯಲ್ಲಿ ಸದಸ್ಯರಾದರು; ನಂತರ ಅವರೇ ಸಂವಿಧಾನ ರಚನಾ ಸಮಿತಿಯ ಛೇರ್ಮನ್ ಆದರು ಎಂದು ಹೇಳಿದರು. ಸಚಿವ ಸಂಪುಟ ರಚಿಸುವ ವೇಳೆ ಕೂಡ ಕಾಂಗ್ರೆಸ್ಸಿಗರು ಮೊದಲಿಗೆ ಅಬಂಡ್ಕರ್ ಅವರ ಹೆಸರನ್ನು ಪರಿಗಣಿಸದೆ ಅವರಿಗೆ ಅವಮಾನ ಮಾಡಿದ್ದರು ಎಂದು ಮಾಹಿತಿ ನೀಡಿದರು. ದಲಿತ ಸಮಾಜದ ಮತಕ್ಕಾಗಿ ಕಾಂಗ್ರೆಸ್ ಈಗ ಡಾ. ಅಂಬೇಡ್ಕರ್ ಅವರ ಹೆಸರನ್ನು ಮುಂದಿಡುತ್ತಿದೆ. ನಿಜವಾಗಿ ಕಾಂಗ್ರೆಸ್ಸಿಗರು ಅಂಬೇಡ್ಕರರ ವಿರುದ್ಧವಾಗಿ ಕೆಲಸ ಮಾಡಿದ್ದರು ಎಂದು ಆರೋಪಿಸಿದರು.

ರಾಜ್ಯ ಬಿಜೆಪಿ ಉಪಾಧ್ಯಕ್ಷರಾದ ಶ್ರೀ ಎನ್. ಮಹೇಶ್ ರವರು ಮಾತನಾಡಿ 'ಅಂಬೇಡ್ಕರ್ ಅವರು ಪರಿಶಿಷ್ಟರಿಗೆ ಪ್ರತ್ಯೇಕ ರಾಜಕೀಯ ಕ್ಷೇತ್ರಗಳನ್ನು ಕೇಳಿದಾಗ ವಿರೋಧಿಸಿದ ಗಾಂಧೀಜಿ, ದೇಶ ವಿಭಜನೆ ಸಂದರ್ಭದಲ್ಲಿ ಏನೂ ಮಾಡಲಿಲ್ಲ. ನನ್ನ ಹೆಣದ ಮೇಲೆ ದೇಶ ವಿಭಜನೆಯಾಗಬೇಕೆಂದು ಸವಾಲೊಡ್ಡಿದ್ದರೂ, ವಿಭಜನೆ ಆದಾಗ ಸುಮ್ಮನಿದ್ದರು' ಎಂದು ಹೇಳಿದರು.

ವಿರೋಧ ಪಕ್ಷದ ನಾಯಕ ಶ್ರೀ ಆರ್. ಅಶೋಕ, ಪುಸ್ತಕದ ಲೇಖಕರಾದ ಶ್ರೀ ವಿಕಾಸ್ ಕುಮಾರ್ .ಪಿ, ಅಯೋಧ್ಯಾ ಪಬ್ಲಿಕೇಷನ್ಸ್ ನಿರ್ದೇಶಕ ಶ್ರೀ ರೋಹಿತ್ ಚಕ್ರತೀರ್ಥ ಅವರು ವೇದಿಕೆಯಲ್ಲಿ ಉಪಸ್ಥಿತರಿದ್ದರು. ರಾಜ್ಯ ಬಿಜೆಪಿ ಪ್ರಕೋಷ್ಠಗಳ ಸಂಯೋಜಕರಾದ ಶ್ರೀ ಎಸ್. ದತ್ತಾತ್ರಿ ಸಮಾರಂಭದ ನಿರೂಪಣೆ ಮಾಡಿದರು. ಕಾರ್ಯಕ್ರಮದಲ್ಲಿ ಬಿಜೆಪಿಯ ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಶ್ರೀ ಬಿ.ಎಲ್. ಸಂತೋಷ್ ಅವರೂ ಸೇರಿದಂತೆ ಸಮಾಜದ ಅನೇಕ ಆಹ್ವಾನಿತ ಗಣ್ಯರು ಉಪಸ್ಥಿತರಿದ್ದರು.

24

ಹಿರಿಯ ಕಾರ್ಯಕರ್ತರ

# ಪರಿಚಯಮಾಲೆ



## ಜನಸಂಘದಿದ ಶಾಸಕ ಕೊಟ್ಟ ಬೀದರ್

# ದಿ. ಚಂದ್ರಕಾಂತ ಸಿಂದೋಲ್

**ಉತ್ತರದ ಮಲೆನಾಡು ಖ್ಯಾತಿ ಹೊಂದಿದ ಬೀದರ್ ಐತಿಹಾಸಿಕ, ಸಾಂಸ್ಕೃತಿಕ ಶ್ರೀಮಂತಿಕೆ ಹೊಂದಿದೆ. ಅನುಭವ ಮಂಟಪ ಮೂಲಕ ವಿಶ್ವಕ್ಕೆ ಮೊದಲ ಬಾರಿ ಸಂಸತ್ತು, ಪ್ರಜಾಪ್ರಭುತ್ವದ ಪರಿಕಲ್ಪನೆ ಕೊಟ್ಟ ನೆಲೆಬೀಡು ಸಹ ಇದಾಗಿದೆ. ಮಹಾರಾಷ್ಟ್ರ, ತೆಲಂಗಾಣ ರಾಜ್ಯದ ಗಡಿಯಲ್ಲಿರುವ ಬೀದರ್ ಜಿಲ್ಲೆ ಶೈಕ್ಷಣಿಕ, ಸಾಮಾಜಿಕ, ಆರ್ಥಿಕವಾಗಿ ಹಿಂದುಳಿದಿದ್ದರೂ ರಾಜಕೀಯವಾಗಿ ಸಾಕಷ್ಟು ಹಿರಿಮೆ-ಗರಿಮೆ ಹೊಂದಿದೆ. ಸ್ವಾತಂತ್ರ್ಯ ನಂತರದಲ್ಲಿನ ಜಿಲ್ಲೆಯ ರಾಜಕೀಯದ ಮೇಲೆ ಮೆಲುಕು ಹಾಕಿದರೆ ಅನೇಕ ಹೊಸ ಸಂಗತಿ ತೆರೆದುಕೊಳ್ಳುತ್ತವೆ. ಇಂತಹವುಗಳ ಸಾಲಿನಲ್ಲಿ ಜನಸಂಘದಿದ ಕರ್ನಾಟಕಕ್ಕೆ ಮೊದಲ ಶಾಸಕ ಕೊಟ್ಟ ಖ್ಯಾತಿ ಬೀದರ್ ಜಿಲ್ಲೆಯದು.**



**ಸದಾನಂದ ಜೋಷಿ**
ಹಿರಿಯ ಪತ್ರಕರ್ತರು, ಬೀದರ್

**ಬೀ**ದರ್ ಜಿಲ್ಲೆಯ ರಾಜಕೀಯ ಹಲವು ವೈಶಿಷ್ಟ್ಯತೆಗಳನ್ನು ಹೊಂದಿದೆ. ಇಲ್ಲಿರುವ ಆರೂ ವಿಧಾನಸಭೆ ಕ್ಷೇತ್ರಗಳು ತನ್ನೊಳಗೆ ಅನೇಕ ಸ್ವಾರಸ್ಯಗಳನ್ನು ಹುದುಗಿಸಿಕೊಂಡಿವೆ. ರಾಜ್ಯದಲ್ಲಿ ಅದೇನೇ ಹವಾ ಇದ್ದರೂ, ಇಲ್ಲಿಮಾತ್ರ 'ಲೋಕಲ್ ಗಾಳಿ'ಯೇ ಬೀಸುತ್ತಿರುತ್ತದೆ. ಅಂತೆಯೇ ಐದು ದಶಕದ ಹಿಂದೆಯೇ ಇಲ್ಲಿನ ಮತದಾರರು ಭಾರತೀಯ ಜನ ಸಂಘಕ್ಕೂ ಮಣೆ ಹಾಕಿದ್ದಾರೆ. ರಾಜ್ಯ ವಿಧಾನಸಭೆಗೆ ಜನಸಂಘದ ಶಾಸಕ ಕೊಟ್ಟ ದಾಖಲೆ ಬೀದರ್ ಜಿಲ್ಲೆ ಹೊಂದಿದೆ.ಅದು ಎಪ್ಪತ್ತರ ದಶಕ. ಆಗಿನ್ನೂ ಬಿಜೆಪಿಯೇ ಹುಟ್ಟಿರಲಿಲ್ಲ. ಭಾರತೀಯ ಜನ ಸಂಘ (ಬಿಜೆಎಸ್) ಅಸ್ತಿತ್ವದಲ್ಲಿತ್ತು. ದೇಶದಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಪರ್ಯಾಯವಾಗಿ ಪ್ರಬಲ ರಾಜಕೀಯ ಶಕ್ತಿಯಾಗಿ ಹೊರಹೊಮ್ಮುವ ಸಿದ್ಧತೆಯಲ್ಲಿ ಜನ ಸಂಘ ದೊಡ್ಡ ಮಟ್ಟದಲ್ಲಿ ತಾಲೀಮು ನಡೆಸುತ್ತಿತ್ತು. ಆದರೆ ಜನಸಂಘ ಅಷ್ಟೊಂದು ಭದ್ರ ನೆಲೆ ಕಂಡುಕೊಳ್ಳಲು ಸಾಧ್ಯವಾಗದಿದ್ದರೂ, ಬಿಜೆಪಿ ಹುಟ್ಟಿಗೆ ಕಾರಣವಾಗಿ ಮುಂದೆ ಕಾಂಗ್ರೆಸ್‌ಗೆ ಆಘಾತ ನೀಡಿ ಕೇಂದ್ರ ಸೇರಿದಂತೆ ಅನೇಕ ರಾಜ್ಯಗಳಲ್ಲಿ ಅಽಕಾರದ ಚುಕ್ಕಾಣಿ ಹಿಡಿದಿರುವುದು ಇತಿಹಾಸವೇ ಸರಿ.

ದಕ್ಷಿಣ ಭಾರತದಲ್ಲೇ ಬಿಜೆಪಿಗೆ ನೆಲೆ ಕೊಟ್ಟ ರಾಜ್ಯವೆಂದರೆ ಕರ್ನಾಟಕ. ದಕ್ಷಿಣ ಭಾರತದಲ್ಲಿ ಮೊದಲ ಬಾರಿ ಬಿಜೆಪಿ ಚುಕ್ಕಾಣಿಯನ್ನು  ಕರ್ನಾಟಕದಲ್ಲೇ ಹಿಡಿದಿರುವುದು ವಿಶೇಷ. ಇದಕ್ಕೆ ಕಾರಣ ಜನಸಂಘದಿದಲೇ ಇಲ್ಲಿ ವಿಸ್ತರಣೆಯಾದ ಜಾಲ ಎಂದರೂ ತಪ್ಪಾಗದು. 1967ರಲ್ಲಿ ರಾಜ್ಯ ವಿಧಾನಸಭೆಗೆ ಚುನಾವಣೆ ನಡೆಯಿತು. ಆಗ ಭಾರತೀಯ ಜನಸಂಘ ಬೀದರ್ ಕ್ಷೇತ್ರದಿಂದ ತನ್ನ ಅಭ್ಯರ್ಥಿಯನ್ನಾಗಿ ಚಂದ್ರಕಾತ ಸಿಂದೋಲ್ ಅವರನ್ನು ಕಣಕ್ಕಿಳಿಸಿತ್ತು. ಅದೆಂಥ ಗಾಳಿಯೋ, ಜನತೆಯ ಅದ್ಯಾವ ಲೆಕ್ಕಾಚಾರವೋ ಗೊತ್ತಿಲ್ಲ. ಚಂದ್ರಕಾತ  ಸಿಂದೋಲ್ ಅವರಿಗೆ ಭರ್ಜರಿ ಜಯ ತಂದುಕೊಟ್ಟರು! ಕರ್ನಾಟಕದ ಇತಿಹಾಸದಲ್ಲಿ ಜನಸಂಘ ಮೂಲಕ ವಿಧಾನಸಭೆ ಪ್ರವೇಶಿಸಿದ ಮೊದಲ ಶಾಸಕರೆಂಬ ದಾಖಲೆ ಚಂದ್ರಕಾತ ಸಿಂದೋಲ್ ಬರೆದಿದ್ದಾರೆ. ಚಂದ್ರಕಾತ ಸಿಂದೋಲ್ 21,514 ಮತ ಪಡೆದು, ತಮ್ಮ

ಎದುರಾಳಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಮಕ್ಸೂದ್ ಅಲಿ ಖಾನ್ ಅವರಿಗೆ 5,634 ಮತಗಳಿಂದ ಸೋಲಿಸಿದ್ದರು. ಈ ಗೆಲುವಿನ ಮೂಲಕ ಬೀದರ್ ಕ್ಷೇತ್ರ ಕರ್ನಾಟಕವಷ್ಟೇ ಅಲ್ಲ, ಇಡೀ ದೇಶದ ಗಮನ ಸೆಳೆಯಿತು. ಜನಸಂಘಕ್ಕೂ ಭವಿಷ್ಯವಿದೆ ಎಂಬುದು ತೋರಿಸಿಕೊಟ್ಟ ಕ್ಷೇತ್ರ ಬೀದರ್ ಎನಿಸಿತು.

ಮುಂದೆ ಜನಸಂಘ ಬಿಜೆಪಿಯಾಗಿ ಬದಲಾಯಿತು. ಜನಸಂಘಕ್ಕೆ ಇಲ್ಲಿ ಸಿಕ್ಕ ಮೊದಲ ಜಯದ ನಂತರ ಇಲ್ಲಿ ಬಿಜೆಪಿ ಸಹಜವೇ ತನ್ನ ಪ್ರಾಬಲ್ಯ ಮೆರೆಯಿತು. 1983, 1989, 1999ರಲ್ಲಿ ಜಯಭೇರಿ ಬಾರಿಸಿತು. ಬೀದರ್ ಜಿಲ್ಲೆಯಲ್ಲಿ ಸಿಂದೋಲ್ ಪರಿವಾರ ದೊಡ್ಡ ಹೆಸರು ಹೊಂದಿದೆ. ಇದು ವ್ಯಾಪಾರೋದ್ಯಮ ಕ್ಷೇತ್ರದಲ್ಲಿ ತನ್ನದೇ ಆದ ಛಾಪು ಮೂಡಿಸಿಕೊಂಡಿದೆ. ರಾಜಕೀಯದಿಂದ ಈ ಪರಿವಾರ ದೂರವೇ ಇದೆ. ಆದರೆ ಸರಳ, ಉತ್ತಮ ವ್ಯಕ್ತಿತ್ವದ ಕಾರಣದಿಂದ ಚಂದ್ರಕಾತ ಸಿಂದೋಲ್ ಅವರಿಗೆ 1967ರಲ್ಲಿ ಬಲವಂತವಾಗಿ ಜನಸಂಘದಿದ ಅಖಾಡಕ್ಕೆ ಇಳಿಸಲಾಯಿತು. ಆಗಿನ ಚುನಾವಣೆ ಈಗನಂತೆ ಅಲ್ಲ. ದುಡ್ಡಿನ ಗಮ್ಮತ್ತು, ಕರಾಮತ್ತು ಆಗ ಇರಲಿಲ್ಲ. ಏನೇನೂ ಖರ್ಚು ಮಾಡದೆ ಚಂದ್ರಕಾತ ಸಿಂದೋಲ್ ಅವರು ಜನಸಂಘ ಮೂಲಕ ಶಾಸಕರಾಗಿ ಆಯ್ಕೆಯಾಗಿದ್ದರು.ಸಂಘದ ಒಡನಾಟ ಹೊಂದಿದ್ದ ಕಾರಣಕ್ಕೆ ಚಂದ್ರಕಾತ ಸಿಂದೋಲ್ ಅವರಿಗೆ ಜನಸಂಘದ ಮುಖಂಡರು ಗುರುತಿಸಿದ್ದರು. ಸಂಘದ ಕೆಲಸ ಕಾರ್ಯಗಳಿಗೆ, ವಿವಿಧ ಚಟುವಟಿಕೆಗಳಿಗೆ ಸಿಂದೋಲ್ ಪರಿವಾರ ಯಾವಾಗಲೂ ನೆರವು ನೀಡುತ್ತ ಬಂದಿದೆ. ಇದು ಚಂದ್ರಕಾತ ಸಿಂದೋಲ್ ಅವರಿಗೆ ಟಿಕೆಟ್ ಸಿಗಲು ಕಾರಣವಾಯಿತು.


## ಗಡಿಯಲ್ಲಿ ಕಮಲ ಅರಳಿಸಿದ ಶಕ್ತಿ

ಬೀದರ್ ಜಿಲ್ಲೆಯಲ್ಲಿ ಬಿಜೆಪಿ ಇಂದು ಬಲಿಷ್ಠವಾಗಿ ಬೆಳೆಯಲು ಜನಸಂಘ ಹಾಕಿಕೊಟ್ಟ ಭದ್ರ ಬುನಾದಿ ಕಾರಣವಾಗಿದೆ ಎನ್ನಬಹುದು. ಜಿಲ್ಲೆಯಲ್ಲಿ ಕಾಂಗ್ರೆಸ್‌ಗೆ ಪ್ರಬಲ ಟಕ್ಕರ್ ನೀಡಿ, ಬಿಜೆಪಿ ತನ್ನದೇ ಪ್ರಾಬಲ್ಯವನ್ನು ಮೆರೆಯುತ್ತ ಸಾಗಿದೆ. ಬೀದರ್ ಲೋಕಸಭೆ ಕ್ಷೇತ್ರದಲ್ಲಿ ಬಿಜೆಪಿಯು 1991ರ ಬಳಿಕ ಇದುವರೆಗೆ 7 ಬಾರಿ ಈ ಕ್ಷೇತ್ರದಲ್ಲಿ ಜಯಭೇರಿ ಬಾರಿಸಿದೆ. 1991, 1996, 1998, 1999, 2004, 2014, 2019ರ ಲೋಕಸಭೆ ಚುನಾವಣೆಯಲ್ಲಿ ಬಿಜೆಪಿ ಗೆದ್ದಿದೆ. ಇನ್ನು ವಿಧಾನಸಭೆ ಚುನಾವಣೆಯಲ್ಲೂ ಬಿಜೆಪಿ ಉತ್ತಮ ಸಾಧನೆಯೇ ಮಾಡುತ್ತಿದೆ. 1999ರಲ್ಲಿ ಜಿಲ್ಲೆಯ ಆರು ಕ್ಷೇತ್ರಗಳ ಪೈಕಿ 5ರಲ್ಲಿ ಬಿಜೆಪಿ ಶಾಸಕರು ಗೆದ್ದಿರುವುದು ದಾಖಲೆಯಾಗಿದೆ. 2023ರಲ್ಲಿ ಇಲ್ಲಿ ಬಿಜೆಪಿಯಿಂದ 4 ಶಾಸಕರು ಗೆದ್ದಿದ್ದಾರೆ.

ಜನಸಂಘ, ಸಂಘದ ನೆಟ್ವರ್ಕ್ ಸಿಂದೋಲ್ ಅವರಿಗೆ ಗೆಲುವಿನ ದಡವನ್ನು ಸೇರಿಸಿತು. ಇಲ್ಲಿ ಗೆಲುವಿನ ಬಳಿಕ ರಾಜ್ಯದಲ್ಲಿ ಬೀದರ್ ಒಂಥರಾ ಸಂಘದ ಬಲಾಢ್ಯ ಕೇಂದ್ರ ಎಂಬತೆ ಬಿಂಬಿತವಾಗಿತ್ತು. ಸಿಂದೋಲ್ ಅವರಿಗೆ ರಾಜಕೀಯದಲ್ಲಿ ಅಷ್ಟೊಂದ ಆಸಕ್ತಿ ಇರಲಿಲ್ಲ. ಹೀಗಾಗಿ ಒಮ್ಮೆ ಶಾಸಕರಾದ ಬಳಿಕ ಮತ್ತೆ ರಾಜಕೀಯದಲ್ಲಿ ಸಕ್ರಿಯವಿರಲಿಲ್ಲ. 2020ರ ಫೆಬ್ರುವರಿ 8ರಂದು ಚಂದ್ರಕಾತ ಸಿಂದೋಲ್ ನಿಧನ ಹೊಂದಿದರು.

# ವಿಧಾನಸಭಾ ಉಪ ಚುನಾವಣೆ - 2024

ಮಹಿಳೆಯರ ಮುನ್ನಡೆ




ರಾಜ್ಯದ ಮೂರು ಕ್ಷೇತ್ರಗಳ ಉಪಚುನಾವಣೆಯಲ್ಲಿ ದಾಖಲೆಯ ಶೇ.81.84 ಮತದಾನವಾಗಿದ್ದು, ಕೆಲ ವೆಡೆ 'ನಾರಿ ಶಕ್ತಿ' ಕಂಗೊಳಿಸಿದೆ. ಚನ್ನಪಟ್ಟಣ, ಶಿಗ್ಗಾವಿ ಮತ್ತು ಸಂಡೂರು ಕ್ಷೇತ್ರಗಳಲ್ಲಿ ಮತದಾನ ಶಾಂತಿಯುತವಾಗಿ ನಡೆದಿದೆ. ಚನ್ನಪಟ್ಟಣ ವಿಧಾನಸಭಾ ಕ್ಷೇತ್ರದ ಉಪ ಚುನಾವಣೆಯಲ್ಲಿ ಶೇ. 88.80 ದಾಖಲೆಯ ಮತದಾನವಾಗಿದ್ದು, ಒಟ್ಟು 2,06,866 ಮತದಾರರು ತಮ್ಮ ಹಕ್ಕು ಚಲಾಯಿಸಿದ್ದಾರೆ. 276 ಮತಗಟ್ಟೆಯಲ್ಲಿ 1,00,501 ಪುರುಷ ಹಾಗೂ 1,06,362 ಮಹಿಳಾ ಮತದಾರರು ಮತ್ತು ಇತರ ಮೂವರು ಮತದಾರರು ಮತದಾನ ಮಾಡಿದ್ದಾರೆ. ಶಿಗ್ಗಾವಿ ಕ್ಷೇತ್ರದಲ್ಲಿ ಶೇ.80.48ರಷ್ಟು ಮತದಾನವಾಗಿದ್ದು, ಪ್ರಕ್ರಿಯೆ ಸುವ್ಯವಸ್ಥಿತವಾಗಿ ನಡೆದಿದೆ. 241 ಮತಗಟ್ಟೆಗಳಲ್ಲಿ ಅಂತಿಮವಾಗಿ ಮತದಾನ ಅವಧಿ ಮುಕ್ತಾಯದ ಬಳಿಕ 98,642 ಪುರುಷರು ಹಾಗೂ 92,522 ಮಹಿಳೆಯರು ಮತ್ತು ಇತರೆ 2 ಸೇರಿ ಒಟ್ಟು 1,91,166 ಜನರು ಮತಹಕ್ಕನ್ನು ಚಲಾಯಿಸಿದ್ದಾರೆ. ಸಂಡೂರು ವಿಧಾನಸಭೆ ಕ್ಷೇತ್ರದಲ್ಲಿ ಶೇ.76.24 ರಷ್ಟು ಮತದಾನವಾಗಿದೆ.









# ಮಾಸದ ಮಾಧುರ್ಯ 91ನೇ ಕಾರ್ಯಕ್ರಮದಲ್ಲಿ ಕನ್ನಡ ರಾಜ್ಯೋತ್ಸವ ಪ್ರಯುಕ್ತ

# ‘ಸಾಂಸ್ಕೃತಿಕ ಸಂಜೆ’

**ಜ**ಗನ್ನಾಥ ಬಳಗ ಆಯೋಜಿಸಿಕೊಂಡು ಬರುತ್ತಿರುವ ತಿಂಗಳ ಕಾರ್ಯಕ್ರಮದ ಸರಣಿಯಲ್ಲಿ 91ನೇ ಕಾರ್ಯಕ್ರಮವಾಗಿ ಕನ್ನಡ ರಾಜ್ಯೋತ್ಸವ ಪ್ರಯುಕ್ತ ಆಯೋಜಿಸಿದ ‘ಸಾಂಸ್ಕೃತಿಕ ಸಂಜೆ’ ದಿ. 10-11-2024ರಂದು ವೈವಿದ್ಯಮಯವಾಗಿ ಆಗಮಿಸಿದ ಕಲಾಭಿಮಾನಿಗಳನ್ನು ಸಂತೋಷಪಡಿಸುವಲ್ಲಿ ಯಶಸ್ವಿಯಾಯಿತು.

ಜಗನ್ನಾಥ ಭವನದ ಸಿಬ್ಬಂದಿ ವರ್ಗ ಹಾಗೂ ಸಾಂಸ್ಕೃತಿಕ ಪ್ರಕೋಷ್ಠ ಜಂಟಿಯಾಗಿ ಎರಡೂವರೆ ಘಂಟೆ ವಿವಿಧ ಪ್ರಾಕಾರದ ಹಾಡು, ನಾಟಕ, ಯಕ್ಷಗಾನ ಹಾಗೂ ನಾಡಿಗಾಗಿ, ದೇಶಕ್ಕಾಗಿ ಸೇವೆ ಸಲ್ಲಿಸಿದ ಸಾಧಕರಿಗೆ ಸನ್ಮಾನಿಸಿ ರಾಜ್ಯೋತ್ಸವವನ್ನು ಅರ್ಥಪೂರ್ಣಗೊಳಿಸಿತು.

ಕಾರ್ಯಾಲಯದ ವ್ಯವಸ್ಥಾಪಕರಾದ ಶ್ರೀ ಸಂಜಯ ರವರ ಗಣಪತಿ ಸ್ತುತಿಯಿಂದ ಆರಂಭಗೊಂಡ ಸಾಂಸ್ಕೃತಿಕ ಸಂಜೆ ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಶ್ರೀ ದೊಡ್ಡನಗೌಡ ಪಾಟೀಲ್, ಶಾಸಕರು ಹಾಗೂ ವಿಧಾನಸಭಾ ಮುಖ್ಯ ಸಚೇತರು ಮತ್ತು ಸಾಧಕರಾದ ಮೇಜರ್ ಗಣಪತಿ ಹೆಗಡೆ, ನಿವೃತ್ತ ಸೈನಿಕರು, ಪ್ರೋ. ಶ್ರೀ ಸತ್ಯನಾರಾಯಣ ಶೆಟ್ಟಿ ಹಾಗೂ ರಂಗ ಕಲಾವಿದ ಶ್ರೀ ಆಂಜನೇಯ, ಕಾರ್ಯಾಲಯ ಕಾರ್ಯದರ್ಶಿಗಳಾದ ಶ್ರೀ ಲೋಕೇಶ್ ಅಂಬೆಕಲ್ಲು, ಕಾರ್ಯಕ್ರಮದ ಸಂಯೋಜಕರಾದ ಶ್ರೀ ದತ್ತಗುರು ಹೆಗಡೆ, ಸಾಂಸ್ಕೃತಿಕ ಪ್ರಕೋಷ್ಠದ ಸಹ-ಸಂಚಾಲಕರಾದ ಶ್ರೀ ಆತ್ಮಾನಂದ ಅವರುಗಳಿಂದ ಕನ್ನಡ ಮಾತೆಗೆ, ಭಾರತ ಮಾತೆಗೆ ಪುಷ್ಪಾರ್ಚನೆ ಮಾಡಿ ಮೂವರು ಸಾಧಕರಿಗೆ ಮುಖ್ಯ ಅತಿಥಿಗಳಿಂದ ಸನ್ಮಾನಿಸಲಾಯಿತು.

ಸನ್ಮಾನಿಸಿ ಮಾತನಾಡಿದ ಅತಿಥಿಗಳು ಅತ್ಯಂತ ಅರ್ಥಪೂರ್ಣವಾಗಿ ಆಯೋಜನೆಗೊಂಡ ಈ ಕಾರ್ಯಕ್ರಮದಲ್ಲಿ ಭಾಗವಹಿಸಿ ಈ ದೇಶಕ್ಕಾಗಿ ಜೀವದ ಹಂಗು ತೊರೆದು ನಮ್ಮ ರಕ್ಷಣೆ ಮಾಡಿದ ಮೇಜರ್ ಗಣಪತಿ ಹೆಗಡೆ, ನಾಡಿಗೆ, ದೇಶಕ್ಕೆ ಹಲವು ಶಿಷ್ಯರನ್ನು ಕೊಟ್ಟ ಪ್ರೊಫೆಸರ್ ಶ್ರೀ ಸತ್ಯನಾರಾಯಣ ಶೆಟ್ಟಿಯವರನ್ನು ಹಾಗೂ ನುರಿತ ರಂಗಕಲಾವಿದರಾದ ಶ್ರೀ ಆಂಜನೇಯರವರನ್ನು ಸನ್ಮಾನಿಸಿದ್ದು ನನಗೆ ಹೆಮ್ಮೆ ಮತ್ತು ಅಭಿಮಾನ ಎಂದು ಹೇಳಿದರು. ಸನ್ಮಾನಿತರ ಪರವಾಗಿ ಮಾತನಾಡಿದ ಮೇಜರ್ ಶ್ರೀ ಗಣಪತಿ ಹೆಗಡೆ ರವರು ಈ ನಾಡಿನ ಮಣ್ಣಿನಲ್ಲಿ ಕ್ಷಾತ್ರತೆ ಬೆರೆತಿದೆ, ಕಾರಣ ಪ್ರತಿ ಮನೆಯಲ್ಲಿಯೂ ಒಬ್ಬೊಬ್ಬ ಯೋಧನಿದ್ದಾನೆ. ಅವನಿಗೆ ನಿಮ್ಮ ಪ್ರೋತ್ಸಾಹ ಸದಾ ಇರಲಿ. ಸಮಾಜ ಮುಖಿಯಾಗಿ ನಮ್ಮ ಹುಟ್ಟನ್ನು ಸಾರ್ಥಕಗೊಳಿಸಲು ಅನುವು ಮಾಡಿಕೊಟ್ಟ ಕನ್ನಡ ಜನತೆಗೆ, ದೇಶಕ್ಕೆ ನಾವೆಲ್ಲ ಋಣಿಯಾಗಿದ್ದೇವೆ ಎಂದು ಹೇಳಿದರು.

ಜಗನ್ನಾಥ ಭವನದ ಸಿಬ್ಬಂದಿಗಳೆಲ್ಲ ಸೇರಿ ಹಚ್ಚೇವು ಕನ್ನಡದ ದೀಪ ಹಾಡನ್ನು ಶ್ರೀ ಶ್ರೀನಾಥ್ ಭರದ್ವಾಜ್ ಅವರ ನಿರ್ದೇಶನದಲ್ಲಿ ಇಂಪಾಗಿ ಹಾಡಿದರು. ಶ್ರೀ ರಾಕೇಶ್ ರವರು ಮಕರ ಸಂಕ್ರಮಣ ದೀಪಾವಳಿ ಹಾಡನ್ನು ಭಕ್ತಿಪೂರ್ವಕವಾಗಿ ಹಾಡಿ ಸೈ ಎನಿಸಿಕೊಂಡರು. ನಾಗರ ಹಾವು ಚಿತ್ರದ ಬಾರೆ ಬಾರೆ ಚಂದದ ಚೆಲುವಿನ ತಾರೆ ಹಾಡನ್ನು ಶ್ರೀ ಕುಮಾರ್ ರವರು, ನೀನೆಲ್ಲಿ ನಡೆವೆ ದೂರ ಹಾಡನ್ನು ಶ್ರೀ ದಾಮೋದರ ನಾಯ್ಕ ರವರು, ಕಂಬದ ಮ್ಯಾಲಿನ ಗೊಂಬೆಯೇ ಹಾಡನ್ನು ಕು. ಪದ್ಮಾವತಿ ಜೋಷಿ ರವರು ಹಾಡಿದರು.

ತುಮಕೂರು ಅಮರೇಶ್ವರ ನಾಟಕ ಮಂಡಳಿಯಿಂದ ‘ಮಿಸ್ಟರ್ ಡ್ಯೂಪ್ಲಿಕೇಟ್’, ಶ್ರೀ ರಾಮಕೃಷ್ಣ ಉರಾಳ ತಂಡದವರಿಂದ ಯಕ್ಷಗಾನ ಪ್ರಸಂಗ ‘ಪುಣ್ಯಕೋಟಿ’, ಶ್ರೀ ಮುರಾರ್ಜಿ ರವರಿಂದ ಜಾನಪದ ಹಾಡುಗಳು ಅತ್ಯಂತ ಯಶಸ್ವಿಯಾಗಿ ರಂಗ ವೈಭವಕ್ಕೆ ಕಾರಣವಾಯಿತು. ಕಾರ್ಯಕ್ರಮದ ಆರಂಭದಿಂದ ಕಡೆಯವರೆಗೆ ನಿರೂಪಣೆ ಮಾಡಿ ಎಲ್ಲರಿಗೂ ಧನ್ಯವಾದ ಹೇಳಿದ ಶ್ರೀ ದಾಮೋದರ ನಾಯ್ಕ ರವರ ಶ್ರಮ ಸಾರ್ಥಕ.





# ‘ಮನ್ ಕಿ ಬಾತ್’

## ಭಾರತದ ಪ್ರಗತಿ ಮತ್ತು ಸಾಮೂಹಿಕ ಮನೋಭಾವದ ಪ್ರತಿಬಿಂಬ



**ಪ್ರಸನ್ನ ನಾಯ್ಕ**
ರಾಜ್ಯ ಸಂಚಾಲಕರು, ಫಲಾನುಭವಿಗಳ ಪ್ರಕೋಷ್ಠ

‘ಮನ್ ಕಿ ಬಾತ್‘ ಭಾರತದ ಹೆಮ್ಮೆಯ ಪ್ರಧಾನಿ ಶ್ರೀ ನರೇಂದ್ರ ಮೋದಿ ರವರು ಭಾರತ 140 ಕೋಟಿ ಜನರೊಂದಿಗೆ ಸಂವಾದವನ್ನು ಮಾಡಲು 2014 ರಲ್ಲಿ ಪ್ರಾರಂಭಿಸಿದ ಮಾಸಿಕ ರೇಡಿಯೋ ಕಾರ್ಯಕ್ರಮ. ಪ್ರಧಾನ ಮಂತ್ರಿಗಳು ‘ಮನ್ ಕಿ ಬಾತ್’ ಕಾರ್ಯಕ್ರಮದಲ್ಲಿ ದೇಶದ ಶಕ್ತಿ, ಸಾಧನೆ, ವಿವಿಧ ಕ್ಷೇತ್ರಗಳಲ್ಲಿ ಸಾಧನೆಯನ್ನು ಮಾಡಿರುವ ಅನೇಕ ಮಹನೀಯರ ಪರಿಚಯ, ರಾಷ್ಟ್ರೀಯ ಏಕತೆ ಮತ್ತು ಸಾಮಾಜಕಲ್ಯಾಣ, ಪರಿಸರ ಸಂರಕ್ಷಣೆ, ನಾವಿನ್ಯತೆ ಹಾಗೂ ವಿಕಸಿತ ಭಾರತದ ಗುರಿಯನ್ನು ತಲುಪಲು ಸಾಮೂಹಿಕ ಪ್ರಯತ್ನದ ಅಗತ್ಯತೆಯ ಕುರಿತು ಚರ್ಚಿಸುತ್ತಾರೆ.

ಮೊದಲ ‘ಮನ್ ಕಿ ಬಾತ್’ ಕಾರ್ಯಕ್ರಮವು 3 ಅಕ್ಟೋಬರ್ 2014 ರಂದು ಆಲ್ ಇಂಡಿಯಾ ರೇಡಿಯೋದಲ್ಲಿ ಪ್ರಸಾರವಾಯಿತು. ಈಗ, ಡಿಡಿ ನ್ಯಾಷನಲ್, ಡಿಡಿ ನ್ಯೂಸ್ ಮತ್ತು ನ್ಯೂಸ್ ಆನ್ ಏರ್ ಮೊಬೈಲ್ ಅಪ್ಲಿಕೇಶನ್‌ನಲ್ಲಿ ಕೂಡ ಪ್ರಸಾರ ಆಗುತ್ತಿದೆ. ಮನ್ ಕಿ ಬಾತ್ ಕಾರ್ಯಕ್ರಮವು, ಭಾರತದ 22 ಅಧಿಕೃತ ಭಾಷೆಗಳು, 29 ಉಪಭಾಷೆಗಳು ಹಾಗೂ 11 ವಿದೇಶಿ ಭಾಷೆಗಳಲ್ಲಿ ಪ್ರಸಾರವಾಗುತ್ತಿದೆ.

ಆಲ್ ಇಂಡಿಯಾ ರೇಡಿಯೋ 501 ಪ್ರಸಾರ ಕೇಂದ್ರಗಳ ಮೂಲ ‘ಮನ್ ಕಿ ಬಾತ್’ ಕಾರ್ಯಕ್ರಮವನ್ನು ಪ್ರಸಾರ ಮಾಡಿ, ದೇಶದ ಶೇ. 90ರಷ್ಟು ಜನರನ್ನು ಸಂಪರ್ಕಿಸಲು ಮಹತ್ವದ ಪಾತ್ರವನ್ನು ನಿರ್ವಹಿಸುತ್ತಿದೆ.


**ಇದುವರೆಗಿನ ‘ಮನ್ ಕಿ ಬಾತ್’ ಕಾರ್ಯಕ್ರಮದಲ್ಲಿ ಮಾನ್ಯ ಪ್ರಧಾನ ಮಂತ್ರಿಗಳು ಪ್ರಸ್ತಾಪಿಸಿದ ಪ್ರಮುಖ ವಿಷಯಗಳು:** ಸ್ವಚ್ಛ ಭಾರತ ಅಭಿಯಾನ, ಡಿಜಿಟಲ್ ಇಂಡಿಯಾ , ತಂತ್ರಜ್ಞಾನ ಅಳವಡಿಕೆ, ಅಂತರಾಷ್ಟ್ರೀಯ ಯೋಗ ದಿನ, ಆತ್ಮನಿರ್ಭರ ಭಾರತ, ಜಲ ಸಂರಕ್ಷಣೆ, ಮಹಿಳಾ ಸಬಲೀಕರಣ, ಆಯುಷ್ಮಾನ್ ಭಾರತ (ರಾಷ್ಟ್ರೀಯ ಆರೋಗ್ಯ ರಕ್ಷಣಾ ಯೋಜನೆ), ರಾಷ್ಟ್ರೀಯ ಏಕತೆ ಮತ್ತು ಸಮಗ್ರತೆ, ರಾಷ್ಟ್ರ ನಿರ್ಮಾಣದಲ್ಲಿ ಯುವಕರ ಪಾತ್ರ, ಪರಿಸರ ಸಂರಕ್ಷಣೆ , ಪ್ಲಾಸ್ಟಿಕ್ ಮುಕ್ತ ಭಾರತ, ಸಾಮಾನ್ಯ ಜನರ ಸ್ಫೂರ್ತಿದಾಯಕ ಸಾಧನೆಗಳು, ಡಿಜಿಟಲ್ ಸಾಕ್ಷರತೆ , ಭಾರತದ ಪರಂಪರೆ, ಸಾಂಸ್ಕೃತಿಕ ಹೆಮ್ಮೆ, ರಾಷ್ಟ್ರೀಯ ಭದ್ರತೆ , ಅಂತರಾಷ್ಟ್ರೀಯ ಸಂಬಂಧಗಳು , ಜಾಗತಿಕ ಸಮಸ್ಯೆಗಳು, ಕೌಶಲ್ಯ ಅಭಿವೃದ್ಧಿ ಮತ್ತು ಉದ್ಯಮಶೀಲತೆ.

ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಮ್ಯಾನೇಜ್ಮೆಂಟ್ ನಡೆಸಿದ ಸಮೀಕ್ಷೆಯ ಪ್ರಕಾರ, ಕನಿಷ್ಠ 23 ಕೋಟಿ ಜನರು ಮೋದಿಯವರ ಮಾಸಿಕ ರೇಡಿಯೋ ಪ್ರಸಾರವನ್ನು ನಿಯಮಿತವಾಗಿ 'ಕೇಳಿದ್ದಾರೆ ಅಥವಾ ವೀಕ್ಷಿಸಿದ್ದಾರೆ' ಇದುವರೆಗೂ ಸುಮಾರು 100 ಕೋಟಿಗಿಂತಲೂ ಹೆಚ್ಚಿನ ಜನ, ಮನ್ ಕಿ ಬಾತ್ ಕಾರ್ಯಕ್ರಮವನ್ನು ಒಮ್ಮೆಯಾದರೂ ಕೇಳಿದ್ದಾರೆ.

ಜನರ ಸಹಭಾಗಿತ್ವದೊಂದಿಗೆ, ವಿಕಸಿತ ಭಾರತದ ಸಂಕಲ್ಪವನ್ನು ಈಡೇರಿಸಲು ‘ಮನ್ ಕಿ ಬಾತ್’ ಕಾರ್ಯಕ್ರಮ ಮಹತ್ವದ ಪಾತ್ರವನ್ನು ನಿರ್ವಹಿಸುತ್ತಿದೆ, ಭಾರತೀಯ ಜನತಾ ಪಕ್ಷದ ಪ್ರತಿಯೊಬ್ಬ ಕಾರ್ಯಕರ್ತರು ಕೂಡ ತನ್ನನ್ನ ತಾನು ರಾಷ್ಟ್ರ ನಿರ್ಮಾಣಕ್ಕಾಗಿ ಸೇವೆಯನ್ನ ಸಲ್ಲಿಸಲು ಸಮರ್ಪಿಸಿಕೊಂಡವರು, ಹಾಗಾಗಿ ಮನ್ ಕಿ ಬಾತ್ ಕಾರ್ಯಕ್ರಮವನ್ನು ಪ್ರತಿಯೊಂದು ಮತಗಟ್ಟೆಯಲ್ಲಿಯೂ ಕಾರ್ಯಕರ್ತರ ಸಹಭಾಗಿತ್ವದೊಂದಿಗೆ ವೀಕ್ಷಣೆ ಮಾಡುವಂತೆ ಮಾಡುವುದು ಮತ್ತು ವೀಕ್ಷಣೆ ಮಾಡಿದ ಮಾಹಿತಿಯನ್ನು ವರದಿ ಮಾಡುವುದರ ಸಲುವಾಗಿ ಪಕ್ಷದ ಆಂತರಿಕ ಸಂಘಟನೆ ಚಟುವಟಿಕೆಗಾಗಿ ಬಳಸುವ ಸರಳ ಆ್ಯಪ್ ಮೂಲಕ ದೇಶದಾದ್ಯಂತ ವರದಿಯನ್ನ ಮಾಡಲು ಕಾರ್ಯಕರ್ತರಿಗಾಗಿ ಒಂದು ವ್ಯವಸ್ಥೆಯನ್ನು ನಿರ್ಮಿಸಲಾಗಿದೆ.

ರಾಜ್ಯ ಬಿಜೆಪಿಯಿಂದಲೂ ಮನ್ ಕಿ ಬಾತ್ ಕಾರ್ಯ ಚಟುವಟಿಕೆಯನ್ನು ನಿರ್ವಹಿಸುವುದರ ಸಲುವಾಗಿ ಜೂನ್ 2024ರಂದು ರಾಜ್ಯ ಪ್ರಧಾನ ಕಾರ್ಯದರ್ಶಿಗಳು ಶ್ರೀ. ಪಿ. ರಾಜೀವ ಅವರ ನೇತೃತ್ವದಲ್ಲಿ, ಕುಮಾರಿ. ಭಾರತಿ ಮಗುದಂ ಮತ್ತು ಶ್ರೀ. ಪ್ರಸನ್ನ ನಾಯ್ಕ ಇವರನ್ನು ರಾಜ್ಯ ಸಹ ಸಂಚಾಲಕರನ್ನಾಗಿ ನಿಯುಕ್ತಿ ಮಾಡಿ , ಪ್ರತಿಯೊಂದು ಜಿಲ್ಲೆ ಮತ್ತು ಮಂಡಲದಲ್ಲಿ ಮೂರು ಜನರ ತಂಡವನ್ನು ಹೊಸದಾಗಿ ರಚಿಸಲಾಗಿದೆ,

111 ನೇ ಮನ್ ಕಿ ಬಾತ್ ಕಾರ್ಯಕ್ರಮದಿಂದ, ಹೊಸದಾಗಿ ರಚನೆಯಾದ ತಂಡವು, ಪಕ್ಷದ ಎಲ್ಲಾ ಕಾರ್ಯಕರ್ತರ ಸಹಭಾಗಿತ್ವದೊಂದಿಗೆ ಅತ್ಯಂತ ಯಶಸ್ವಿಯಾಗಿ ಕಾರ್ಯವನ್ನು ನಿರ್ವಹಿಸುತ್ತಿದೆ. ಮೇ 2024 ರ 110ನೇ ಮನ್ ಕಿ ಬಾತ್ ಕಾರ್ಯಕ್ರಮದಲ್ಲಿ ಕರ್ನಾಟಕವು ರಾಷ್ಟ್ರಮಟ್ಟದಲ್ಲಿ 30ನೇ ಸ್ಥಾನದಲ್ಲಿತ್ತು, ಅಕ್ಟೋಬರ್ 2024ರ 115ನೇ ಮನ್ ಕಿ ಬಾತ್ ನಲ್ಲಿ ರಾಷ್ಟ್ರಮಟ್ಟದಲ್ಲಿ ಕರ್ನಾಟಕವು 9 ನೇ ಸ್ಥಾನಕ್ಕೆ ತಲುಪಿದೆ ಹಾಗೂ ಅತಿ ಹೆಚ್ಚು ಮತಗಟ್ಟೆಯಲ್ಲಿ ಮನ್ ಕಿ ಬಾತ್ ವೀಕ್ಷಣೆಯ ವರದಿಯಲ್ಲಿ ರಾಷ್ಟ್ರಮಟ್ಟದಲ್ಲಿ 3 ನೇ ಸ್ಥಾನಕ್ಕೆ ತಲುಪಿದೆ.




| | |
|---|---|
| **ಬೀದರ್** | **93%** |
| **ದಕ್ಷಿಣ ಕನ್ನಡ** | **77%** |
| **ಕಲಬುರ್ಗಿ ಗ್ರಾ.** | **53%** |

**'ಮನ್ ಕಿ ಬಾತ್' ಕಾರ್ಯಕ್ರಮವನ್ನು ವೀಕ್ಷಣೆ ಮಾಡಿ ಸರಳ ಆಪ್ ನಲ್ಲಿ, ಇತರರಿಗೆ ಮಾದರಿ ಆಗುವ ರೀತಿಯಲ್ಲಿ ಯಶಸ್ವಿಯಾಗಿ, ವರದಿ ಮಾಡುತ್ತಿರುವ ಬೀದರ್, ದಕ್ಷಿಣ ಕನ್ನಡ, ಮತ್ತು ಕಲಬುರ್ಗಿ ಗ್ರಾಮಾಂತರ ಜಿಲ್ಲೆಯ ಎಲ್ಲಾ ಕಾರ್ಯಕರ್ತರಿಗೂ ಅಭಿನಂದನೆಗಳು.**

**ರಾಜ್ಯದಲ್ಲಿ ಇರುವ ಒಟ್ಟು 224 ವಿಧಾನಸಭಾ ಕ್ಷೇತ್ರಗಳ ಪೈಕಿ 10 ವಿಧಾನಸಭಾ ಕ್ಷೇತ್ರಗಳು, ಆ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಮತಗಟ್ಟೆಯಲ್ಲಿಯೂ ಮನ್ ಕಿ ಬಾತ್ ಕಾರ್ಯಕ್ರಮವನ್ನು ವೀಕ್ಷಣೆ ಮಾಡಿ, ಸರಳ ಆ್ಯಪ್‌ನಲ್ಲಿ 100% ವರದಿಯನ್ನು ಸಲ್ಲಿಸಿದೆ,**

**100% ಬೂತ್ ಗಳಲ್ಲಿ 'ಮನ್ ಕಿ ಬಾತ್' ವೀಕ್ಷಿಸಿದ ವಿಧಾನಸಭಾ ಕ್ಷೇತ್ರಗಳು**

| ವಿಧಾನಸಭಾ ಕ್ಷೇತ್ರ | ನೇತೃತ್ವ ವಹಿಸಿದವರು | ಜವಾಬ್ದಾರಿ |
|---|---|---|
| ಕಲಬುರ್ಗಿ ಗ್ರಾಮಾಂತರ | ಶ್ರೀ. ಅಶೋಕ್ ಬಗಲಿ | ಜಿಲ್ಲಾ ಪ್ರಧಾನ ಕಾರ್ಯದರ್ಶಿ |
| ಬೆಳತಂಗಡಿ | ಶ್ರೀ. ಸೀತಾರಾಮ್ . ಬಿ.ಎಸ್. | ಜಿಲ್ಲಾ ಕಾರ್ಯದರ್ಶಿ |
| ಹುಮ್ನಾಬಾದ್ | ಶ್ರೀ. ಅನಿಲ್ ಪಸರಗಿ | ಮಂಡಲ ಅಧ್ಯಕ್ಷರು |
| ಬಸವಕಲ್ಯಾಣ | ಶ್ರೀ. ಜ್ಞಾನೇಶ್ವರ ಮೂಳೆ | ಮಂಡಲ ಅಧ್ಯಕ್ಷರು |
| ಬಸವಕಲ್ಯಾಣ | ಶ್ರೀ. ಸಿದ್ದು ಬಿರಾದರ್ | ಮಂಡಲ ಅಧ್ಯಕ್ಷರು |
| ಬಾಲ್ಕಿ | ಶ್ರೀ. ವೀರಣ್ಣ ಕಾರ್ಬಾರಿ | ಮಂಡಲ ಅಧ್ಯಕ್ಷರು |
| ಔರಾದ | ಶ್ರೀ ರಾಮ್ ಶೆಟ್ಟಿ ಪನ್ನಾಳೆ | ಮಂಡಲ ಅಧ್ಯಕ್ಷರು |
| ಹರಪನಹಳ್ಳಿ | ಶ್ರೀ. ವೆಂಕಟೇಶ್ ನಾಯ್ಕ | ಮಂಡಲ ಪ್ರಧಾನ ಕಾರ್ಯದರ್ಶಿ |
| ಬೈಂದೂರು | ಶ್ರೀ. ಉಮೇಶ್ ಶೆಟ್ಟಿ | ಮಂಡಲ ಪ್ರಧಾನ ಕಾರ್ಯದರ್ಶಿ |
| ತುಮಕೂರು ನಗರ | ಶ್ರೀ. ಸಂದೀಪ್ ಗೌಡ | ಜಿಲ್ಲಾ ಪ್ರಧಾನ ಕಾರ್ಯದರ್ಶಿ |
| ಅರಸೀಕೆರೆ | ಶ್ರೀ. ಅಮಿತ್ ಕುಮಾರ್ ಶೆಟ್ಟಿ | ಜಿಲ್ಲಾ ಪ್ರಧಾನ ಕಾರ್ಯದರ್ಶಿ |

'ಮನ್ ಕಿ ಬಾತ್' ಪ್ರಧಾನ ಮಂತ್ರಿ ಮತ್ತು ಭಾರತದ ನಾಗರಿಕರ ನಡುವಿನ ಸಂವಹನಕ್ಕೆ ಪ್ರಮುಖ ಸಾಧನವಾಗಿ ಕಾರ್ಯನಿರ್ವಹಿಸುತ್ತದೆ. ಈ ಕಾರ್ಯಕ್ರಮದ ಮೂಲಕ, ನರೇಂದ್ರ ಮೋದಿಯವರು ಭಾರತೀಯ ಜೀವನದ ವಿವಿಧ ಆಯಾಮಗಳನ್ನು ತಿಳಿಸುತ್ತಾರೆ, ಭಾರತವು ಸಾಧಿಸಿರುವ ಪ್ರಗತಿಯನ್ನು ಪ್ರತಿಧ್ವನಿಸುತ್ತಾರೆ, ಮುಂದೆ ಎದುರಾಗುವ ಸವಾಲುಗಳನ್ನು ಜಯಿಸಲು ಸಾಮೂಹಿಕ ಪ್ರಯತ್ನದ ಅಗತ್ಯತೆಯನ್ನು ಜಾಗೃತಗೊಳಿಸುತ್ತಾರೆ. ಭಾಗವಹಿಸುವಿಕೆ ಮತ್ತು ಮಾಲೀಕತ್ವದ ಪ್ರಜ್ಞೆಯನ್ನು ಬೆಳೆಸುವ ಮೂಲಕ, 'ಮನ್ ಕಿ ಬಾತ್' ರಾಷ್ಟ್ರದ ಬೆಳವಣಿಗೆ ಮತ್ತು ಅಭಿವೃದ್ಧಿಗೆ ಕೊಡುಗೆ ನೀಡಲು ನಾಗರಿಕರನ್ನು ಉತ್ತೇಜಿಸುತ್ತಾರೆ.



ಮನ್ ಕಿ ಬಾತ್

# ಡಿಜಿಟಲ್ ಅಲರ್ಟ್

## ಪ್ರಧಾನಿ ಶ್ರೀ ನರೇಂದ್ರ ಮೋದಿ ಕರೆ

ಕಾನೂನಿನಲ್ಲಿ ಡಿಜಿಟಲ್ ಅರೆಸ್ಟ್ ಎಂಬುದಿಲ್ಲ. ಇದೊಂದು ತೀರಾ ಮೋಸದ ಚಟುವಟಿಕೆ, ಇದರ ಬಗ್ಗೆ ಜಾಗೃತರಾಗಿರಬೇಕು, ಎಚ್ಚರದಿಂದರಬೇಕು ಎಂದು ಪ್ರಧಾನಿ ಶ್ರೀ ನರೇಂದ್ರ ಮೋದಿ ಜನರಿಗೆ ಕರೆ ನೀಡಿದರು. ತಮ್ಮ 'ಮನ್ ಕಿ ಬಾತ್' 113ನೇ ಕಾರ್ಯಕ್ರಮದಲ್ಲಿ ಪ್ರಧಾನಿ ಶ್ರೀ ಮೋದಿ ಡಿಜಿಟಲ್ ಅರೆಸ್ಟ್ ಬಗ್ಗೆ ಶ್ರೋತೃಗಳಿಗೆ ವಿಸ್ತೃತ ಮಾಹಿತಿ ನೀಡಿದರು. ಡಿಜಿಟಲ್ ಅರೆಸ್ಟ್‌ನಂತಹ ಅಪರಾಧಗಳಲ್ಲಿ ಶಾಮೀಲಾದವರು ಸಮಾಜದ್ರೋಹಿಗಳು, ಡಿಜಿಟಲ್ ಅರೆಸ್ಟ್ ಬೇರೇನಲ್ಲ, ತೀರಾ ಮೋಸ, ವಂಚನೆ, ಸುಳ್ಳಿನ ಕಂತೆ, ಕ್ರಿಮಿನಲ್‌ಗಳ ಗ್ಯಾಂಗ್‌ನ ಕೃತ್ಯವಿದಾಗಿದ್ದು, ಇದನ್ನು ಮಾಡುವವರು ಸಮಾಜದ ಶತ್ರುಗಳು ಎಂದು ಟೀಕಿಸಿದರು. ಇಂತಹ ವಂಚನೆ ಸ್ಕೀಮ್‌ಗಳನ್ನು ಮಟ್ಟಹಾಕುವಲ್ಲಿ ವಿವಿಧ ತನಿಖಾ ಸಂಸ್ಥೆಗಳು ರಾಜ್ಯ ಸರ್ಕಾರಗಳಿಗೆ ಸಹಯೋಗ ನೀಡುತ್ತಿವೆ. ಇಂತಹ ಹಗರಣಗಳ ಬಲೆಯಿಂದ ಜನರನ್ನು ಕಾಪಾಡುವುದು ಸರ್ಕಾರದ ಮೂಲೋದ್ದೇಶ ಎಂದು ವಿವರಿಸಿದರು.

**ಯಾವ್ಯಾವ ರೀತಿ ವಂಚನೆ:** ಕ್ರಿಮಿನಲ್ ಗ್ಯಾಂಗ್‌ಗಳು ಮೊದಲು ನಿಮ್ಮೆಲ್ಲಾ ವೈಯಕ್ತಿಕ ಮಾಹಿತಿಗಳನ್ನು ಸಂಗ್ರಹಿಸುತ್ತವೆ. ನೀವು ಬೆಚ್ಚಿ ಬೀಳೋ ರೀತಿ ನಿಮಗೆ ಸಂಬಂಧಿತ ಮಾಹಿತಿಗಳನ್ನು ನಿಮ್ಮ ಮುಂದಿಡುತ್ತಾರೆ, ನಿಮ್ಮನ್ನು ಭೀತಿಗೊಳಿಸಿ ನಂತರ ಫೋನ್ ಮೂಲಕ ದುಡ್ಡಿಗಾಗಿ ಬೆದರಿಕೆಯೊಡ್ಡಿ ಮಾನಸಿಕ ಒತ್ತಡ ನೀಡಿ ಹೆದರಿ ವಂಚಕ ಗ್ಯಾಂಗ್ ಫೋನ್ ಮುಖೇನ ಒತ್ತಡ ಹಾಕುತ್ತದೆ.

**ವಂಚಕರಿಂದ ಕರೆ ಬಂದಾಗ ಹೆದರದಿರಿ:** ಜನರು ಡಿಜಿಟಲ್ ಅರೆಸ್ಟ್ ದಾಳದ ಬಲಿಪಶುಗಳಾಗಿ ತಮ್ಮ ಕಠಿಣ ದುಡಿಮೆಯ ಲಕ್ಷಾಂತರ ರೂಪಾಯಿ ಕಳೆದುಕೊಂಡಿದ್ದಾರೆ. ವಂಚಕರು ಕರೆ ಮಾಡಿದಾಗ ಹೆದರದಿರಿ, ಯಾವ ತನಿಖಾ ಸಂಸ್ಥೆ ಕೂಡ ಫೋನ್ ಕರೆ ಅಥವಾ ವಿಡಿಯೋ ಕಾಲ್ ಮೂಲಕ ನಿಮ್ಮನ್ನು ತನಿಖೆಗೊಳಪಡಿಸುವುದಿಲ್ಲ ಎಂದು ಪ್ರಧಾನಿ ಶ್ರೀ ಮೋದಿ ಸಲಹೆ ಮಾಡಿದರು.

**ಹೆಲ್ಪ್‌ಲೈನ್ 1930ಕ್ಕೆ ಕರೆ ಮಾಡಿ:** ವಂಚಕರಿಂದ ಕರೆ ಬಂದಾಗ ನ್ಯಾಷನಲ್ ಸೈಬರ್ ಹೆಲ್ಪ್‌ಲೈನ್ 1930ಕ್ಕೆ ಕಡೆ ಮಾಡಿ, ಅಥವಾ cybercrime.gove.in ಗೆ ವರದಿ ಮಾಡಿ ಅಥವಾ ಪೊಲೀಸರಿಗೆ ಮಾಹಿತಿ ಕೊಡಿ, ಇಂತಹ ಸಾವಿರಾರು ವಂಚಕ ವಿಡಿಯೋ ಕಾಲಿಂಗ್ ಐಡಿಗಳನ್ನು ತನಿಖಾ ಸಂಸ್ಥೆಗಳು ಬ್ಲಾಕ್ ಮಾಡಿದೆ ಎಂದು ಹೇಳಿದರು.

**ಹೊಸ ಕ್ರಾಂತಿ ಸೃಷ್ಟಿಸಲು ಸಜ್ಜು :** ಅನಿಮೇಶನ್ ಜಗತ್ತಿನಲ್ಲಿ ಹೊಸ ಕ್ರಾಂತಿ ಸೃಷ್ಟಿಸಲು ಭಾರತ ಸಜ್ಜಾಗುತ್ತಿದೆ. ಭಾರತೀಯ ಅನಿಮೇಟೆಡ್ ಸರಣಿ ಧಾರವಾಹಿಗಳಾದ 'ಛೋಟಾ ಭೀಮ್', 'ಹನುಮಾನ್ ಮತ್ತು ಮೋಟುಪಟ್ಟು ಜನಪ್ರಿಯತೆಯನ್ನು ನೆನಪಿಸಿದ ಅವರು, ಭಾರತದ ಅನಿಮೇಶನ್ ಪಾತ್ರಗಳು ಮತ್ತು ಚಲನಚಿತ್ರಗಳು ಉತ್ತಮ ತಿರುಳು, ಕ್ರಿಯಾಶೀಲತೆಯಿಂದಾಗಿ ಜಗತ್ತಿನ ಸಮಸ್ತರ ಮನ ಗೆದ್ದಿವೆ ಎಂದು ಹೇಳಿದರು.

**ಸರ್ವವ್ಯಾಪಿ ಅನಿಮೇಶನ್:** ಭಾರತದ ಗೇಮಿಂಗ್ ಸ್ಪೇಸ್ ತ್ವರಿತವಾಗಿ ವಿಸ್ತಾರವಾಗುತ್ತಿದೆ. ಭಾರತೀಯ ಗೇಮ್ಸ್‌ಗಳು ಜಗತ್ತಿನೆಲ್ಲೆಡೆ ತುಂಬು ಜನಪ್ರಿಯತೆ ಗಳಿಸುತ್ತಿವೆ. 'ಮೇಡ್ ಇನ್ ಇಂಡಿಯಾ ಮತ್ತು ಮೇಡ್ ಬೈ ಇಂಡಿಯಾ' ಪರಿಕಲ್ಪನೆಯು ಅನಿಮೇಶನ್ ಜಗತ್ತಲ್ಲಿ ಎಲ್ಲೆಡೆ ವ್ಯಾಪಕವಾಗಿದೆ. ರಚನಾತ್ಮಕತೆ ಹೆಚ್ಚಿಸಿಕೊಳ್ಳಿ: ದೇಶದ ಯುವಶಕ್ತಿ ತಮ್ಮ ರಚನಾತ್ಮಕತೆಯನ್ನು ಹೆಚ್ಚಿಸಿಕೊಳ್ಳಬೇಕು. ನಾಳೆಯ ದಿನ ಜಗತ್ತಿನ ಸುಪರ್‌ಹಿಟ್ ಅನಿಮೇಶನ್ ಫಿಲಂ ಹಾಗೂ ವೈರಲ್ ಗೇಮ್ ನಿಮ್ಮ ಕೊಡುಗೆಯಾಗಬಹುದು. ಭಾರತವನ್ನು ಜಾಗತಿಕ ಅನಿಮೇಶನ್ ಪವರ್ ಹೌಸ್ ಆಗಿ ಪರಿವರ್ತಿಸಲು ಇಂದೇ ಸಂಕಲ್ಪ ತೊಡುವಂತೆ ದೇಶವಾಸಿಗಳಿಗೆ ಪ್ರಧಾನಿ ಶ್ರೀ ಮೋದಿ ಕರೆ ನೀಡಿದರು.

**ಭಾರತದ ಸಂಸ್ಕೃತಿ ಪ್ರಧಾನ ಚಿತ್ರಗಳಿಗೆ ವ್ಯಾಪಕ ಬೇಡಿಕೆ:** ಇಂದಿನ 'ಸ್ಪೈಡರ್ ಮೆನ್' ಅಥವಾ 'ಟ್ರಾನ್ಸ್‌ಫಾರ್ಮರ್' ಆಗಿರಲಿ ಎರಡೂ ಸಿನೆಮಾಗಳಲ್ಲಿ ಹರಿನಾರಾಯಣ್ ರಾಜೀವ್ ರವರ ಕೊಡುಗೆಯನ್ನು ಜನ ಬಹಳ ಮೆಚ್ಚಿಕೊಂಡಿದ್ದಾರೆ. ಭಾರತದ ಅನಿಮೇಶನ್ ಸ್ಟುಡಿಯೋಗಳು ಜಗತ್ತಿನ ಖ್ಯಾತ ನಿರ್ಮಾಣ ಕಂಪೆನಿಗಳಾದ ಡಿಸ್ನಿ ಮತ್ತು ವಾರ್ನರ್ ಬ್ರದರ್ ಜತೆಗೂಡಿ ದುಡಿಯುತ್ತಿವೆ. ಭಾರತದ ಸನಾತನ ಸಂಸ್ಕೃತಿಯ ಸಂಪನ್ನತೆಯನ್ನು ಎತ್ತಿ ಹಿಡಿದಂತಹ ಚಿತ್ರಗಳನ್ನು ನಮ್ಮ ಯುವಕರು ನಿರ್ಮಿಸುತ್ತಿರುವುದು ನೆಮ್ಮದಿಯ ವಿಚಾರ, ಇಂತಹ ಚಿತ್ರಗಳನ್ನು ಇಡೀ ಜಗತ್ತು ತನ್ಮಯತೆಯಿಂದ ವೀಕ್ಷಿಸುತ್ತಿದೆ ಎಂದು ಪ್ರಧಾನಿ ಶ್ರೀ ಮೋದಿ ಹೆಮ್ಮೆ ವ್ಯಕ್ತಪಡಿಸಿದರು.



ಶಿಕಾರಿಪುರ ತಾಲ್ಲೂಕಿನಲ್ಲಿ ಮಳೆಯಿಂದ ಬೆಳೆ ಹಾನಿಗೊಳಗಾದ
ಪ್ರದೇಶಗಳಿಗೆ ಬಿಜೆಪಿ ರಾಜ್ಯಾಧ್ಯಕ್ಷರಾದ ಶ್ರೀ ಬಿ.ವೈ. ವಿಜೇಂದ್ರ ಭೇಟಿ



ಬಿಜೆಪಿ ರಾಜ್ಯ ಕಾರ್ಯಾಲಯ ಜಗನ್ನಾಥ ಭವನದಲ್ಲಿ ಸಹೋದರಿ
ನಿವೇದಿತಾ ರವರ ಜನ್ಮದಿನಾಚರಣೆ




ಬಿಜೆಪಿ ರಾಜ್ಯಾಧ್ಯಕ್ಷರಾದ ಶ್ರೀ ಬಿ.ವೈ. ವಿಜಯೇಂದ್ರರವರ ಅಧ್ಯಕ್ಷತೆಯಲ್ಲಿ ಉಡುಪಿಯ ಅಮೃತ್ ಗಾರ್ಡನ್‌ನಲ್ಲಿ ಆಯೋಜಿಸಿದ್ದ
ದಕ್ಷಿಣ ಕನ್ನಡ ಸ್ಥಳೀಯ ಸಂಸ್ಥೆಗಳ ವಿಧಾನಪರಿಷತ್ ಉಪಚುನಾವಣೆಯ ಜನಪ್ರತಿನಿಧಿಗಳ ಸಮಾವೇಶ

## ವಿಧಾನಸಭಾ ಉಪ ಚುನಾವಣೆ



ಸಂಡೂರು



ಚನ್ನಪಟ್ಟಣ



ಶಿಗ್ಗಾಂವಿ

ಸೃಷ್ಟಿ



ಕಾಲೇ ವರ್ಷತು ಪರ್ಜನ್ಯಃ

# ಕೌನ್ ಬನೇಗಾ ಕರೋಡ್ ಪತಿ ಮತ್ತು ನೀರಜ್ ಸಕ್ಸೇನಾ!!!

ಒಂದು ಹಂತದವರೆಗಿನ ಗಳಿಸಿದ ಸಂಪತ್ತು ಮತ್ತು ದೊರಕಿದ ಅಧಿಕಾರದಿಂದ ಸಂತೃಪ್ತರಾಗಿ ಬದುಕಿದರೆ ಆ ಜೀವನ ಶ್ರೇಷ್ಠ ಕಾರ್ಯವಾಗಿ ಬಿಡುತ್ತದೆ. ಅದರಲ್ಲೂ ತನಗೆ ದೊರಕಿದ ಎಲ್ಲವೂ ಇನ್ನಿತರರಿಗೂ ಸಿಗಲಿ ಎಂದು ಭಾವಿಸಿ ತನ್ನ ಅವಕಾಶವನ್ನು ಬೇರೆಯವರಿಗೋಸ್ಕರ ತ್ಯಾಗ ಮಾಡಿದರೆ ಆತ ಶ್ರೇಷ್ಠ ವ್ಯಕ್ತಿಯಾಗಿ ಬಿಡುತ್ತಾನೆ. ಅತಿಯಾದ ಆಸೆ ಬಿಟ್ಟು ತನಗೆ ಸಿಕ್ಕ ಅವಕಾಶವನ್ನು ಬೇರೆಯವರಿಗೆ ಬಿಟ್ಟು ಕೊಡುವ ಹೃದಯ ವೈಶಾಲ್ಯತೆಯನ್ನು ರೂಢಿಸಿಕೊಳ್ಳುವುದು ಶ್ರೇಷ್ಠ ವ್ಯಕ್ತಿತ್ವವಾಗಿ ಬಿಡುತ್ತದೆ.

ಭಾರತ ಚಿತ್ರರಂಗದ ಮೇರು ನಟ ಶ್ರೀ ಅಮಿತಾಭ್ ಬಚ್ಚನ್ ನಡೆಸಿಕೊಡುವ 'ಕೌನ್ ಬನೇಗಾ ಕರೋಡ್ ಪತಿ' ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಪ್ರೊ. ನೀರಜ್ ಸಕ್ಸೇನಾ ಎಂಬ ವ್ಯಕ್ತಿ ತಾನು ಹಣ ಗಳಿಸಬಹುದಾದ ಅವಕಾಶವನ್ನೂ ತ್ಯಜಿಸಿ ಸಮಾಜಕ್ಕೆ ಒಂದು ಜೀವನ ಪಾಠವನ್ನೂ ಬಿಟ್ಟು ಹೋದ ಘಟನೆ ಎಲ್ಲರಿಗೂ ಪ್ರೇರಣೀಯ ಸಂಗತಿ. ಇವರು ಒಬ್ಬ ಜ್ಞಾನಿ, ಪಿ.ಹೆಚ್‌ಡಿಯನ್ನು ಮಾಡಿದ್ದಾರೆ ಅಲ್ಲದೆ ಕೋಲ್ಕತ್ತಾದ ವಿಶ್ವವಿದ್ಯಾಲಯದ ಕುಲಪತಿ. ಅಷ್ಟೆ ಅಲ್ಲ ಡಾ. ಎ.ಪಿ.ಜೆ ಅಬ್ದುಲ್ ಕಲಾಂ ಅವರೊಟ್ಟಿಗೆ ಕೆಲಸ ಮಾಡಿದ ಸಾಧಕರು ಕೂಡ ಹೌದು.

ಇವರು 'ಕೌನ್ ಬನೇಗಾ ಕರೋಡ್ ಪತಿ'ಯ ಫಾಸ್ಟ್ ಫಿಂಗರ್ ಸುತ್ತಿನಲ್ಲಿ ಆಯ್ಕೆಯಾಗಿ ಹಾಟ್ ಸೀಟ್‌ನಲ್ಲಿ ಅಮಿತಾಭ್ ಎದುರು ಕುಳಿತಿದ್ದರು. ಆದರೂ ಅವರಲ್ಲಿ ಯಾವುದೇ ವಿಶೇಷವಾದ ಭಾವನೆಗಳಿರಲಿಲ್ಲ. ಕೇಳಿದ ಎಲ್ಲಾ ಪ್ರಶ್ನೆಗಳಿಗೆ ಉತ್ತರಿಸಿ 3,20,000 ಮೊತ್ತವನ್ನು ಗಳಿಸಿದ್ದರು. ಅವರು ಉತ್ತರಿಸುವ ರೀತಿ ಅವರ ಬುದ್ಧಿವಂತಿಕೆಗೆ ಹಿಡಿದ ಕೈಗನ್ನಡಿಯಾಗಿತ್ತು. ಕಾರ್ಯಕ್ರಮದ ನಿಯಮದ ಪ್ರಕಾರ ಮುಂದಿನ ಪ್ರಶ್ನೆಗಳಿಗೆ ಉತ್ತರಿಸಲು ಅವರು ಬಳಸಬಹುದಾದ ಎಲ್ಲಾ ಮೂರೂ ಲೈಫ್‌ಲೈನ್‌ಗಳೂ ಅವರ ಬಳಿ ಇತ್ತು. ಅಮಿತಾಭ್ ರವರು ಮುಂದಿನ ಪ್ರಶ್ನೆ ಕೇಳಲು ಅಣಿಯಾಗುತ್ತಾರೆ. ಆದರೆ ನೀರಜ್ ನಾನು ಆಟವನ್ನು ತ್ಯಜಿಸುತ್ತಿದ್ದೇನೆ ಎಂದು ಬಿಡುತ್ತಾರೆ. ನಿಮಗಿರುವ ಬುದ್ಧಿವಂತಿಕೆಗೆ 1 ಕೋಟಿ ಗೆಲ್ಲುವ ಅವಕಾಶವಿದೆ, ಜೊತೆಗೆ ನಿಮ್ಮ ಬಳಿ ಮೂರು ಲೈಫ್ ಲೈನ್‌ಗಳು ಬಾಕಿ ಇವೆ. ಈ ಸಂದರ್ಭದಲ್ಲಿ ಆಟ ಬಿಡುತ್ತೀನಿ ಎನ್ನುತ್ತಿದ್ದೀರಿ, ಈ ಕಾರ್ಯಕ್ರಮದ ಇತಿಹಾಸದಲ್ಲಿ ಈ ರೀತಿ ಎಂದೂ ಆಗಿಲ್ಲ, ಎಂದು ಅಮಿತಾಭ್ ತಿಳಿಸಿ ಹೇಳುತ್ತಾರೆ.

ಆಗ ನೀರಜ್ ಕೊಟ್ಟ ಉತ್ತರ ಜೀವನ ಪಾಠವಾಗಿ ಬಿಡುತ್ತದೆ. ನಾನು ಈಗಾಗಲೇ ಸಾಕಷ್ಟು ಹಣವನ್ನು ಗೆದ್ದಿದ್ದೇನೆ. ನನ್ನ ಬಳಿ ಇರುವುದು ಅಷ್ಟೇ ಸಾಕು. ಇತರ ಆಟಗಾರರು ಅವಕಾಶಕ್ಕಾಗಿ ಕಾಯುತ್ತಿದ್ದಾರೆ ಮತ್ತು ಅವರಲ್ಲಿ ನನಗಿಂತ ಕಿರಿಯರು, ನನಗಿಂತ ಹೆಚ್ಚಿನ ಹಣದ ಅವಶ್ಯಕತೆಯಿರುವವರು ಇದ್ದಾರೆ. ಅವರಿಗೂ ಅವಕಾಶ ಸಿಗಬೇಕು, ಅದಕ್ಕೆ ನಾನು ಆಟವನ್ನು ಬಿಡುತ್ತಿದ್ದೇನೆ ಎಂದು ಹೇಳುತ್ತಾರೆ. ಚಪ್ಪಾಳೆಯ ಸುರಿಮಳೆಯಾಗುತ್ತದೆ. ಎಲ್ಲರೂ ಗೌರವ ಸಮರ್ಪಣೆ ಮಾಡುತ್ತಾರೆ. ಅಮಿತಾಭ್ ಸಹ ಈ ನಡೆಯಿಂದ ನಾವು ಇಂದು ಬಹಳಷ್ಟು ಕಲಿತಿದ್ದೇವೆ, ಇಂತಹ ವ್ಯಕ್ತಿಗಳು ಸಿಗುವುದು ಅಪರೂಪ ಎಂದು ಮೆಚ್ಚುಗೆ ವ್ಯಕ್ತಪಡಿಸುತ್ತಾರೆ.

ನೀರಜ್ ನಡೆ ಸಮಾಜದ ಪ್ರತೀ ಸಂಘಟನೆಯಲ್ಲಿ ಕಾರ್ಯನಿರ್ವಹಿಸುವ ಪ್ರತೀ ನಾಯಕನಿಗೂ ಅನುಕರಣೀಯ. ಅನುಸರಿಸಿಬಿಟ್ಟರೆ ಆ ಸಂಘಟನೆಯಲ್ಲಿ ಅರ್ಹತೆಯಿದ್ದರೂ ಅವಕಾಶ ವಂಚಿತನಾದ ಎಂಬುವ ಯಾವೊಬ್ಬ ಕಾರ್ಯಕರ್ತನೂ ಇರುವುದೇ ಇಲ್ಲ. ನಮಗೆ ಬೇಕಾದ ಹುದ್ದೆ, ನಮಗೆ ಸಿಕ್ಕ ಅವಕಾಶಗಳು ಸಂಘಟನೆಯಲ್ಲಿನ ಇನ್ನಿತರ ನನ್ನ ಸಹವರ್ತಿಗಳಿಗೂ ಸಿಗಲಿ ಎಂಬ ಭಾವ ರೂಢಿಯಾಗಿಬಿಟ್ಟರೆ ಮತ್ತೊಬ್ಬ ನೀರಜ್ ಆಗಿ ಬಿಟ್ಟರೆ ಆತನಷ್ಟು ಎತ್ತರಕ್ಕೇ ಏರಿ ಬಿಡುತ್ತೇವೆ.

ಸ್ವಾರ್ಥ, ಸ್ವಹಿತಾಸಕ್ತಿಯನ್ನಷ್ಟೆ ಯೋಚಿಸಿ ಇದ್ದುದ್ದೆಲ್ಲವೂ ನನಗೇ ಇರಲಿ, ಸಿಗುವುದೆಲ್ಲವೂ ನನಗೇ ಸಿಗಲಿ ಎಂದು ಭಾವ ಮನವನ್ನು ಆವರಿಸಿಕೊಂಡು ಬಿಟ್ಟರೆ ಸಂಘಟನೆಯ ಶಕ್ತಿವರ್ಧನೆಗೆ ನಾವೇ ತಡೆಗೋಡೆಯಾದಂತಾಗುತ್ತದೆ. ನಮಗೆ ಸಿಕ್ಕ ಅವಕಾಶ, ಅಧಿಕಾರ ನನ್ನಂತ ಮತ್ತಿತರರಿಗೂ ಸಿಗಬೇಕು ಎನ್ನುವ ಭಾವ ಬಂದಲ್ಲಿ ಸಂಘಟನೆ ಮತ್ತಷ್ಟು ಗಟ್ಟಿಯಾಗಿ ಬೆಳೆದು ತನ್ನ ಸಿದ್ಧಾಂತವನ್ನು ಉಳಿಸಿಕೊಳ್ಳುವತ್ತ ಸ್ಪಷ್ಟ ದಿಕ್ಕಿನಲ್ಲಿ ಸಾಗುತ್ತದೆ. ನಮ್ಮ ಚಿಂತನೆ ನೀರಜ್ ಚಿಂತನೆಗಳಾಗಲಿ.

– ಸ್ವಯಂಭೂ

**KAMALA PATHA** Monthly in Kannada
Date of Publication : 8th of Every Month
Price : ₹ 10/- Pages : 36

RNI No.:KARKAN/2023/84034 REGISTERED NEWSPAPER UNDER No. KRNA/BGE/1173/2023-25
LICENCED TO POST WITHOUT PAYMENT - LICENCE No. PMG BG/WPP-408/2023-2025
OFFICE OF POSTING : BENGALURU PSO - 560 026 DATE OF POSTING : 10th / 15th / 20th OF EVERY MONTH

**KAMALA PATHA** – Printed and Published by **H.S. GOPINATH** on behalf of **SAMAGRA VIKASA TRUST**, Printed at **RASHTROTTHANA MUDRANALAYA,** No. 8 & 8/1, Satya Pramoda Teertha, Building, 3rd Main, 9th Cross, Chamrajpet, BENGALURU – 560 018. Published At # 7/6, 4TH Cross, CC Road, Sarvagna Nagar, Cox Town, BENGALURU – 560 005. Editor: **B. V. PRAKASH (Bidare Prakash)**